ಸಂಪುಟ: 05 ಸಂಚಿಕೆ: 107 ಪುಟಗಳು: 08 ಸೋಮವಾರ 30 ಜೂನ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833

₹5

# ಉದಯ ವಾಹಿನಿ

UV

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ನನ್ನನ್ನು ಕೊಲ್ಲಬಹುದು, ಆದರೆ ಅವರು ನನ್ನ ಆಲೋಚನೆಗಳನ್ನು ಕೊಲ್ಲಲು ಸಾಧ್ಯವಿಲ್ಲ. ಅವರು ನನ್ನ ದೇಹವನ್ನು ಪುಡಿಮಾಡಬಹುದು, ಆದರೆ ಅವರು ನನ್ನ ಚೈತನ್ಯವನ್ನು ಹತ್ತಿಕ್ಕಲು ಸಾಧ್ಯವಾಗುವುದಿಲ್ಲ.

## ಹಾಸನದ ಸರಣಿ ಹೃದಯಾಘಾತ ಬಗ್ಗೆ ಪ್ರಧಾನಿ ಮೋದಿಗೆ ತಿಳಿಸಲು ನಿರ್ಧಾರ

- ಹಾಸನದಲ್ಲಿ ಸಂಭವಿಸಿರುವ ಹೃದಯಾಘಾತದ ಸರಣಿ ಪ್ರಕರಣ.
- ಜೂ. 29ರವರೆಗಿನ ಲೆಕ್ಕಾಚಾರದ ಪ್ರಕಾರ, ಒಂದೇ ತಿಂಗಳಲ್ಲಿ 13 ಜನರ ಸಾವು

ಇಡೀ ರಾಜ್ಯವನ್ನೇ ಕಂಗೆಡಿಸಿರುವ ವಿಚಾರ

• **ಉದಯವಾಹಿನಿ, ಬೆಂಗಳೂರು**

ಹಾಸನ ಜಿಲ್ಲೆಯಲ್ಲಿ ಸಂಭವಿಸಿರುವ ಸರಣಿ ಹೃದಯಾಘಾತ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಂಸದ ಹಾಗೂ ಖ್ಯಾತ ಹೃದಯ ತಜ್ಞ ಡಾ. ಸಿ. ಮಂಜುನಾಥ್ ಅವರು, ಈ ವಿಚಾರವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಗಮನಕ್ಕೆ ತರಲು ನಿರ್ಧರಿಸಿದ್ದಾರೆ.

ಪ್ರಧಾನಿಯವರ ಭೇಟಿಗಾಗಿ ಈಗಾಗಲೇ ಅವರು ಪ್ರಧಾನಿ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಿ, ಸದ್ಯದಲ್ಲೇ ಅವರಿಗೆ ಪ್ರಧಾನಿಯವರ ಭೇಟಿಗೆ ಅವಕಾಶ ಸಿಕ್ಕುವ ಸಾಧ್ಯತೆಗಳಿವೆ. ಆ ಭೇಟಿಯಲ್ಲಿ ಹಾಸನ ಜಿಲ್ಲೆಯಲ್ಲಾಗಿರುವ ಹೃದಯಾಘಾತದ ಪ್ರಕರಣಗಳು ಹಾಗೂ ಹೃದಯಾಘಾತಕ್ಕೆ ಒಳಗಾದವರಿಗೆ ನೀಡಲಾಗುವ ತುರ್ತು ಚಿಕಿತ್ಸೆಯ ಸ್ಟೆಮಿ ಯೋಜನೆಯನ್ನು ಮತ್ತಷ್ಟು ಮೇಲ್ದರ್ಜೆಗೇರಿಸಲು, ಹಾಸನದ ಎಲ್ಲಾ ತಾಲ್ಲೂಕುಗಳು ಸೇರಿದಂತೆ ರಾಜ್ಯದ ಎಲ್ಲಾ ಆಸ್ಪತ್ರೆಗಳಲ್ಲಿ ಸ್ಟೆಮಿ ಪದ್ಧತಿಯನ್ನು ಜಾರಿಗೊಳಿಸುವ ಸಂಬಂಧ ಮಾತುಕತೆ ನಡೆಲಿದ್ದಾರೆ ಎಂದು ಮೂಲಗಳು ತಿಳಿಸಿವೆ.



**ಏನಿದು ಸ್ಟೆಮಿ ಯೋಜನೆ:** ಇದೊಂದು ಹಬ್ ಆ್ಯಂಡ್ ಸ್ಪೋಕ್ ಮಾಡೆಲ್ ಆಗಿದೆ. ಹೃದಯಾಘಾತಕ್ಕೊಳಗಾಗಿ ಬರುವ ವ್ಯಕ್ತಿಗಳಿಗೆ ತುರ್ತು ವೈದ್ಯಕೀಯ ನೆರವು ನೀಡಿ ಅವರನ್ನು ಪ್ರಾಣಾಪಾಯದಿಂದ ಪಾರು ಮಾಡಬಲ್ಲಂಥ ಚಿಕಿತ್ಸಾ ವಿಧಾನಗಳನ್ನು ಇದು ಹೊಂದಿರುತ್ತದೆ. ಸದ್ಯಕ್ಕೆ ರಾಜ್ಯದ 86 ತಾಲ್ಲೂಕು ಆಸ್ಪತ್ರೆಗಳಲ್ಲಿ ಈ ಸೌಲಭ್ಯವಿದೆ.

ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಯದೇವ ಹೃದ್ರೋಗ ಸಂಶೋಧನಾ ಸಂಸ್ಥೆಯ ಸಹಯೋಗದಲ್ಲಿ ಇದನ್ನು ರಾಜ್ಯಾದ್ಯಂತ ಜಾರಿಗೊಳಿಸಲಾಗಿದೆ.

ಇದು ಮಾಡೆಲ್ ಹಬ್‌ನಂತೆ ಕಾರ್ಯ ನಿರ್ವಹಿಸುವುದರಿಂದ ಈ ಆಸ್ಪತ್ರೆಗಳಲ್ಲಿ ಯಾವುದೇ ರೋಗಿಯು ಎದೆನೋವು ಎಂದು ಆಗಮಿಸಿದಾಗ ಅವರಿಗೆ ಮೊದಲು ಇಸಿಜಿ ಮಾಡಲಾಗುತ್ತದೆ. ಆ ಇಸಿಜಿಯ ರಿಪೋರ್ಟ್ ಅನ್ನು ಆನ್ ಲೈನ್ ಮೂಲಕ ಜಯದೇವ ವೈದ್ಯರಿಗೆ ರವಾನೆ ಮಾಡಲಾಗುತ್ತದೆ. ಅಲ್ಲಿ ತಜ್ಞ ವೈದ್ಯರು ಆ ವರದಿಯನ್ನು ಪರಿಶೀಲಿಸಿ, ಯಾವ ಚಿಕಿತ್ಸೆ ನೀಡಬೇಕು ಎಂಬುದನ್ನು ತಾಲ್ಲೂಕು ಆಸ್ಪತ್ರೆಗಳ ಸಿಬ್ಬಂದಿ ಸೂಚಿಸುತ್ತಾರೆ. ಅದು ಒಂದು ಹಂತದ ಚಿಕಿತ್ಸೆಯಾಗಿರುತ್ತದೆ. ಅಲ್ಲಿ ಆ ಚಿಕಿತ್ಸೆಯನ್ನು ನೀಡಿ ಆನಂತರ ಅವರನ್ನು ಅಲ್ಲಿಂದ ಜಯದೇವ ಆಸ್ಪತ್ರೆಗೆ ರವಾನಿಸಲಾಗುತ್ತದೆ.

**ಊಟ ಮುಗಿಸಿ ಏಳುವಾಗ ಹೃದಯಸ್ತಂಭನ, ಸಾವು:** ಇತ್ತೀಚೆಗೆ ಯುವಜನತೆಯಲ್ಲಿ ಹೆಚ್ಚಾಗಿ ಹೃದಯಾಘಾತ, ಹೃದಯಸ್ತಂಭನ ಹೆಚ್ಚುತ್ತಿರುವುದು ಆತಂಕ ಮೂಡಿಸಿದೆ. ಇದ್ದಕ್ಕಿದ್ದ ಹಾಗೆ ಎದೆನೋವು ಕಾಣಿಸಿಕೊಂಡು, ಕೆಲಹೊತ್ತಿನಲ್ಲೇ ಸಾವನ್ನಪ್ಪುತ್ತಿದ್ದಾರೆ. ಹಾಸನ ನಗರದಲ್ಲಿ ಚೇತನ್ (35) ಎನ್ನುವವರು ಮೃತರು. ಇವರು ಮೂಲತಃ ಕಿಕ್ಕೇರಿಯವರಾಗಿದ್ದು ಸತ್ಯಮಂಗಲ ಬಡಾವಣೆಯಲ್ಲಿ ಪತ್ನಿ ಮತ್ತು ಮಗು ಜೊತೆ ವಾಸವಾಗಿದ್ದರು ಅವರಿಗೆ ಈ ಸಾವು ಸಂಭವಿಸಿದೆ ಎಂದು ಹೇಳಲಾಗಿದೆ.

## ನಾ ಸತ್ತ ಮೇಲೆ ಜಿಲ್ಲಾ ಬಿಜೆಪಿ ಸರಿ ಹೋಗಬಹುದು ಎಂದ ಜಿಎಂಎಸ್

• **ಉದಯವಾಹಿನಿ, ದಾವಣಗೆರೆ**

ಬಿಜೆಪಿಯಲ್ಲಿ ನಾನು ಸತ್ತ ಮೇಲೆ ಎಲ್ಲವೂ ಸರಿ ಹೋಗಬಹುದು ಎಂದು ದಾವಣಗೆರೆ ಮಾಜಿ ಸಂಸದ ಜಿಎಂ ಸಿದ್ದೇಶ್ವರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸದ್ಯ ಬಿಜೆಪಿ ಹಿರಿಯ ಮುಖಂಡರ ಈ ಹೇಳಿಕೆಯು ಜಿಲ್ಲಾ ಹಾಗೂ ರಾಜ್ಯ ರಾಜಕಾರಣದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಇತ್ತೀಚೆಗೆ ದಾವಣಗೆರೆಯಲ್ಲಿ ಮಾತನಾಡಿದ ಸಂಸದ ಜಿಎಂ ಸಿದ್ದೇಶ್ವರ ಅವರು ಜಿಲ್ಲೆಯ ಬಿಜೆಪಿ ಬಣ ರಾಜಕೀಯದ ಮೇಲೆ ಬೇಸರ ವ್ಯಕ್ತಪಡಿಸಿದರು. ಪಕ್ಷದಲ್ಲಿ ಈ ಗೊಂದಲ ಯಾವಾಗ ಸರಿ ಹೋಗಬಹುದು ಎಂಬ ಮಾಧ್ಯಮದವರ ಪ್ರಶ್ನೆಗೆ ಈ ರೀತಿ ಉತ್ತರ ನೀಡಿದರು. ''ಪಕ್ಷದಲ್ಲಿ ಬಣ ರಾಜಕೀಯ ಇಲ್ಲ, ನಾವೇ ಒರಿಜಿನಲ್ ಬಿಜೆಪಿ. ನಾನೇನು ಕೆಜೆಪಿ ಕಟ್ಟಿಲ್ಲ, ಬ್ರಿಗೇಡ್ ಕಟ್ಟಿಲ್ಲ. ಐ ಆಯಮ್ ಪ್ಯೂರ್ ಬಿಜೆಪಿ'' ಎಂದು ಮಾಜಿ ಕೇಂದ್ರ ಸಚಿವ ಜಿಎಂ ಸಿದ್ದೇಶ್ವರ ಹೇಳಿದರು. ಲೋಕಸಭಾ ಚುನಾವಣೆಯಲ್ಲಿ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಹಣ ಪಡೆದು ಕಾಂಗ್ರೆಸ್ ಜತೆ ಒಳ ಒಪ್ಪಂದ ಮಾಡಿಕೊಂಡಿದ್ದರು ಎಂಬ ಚನ್ನಗಿರಿ ಕಾಂಗ್ರೆಸ್ ಶಾಸಕ ಬಸವರಾಜು ಶಿವಗಂಗಾ ಆರೋಪದ ವಿಚಾರವಾಗಿ ಪ್ರತಿಕ್ರಿಯಿಸಿದ ಸಿದ್ದೇಶ್ವರ, ''ರಾಜ್ಯ ಬಿಜೆಪಿ ಅಧ್ಯಕ್ಷರಿಗೆ ನಿಮ್ಮ ವರದಿ ತೋರಿಸಿ, ಏನು ಕ್ರಮ ಕೈಗೊಳ್ತಾರೆ ನೋಡೋಣ'' ಎಂದು ಕುಟುಕಿದರು.

## ಕಾಂಗ್ರೆಸ್ ಮಾಧ್ಯಮಕ್ಕೆ ಅಧ್ಯಕ್ಷರಾಗಿ ಐಶ್ವರ್ಯಾ ಮಹಾದೇವ್ ಆಯ್ಕೆ

• **ಉದಯವಾಹಿನಿ, ಬೆಂಗಳೂರು**


ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ (ಕೆಪಿಸಿಸಿ) ಸಾಮಾಜಿಕ ಜಾಲತಾಣ ವಿಭಾಗಕ್ಕೆ ಹೊಸ ಅಧ್ಯಕ್ಷರಾಗಿ ಐಶ್ವರ್ಯ ಮಹಾದೇವ್ ಅವರನ್ನು ನೇಮಕ ಮಾಡಲಾಗಿದೆ. ಐಶ್ವರ್ಯ ಮಹಾದೇವ್ ಒಂದು ಕಾಲದಲ್ಲಿ ಸಿಎಂ ಹಾಗೂ ಡಿಸಿಎಂ ಅವರ ಆಪ್ತ ಮುಖಂಡ, ಮಾಜಿ ಶಾಸಕರ ಮಗಳಾಗಿದ್ದಾರೆ. ಈ ಕುರಿತು ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ಆದೇಶ ಹೊರಡಿಸಿದೆ. ಕಾರ್ಯದರ್ಶಿಯಾದ ಕೆಸಿ ವೇಣು ಗೋಲ್ ಅವರು, ಐಶ್ವರ್ಯ ಅವರನ್ನು ತಕ್ಷಣದಿಂದ ಜಾರಿ ಬರುವಂತೆ ನೇಮಕ ಮಾಡಿದ್ದಾರೆ. ಎಐಸಿಸಿ ವಕ್ತಾರೆಯಾಗಿದ್ದ ಐಶ್ವರ್ಯ ಮಹದೇವ್ ಅವರು ಮಾಜಿ ಶಾಸಕ ಮಂಚನಹಳ್ಳಿ ಮಹಾದೇವ್ ಅವರ ಪುತ್ರಿ. 14 ವರ್ಷಗಳ ಹಿಂದೆ ಅವರು ಮೃತಪಟ್ಟಿದ್ದು, ಆ ಬಳಿಕ ಪುತ್ರಿ ಐಶ್ವರ್ಯ ಅವರು ಕ್ಷೇತ್ರ ಹಾಗೂ ಕಾಂಗ್ರೆಸ್ ಪಕ್ಷದ ವಿವಿಧ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಮೈಸೂರು ಜಿಲ್ಲೆಯ ಕೆ.ಆರ್ ನಗರದ ನಿವಾಸಿಯಾಗಿರುವ ಐಶ್ವರ್ಯ ಮಹದೇವ್, ಅತಿ ಕಿರಿಯ ವಯಸ್ಸಿನಲ್ಲೇ ಮಹಿಳಾ ಘಟಕದ ಕಾರ್ಯದರ್ಶಿ ಪಟ್ಟಕ್ಕೇರಿದ್ದರು. ಜತೆಗೆ ಕಾಂಗ್ರೆಸ್ ರಾಷ್ಟ್ರೀಯ ವಕ್ತಾರೆಯಾಗಿದ್ದರು. ವಕೀಲ ಪದವಿ ಪಡೆದಿದ್ದಾರೆ.

## ಕಾವೇರಿ ಆರತಿ ವಿಷಯಕ್ಕೆ ಕಾನೂನು ಮೂಲಕವೇ ಉತ್ತರ

• **ಉದಯವಾಹಿನಿ, ಬೆಂಗಳೂರು**

ಕಾವೇರಿ ಆರತಿ ಯೋಜನೆಗೆ ಸಾಕಷ್ಟು ವಿಘ್ನ ಮೇಲಿಂದ ಮೇಲೆ ಬಂದೊಗುತ್ತಿದೆ ಸದ್ಯ ಕಾವೇರಿ ಆರತಿ ಸಂಬಂಧ ತಾಂತ್ರಿಕ ತಜ್ಞರ ಸಲಹೆ ಹಾಗೂ ಅನುಮತಿ ಪಡೆಯಲಾಗಿದೆಯೇ ಎಂಬ ಕುರಿತು ಮಾಹಿತಿ ನೀಡುವಂತೆ ಸೂಚಿಸಿ ರಾಜ್ಯ ಸರಕಾರಕ್ಕೆ ಹೈಕೋರ್ಟ್ ನೋಟಿಸ್ ನೀಡಿದೆ. ಕಾವೇರಿ ಆರತಿಗೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ನೋಟೀಸ್‌ಗೆ ಸರ್ಕಾರ ಕಾನೂನು ಮೂಲಕವೇ ಉತ್ತರ ನೀಡಲಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು. ಕಾವೇರಿ ಆರತಿ ಹಿನ್ನೆಲೆಯಲ್ಲಿ ಹೈಕೋರ್ಟ್ ನೋಟೀಸ್ ಕೊಟ್ಟಿರುವ ಬಗ್ಗೆ ಕೇಳಿದಾಗ, ಪೂಜೆ ಪ್ರಾರ್ಥನೆ ಮಾಡಲು ಯಾರೂ ಬೇಡ ಎನ್ನುವುದಿಲ್ಲ, ಕೆಲವರಿಗೆ ಆತಂಕ ಇದೆ. ಆದನ್ನು ಸರ್ಕಾರ ನಿವಾರಣೆ ಮಾಡಲಿದೆ. ಆರತಿ ಮಾಡಲು ಯಾರೂ ಅನುಮತಿ ಕೇಳುತ್ತಿಲ್ಲ. ಅಲ್ಲಿ ಪ್ರತಿನಿತ್ಯ ಆರತಿ ನಡೆಯುತ್ತಿದೆ ಎಂದು ಹೇಳಿದರು. ಆರ್.ಅಶೋಕ್ ಅವರ ಹೇಳಿಕೆ ಬಗ್ಗೆ ಕೇಳಿದಾಗ, ಅಶೋಕ್ ಅವರು ಜ್ಯೋತಿಷ್ಯ ಹೇಳಲು ಆರಂಭಿಸಿದ್ದಾರಾ ಅವರು ಜ್ಯೋತಿಷ್ಯ ಕಲಿತಿದ್ದರೆ ನನಗೂ ಸಮಯ ಕೊಡಿಸಿ. ನಾನು ಹೋಗಿ ಭವಿಷ್ಯ ಕೇಳುತ್ತೇನೆ ಎಂದು ಛೇಡಿಸಿದರು.

# ಅಯ್ಯೋ... ಜಗನ್ನಾಥ



ಜಿಲ್ಲಾಧಿಕಾರಿ, SP ವರ್ಗಾವಣೆ, ಪೊಲೀಸರ ಅಮಾನತು

ಭಾರೀ ಅನಾಹುತ

## ಪುರಿ ಜಗನ್ನಾಥ ರಥ ಯಾತ್ರೆ ಗುಂಡಿಚಾ ದೇವಾಲಯದ ಬಳಿ ಕಾಲ್ತುಳಿತ

ಕಾಲ್ತುಳಿತಕ್ಕೆ ಮೂವರು ಬಲಿ

• **ಉದಯವಾಹಿನಿ, ಪುರಿ**

ಒಡಿಶಾದ ಜಗದ್ವಿಖ್ಯಾತ ಪುರಿ ಜಗನ್ನಾಥ ದೇಗುಲದ ಐತಿಹಾಸಿಕ ರಥಯಾತ್ರೆ ವೇಳೆ ಸಂಭವಿಸಿದ ಕಾಲ್ತುಳಿತ ದುರಂತದಲ್ಲಿ ಮೂವರು ಸಾವನ್ನಪ್ಪಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಒಡಿಶಾ ಸರ್ಕಾರ ಕಠಿಣ ಕ್ರಮ ಕೈಗೊಂಡಿದೆ. ಒಡಿಶಾದ ಪುರಿ ಜಗನ್ನಾಥ ರಥಯಾತ್ರೆ ವೇಳೆ ಕಾಲ್ತುಳಿತ ಉಂಟಾಗಿದ್ದು, ಮೂವರು ಸಾವನ್ನಪ್ಪಿರುವ ಘಟನೆ ವರದಿಯಾಗಿದೆ. 30ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಜಗನ್ನಾಥ, ಬಲಭದ್ರ ಮತ್ತು ಸುಭದ್ರ ದೇವಿಯ ವಿಗ್ರಹಗಳನ್ನು ಹೊತ್ತ ಮೂರು ರಥಗಳು ಯಾತ್ರೆ ಪ್ರಾರಂಭವಾಗಿವೆ. ಜಗನ್ನಾಥ ದೇವಸ್ಥಾನದಿಂದ ಸುಮಾರು ಮೂರು ಕಿಲೋಮೀಟರ್ ದೂರದಲ್ಲಿರುವ ಶ್ರೀ ಗುಂಡಿಚಾ ದೇವಸ್ಥಾನದ ಬಳಿ ಇದ್ದಾಗ ಈ ಘಟನೆ ಸಂಭವಿಸಿದೆ.

ಪವಿತ್ರ ರಥಗಳು ಗುಂಡಿಚಾ ದೇವಸ್ಥಾನದಲ್ಲಿ ಇದ್ದವು ಮತ್ತು ದರ್ಶನಕ್ಕಾಗಿ ದೊಡ್ಡ ಜನಸಮೂಹ ಜಮಾಯಿಸಿತ್ತು. ಜನಸಂದಣಿ ಹೆಚ್ಚಾಗುತ್ತಿದ್ದಂತೆ, ಕೆಲವರು ಬಿದ್ದು ಕಾಲ್ತುಳಿತ ಪ್ರಾರಂಭವಾಯಿತು. ಮೂವರು ಸ್ಥಳದಲ್ಲೇ ಸಾವನ್ನಪ್ಪಿದರು. ಇವರಲ್ಲಿ ಇಬ್ಬರು ಮಹಿಳೆಯರು, ಪ್ರಭಾತಿ ದಾಸ್ ಮತ್ತು ಬಸಂತಿ ಸಾಹು ಮತ್ತು 70 ವರ್ಷದ ಪ್ರೇಮಕಾಂತ್ ಮೊಹಂತಿ ಸೇರಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೃತಪಟ್ಟ ಮೂವರೂ ಖುರ್ದಾ ಜಿಲ್ಲೆಯವರಾಗಿದ್ದು, ರಥಯಾತ್ರೆಗಾಗಿ ಪುರಿಗೆ ಬಂದಿದ್ದರು ಎಂದು ತಿಳಿದುಬಂದಿದೆ. ಮೃತರ ಶವಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದ್ದು, ಪರೀಕ್ಷೆಯಿಂದ ಸಾವಿಗೆ ನಿಖರವಾದ ಕಾರಣ ತಿಳಿದುಬರುತ್ತದೆ ಎಂದು ಪುರಿ ಜಿಲ್ಲಾಧಿಕಾರಿ ಸಿದ್ಧಾರ್ಥ್ ಶಂಕರ್ ಸ್ವೈನ್ ಹೇಳಿದ್ದಾರೆ.

**ಅಧಿಕಾರಿಗಳ ತಲೆದಂಡ:** ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಒಡಿಶಾ ಸರ್ಕಾರ ಅಧಿಕಾರಿಗಳ ತಲೆದಂಡ ಮಾಡಿದೆ.

ಪುರಿ ಜಿಲ್ಲಾಧಿಕಾರಿ ಮತ್ತು ಪೊಲೀಸ್ ವರಿಷ್ಠಾಧಿಕಾರಿಯನ್ನು ವರ್ಗಾವಣೆ ಮಾಡಿದೆ. ಮಾತ್ರವಲ್ಲದೇ ಹಲವು ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿದೆ.

ಈ ಬಗ್ಗೆ ಮಾಹಿತಿ ನೀಡಿರುವ ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ, ದೇವಾಲಯದ ಕಾಲ್ತುಳಿತದ ನಂತರ ಪುರಿ ಕಲೆಕ್ಟರ್ ಸಿದ್ಧಾರ್ಥ್ ಎಸ್ ಸ್ವೈನ್ ಮತ್ತು ಎಸ್ಪಿ ಬಿನಿತ್ ಅಗರ್ವಾಲ್ ಅವರನ್ನು ವರ್ಗಾವಣೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಕಾಲ್ತುಳಿತದ ಹಿನ್ನೆಲೆ ಪುರಿ ಡಿಸಿಪಿ ಬಿಷ್ಣು ಚರಣ್ ಪತಿ ಮತ್ತು ಪೊಲೀಸ್ ಕಮಾಂಡೆಂಟ್ ಅಜಯ್ ಪಧಿ ಅವರನ್ನು ಅಮಾನತುಗೊಳಿಸಲಾಗಿದೆ ಎಂದು ಸಿಎಂ ತಿಳಿಸಿದ್ದಾರೆ.

**ಬಿಸಿಲಿನ ಬೇಗೆ:** ರಥಯಾತ್ರೆಯ ಸಮಯದಲ್ಲಿ ಜನದಟ್ಟಣೆಯಿಂದಾಗಿ ಹಲವಾರು ಜನರಿಗೆ ಸಣ್ಣಪುಟ್ಟ ಗಾಯಗಳು, ವಾಂತಿ ಮತ್ತು ಮೂರ್ಛೆ ತಪ್ಪುವಿಕೆ ಘಟಿಸಿದೆ ಎಂದು ಪುರಿ ಜಿಲ್ಲಾ ಮುಖ್ಯ ವೈದ್ಯಾಧಿಕಾರಿ ಡಾ. ಕಿಶೋರ್ ಸತಪತಿ ತಿಳಿಸಿದ್ದಾರೆ. ಭಕ್ತರು ಅನಾರೋಗ್ಯಕ್ಕೆ ಒಳಗಾಗಲು ಬಿಸಿಲಿನ ಬೇಗೆ ಮತ್ತು ಹೆಚ್ಚಿನ ಆರ್ದ್ರತೆಯೇ ಕಾರಣ ಎಂದು ಒಡಿಶಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಮುಖೇಶ್ ಮಹಾಲಿಂಗ್ ತಿಳಿಸಿದ್ದಾರೆ. ಪುರಿಯ ಜಿಲ್ಲಾ ಕೇಂದ್ರ ಆಸ್ಪತ್ರೆಯಲ್ಲಿ ಸುಮಾರು 70 ಜನರು ಚಿಕಿತ್ಸೆ ಪಡೆಯುತ್ತಿದ್ದು, 9 ಜನರ ಸ್ಥಿತಿ ಗಂಭೀರವಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪುರಿ ಜಗನ್ನಾಥ ಕ್ಷೇತ್ರದ ಮೂರು ಭವ್ಯ ರಥಗಳಲ್ಲಿ ಒಂದಾದ ತಾಳಧ್ವಜ ರಥವನ್ನು ಎಳೆಯುವ ಸಂದರ್ಭದಲ್ಲಿ ಜನದಟ್ಟಣೆಯಿಂದಾಗಿ ಕಾಲ್ತುಳಿತದಂತಹ ಪರಿಸ್ಥಿತಿ ಉಂಟಾಗಿ, 500ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾಗಿ ಎರಡು ದಿನಗಳ ಹಿಂದೆ ವರದಿಯಾಗಿತ್ತು. ಇದೀಗ ಅಸ್ವಸ್ಥರಾದವರ ಸಂಖ್ಯೆಯಲ್ಲಿ ಏರಿಕೆಯಾಗಿದ್ದು, ಘಟನೆಗೆ ನಿಖರ ಕಾರಣ ಏನು ಎಂಬುದು ಬಹಿರಂಗವಾಗಿದೆ.

1. 80 ವರ್ಷದ ಪ್ರೇಮಕಾಂತ ಮೊಹಂತಿ, 36 ವರ್ಷದ ಬಸಂತಿ ಸಾಹೂ ಮತ್ತು 42 ವರ್ಷದ ಪ್ರಭಾತಿ ದಾಸ್ ಸೇರಿದಂತೆ ಮೂವರು ಮೃತ
2. ಭಗವಾನ್ ಬಲಭದ್ರನ ತಲಧ್ವಜ ರಥವು ತಿರುವು ಪಡೆಯುವಾಗ ಸಿಕ್ಕಿಹಾಕಿಕೊಂಡ ಪರಿಣಾಮ, ಇತರ ಎರಡು ರಥಗಳು ಮುಂದೆ ಸಾಗಲು ಅಡಚಣೆಯಾದ ಕಾರಣ ಕಾಲ್ತುಳಿತ
3. ಬಿಸಿಲಿನ ತಾಪಮಾನ ಮತ್ತು ಜನದಟ್ಟಣೆ ಕಾರಣವಾಗಿ ಅನಾರೋಗ್ಯಕ್ಕೊಳಗಾದ 625 ಮಂದಿ ಮತ್ತು 750 ಭಕ್ತರನ್ನು ಆಸ್ಪತ್ರೆಗೆ ದಾಖಲು

### ಮೃತರ ಕುಟುಂಬಸ್ಥರಿಗೆ 25 ಲಕ್ಷ ಪರಿಹಾರ

ಮೃತರ ಹತ್ತಿರದ ಸಂಬಂಧಿಕರಿಗೆ ಒಡಿಶಾ ಸರ್ಕಾರ ತಲಾ 25 ಲಕ್ಷ ರೂಪಾಯಿಗಳ ಆರ್ಥಿಕ ನೆರವು ನೀಡಲಿದೆ ಎಂದು ಘೋಷಿಸಲಾಗಿದೆ. ಆಡಳಿತ ಇಲಾಖೆ ಹೊರಡಿಸಿದ ಮತ್ತೊಂದು ಅಧಿಸೂಚನೆಯಲ್ಲಿ ಹಿರಿಯ ಅಧಿಕಾರಿ ಅರವಿಂದ್ ಅಗರ್ವಾಲ್ ಅವರನ್ನು ರಥಯಾತ್ರೆಯ ಒಟ್ಟಾರೆ ಮೇಲ್ವಿಚಾರಣೆಯ ಉಸ್ತುವಾರಿಯಾಗಿ ನೇಮಿಸಲಾಗಿದೆ. ಅಗರ್ವಾಲ್ ಅವರಿಗೆ ರಥಯಾತ್ರೆಯನ್ನು ನಿರ್ವಹಿಸಿದ ಅನುಭವವಿದೆ ಎಂದು ಹೇಳಿದೆ. ಪ್ರಸ್ತುತ ಅವರು ಉನ್ನತ ಶಿಕ್ಷಣ ಇಲಾಖೆಯಲ್ಲಿ ಆಯುಕ್ತ ಹಾಗು ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಕ್ರೀಡಾ ಮತ್ತು ಯುವಜನ ವ್ಯವಹಾರಗಳ ಇಲಾಖೆಯ ವಿಶೇಷ ಕಾರ್ಯದರ್ಶಿಯ ಹೆಚ್ಚುವರಿ ಜವಾಬ್ದಾರಿ ವಹಿಸಿಕೊಂಡಿದ್ದಾರೆ.

### ರಥಯಾತ್ರೆಗೆ ಭಾರೀ ಜನಸಾಗರ

ರಥ ಯಾತ್ರೆ ವೇಳೆ ಜನದಟ್ಟಣೆ ಹಾಗೂ ಬಿಸಿಲಿನಿಂದ ಭಕ್ತರು ತತ್ತರಿಸಿದ್ದಾರೆ. ರಥಯಾತ್ರೆಯು ಜನದಟ್ಟಣೆ ಮತ್ತು ವಿಪರೀತ ಹವಾಮಾನ ಪರಿಸ್ಥಿತಿಗಳಿಂದಾಗಿ ನಿರಂತರ ಸಮಸ್ಯೆಗಳನ್ನು ಎದುರಿಸುತ್ತಿದೆ. ಜೂನ್ 27ರ ಶುಕ್ರವಾರದಂದು, ಸುಮಾರು 625 ಜನರು ಅನಾರೋಗ್ಯಕ್ಕೆ ಒಳಗಾದದ್ದು, ವಿಪರೀತ ಬಿಸಿಲು ಮತ್ತು ಜನದಟ್ಟಣೆಯಿಂದಾಗಿ ಅನೇಕರನ್ನು ಆಸ್ಪತ್ರೆಗಳಿಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಶುಕ್ರವಾರದಂದು ಭಗವಾನ್ ಬಲಭದ್ರನ ತಲಧ್ವಜ ರಥವು ಒಂದು ಗಂಟೆಗೂ ಹೆಚ್ಚು ಕಾಲ ಸಿಲುಕಿಕೊಂಡಿದ್ದ ಬಾಲಗಾಂಡಿ ಪ್ರದೇಶದ ಬಳಿ ಅನೇಕ ಭಕ್ತರು ಗಾಯಗೊಂಡಿದ್ದಾರೆ. ಶನಿವಾರ, ರಥಯಾತ್ರೆಯ ಸಮಯದಲ್ಲಿ ಆಯಾಸ ಮತ್ತು ಜನಸಂದಣಿಯ ಒತ್ತಡದಿಂದಾಗಿ ಸುಮಾರು 750 ಭಕ್ತರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದೆ ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

### ಕಾಲ್ತುಳಿತಕ್ಕೆ ಕಾರಣ ಏನು

ಶುಕ್ರವಾರ ಸಂಜೆಯ ವೇಳೆಗೆ ಮೂರು ರಥಗಳು ಗುಂಡಿಚಾ ದೇವಸ್ಥಾನವನ್ನು ತಲುಪಬೇಕಿತ್ತು. ಆದರೆ ಬಲಭದ್ರನ ತಾಳದ್ವಾಜ ರಥವು ತಿರುವು ಪಡೆಯುವಾಗ ಸಿಕ್ಕಿಹಾಕಿಕೊಂಡ ಕಾರಣ, ಉಳಿದ ಎರಡು ರಥಗಳು ಮುಂದುವರಿಯದಂತೆ ತಡೆಯುವ ಮೂಲಕ ಅವುಗಳನ್ನು ಮಧ್ಯದಲ್ಲೇ ನಿಲ್ಲಿಸಬೇಕಾಯತು. ದೇವರುಗಳಿದ್ದ ರಥಗಳನ್ನು ರಾತ್ರಿಯಿಡೀ ಬಿಗಿ ಭದ್ರತೆಯ ನಡುವೆ ರಸ್ತೆಯಲ್ಲಿಯೇ ಇರಿಸಲಾಗಿತ್ತು.



## ಬುಕರ್ ವಿಜೇತೆ ಬಾನು ಮುಷ್ತಾಕ್ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷೆ

■ ಬಳ್ಳಾರಿಯಲ್ಲಿ ಸಾಹಿತ್ಯ ಸಮ್ಮೇಳನ ■ ಇಂಗ್ಲಿಷ್ ಬಾರದ ಬಗ್ಗೆ ಕೀಳರಿಮೆ ಬೇಡ ಬಾನು ಮುಷ್ತಾಕ್

• **ಉದಯವಾಹಿನಿ, ಬೆಂಗಳೂರು**

ಡಿಸೆಂಬರ್ ತಿಂಗಳಲ್ಲಿ ಬಳ್ಳಾರಿಯಲ್ಲಿ ಜರುಗಲಿರುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಹಿರಿಯ ಲೇಖಕಿ ಹಾಗೂ ಬುಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರ ಹೆಸರನ್ನು ಘೋಷಿಸಲಾಗಿದೆ.

ಬಳ್ಳಾರಿಯಲ್ಲಿನ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಕಸಾಪದ ರಾಜ್ಯಾಧ್ಯಕ್ಷರಾದ ಮಹೇಶ್ ಜೋಷಿ ಅವರು ಮಾತನಾಡಿ ಬಳ್ಳಾರಿಯಲ್ಲಿ ಜರುಗಲಿರುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪಟ್ಟಕ್ಕೆ ಸರ್ವಾಧ್ಯಕ್ಷರಾಗಿ ಹಿರಿಯ ಲೇಖಕಿ ಹಾಗೂ ಬುಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರ ಹೆಸರನ್ನು ಅಂತಿಮಗೊಳಿಸಲಾಗಿದೆ ಎಂದರು.

### ಭಾಷೆ ಬಗ್ಗೆ ನಮಗೆ ಗೌರವ

ಜೂ.29ರಂದು ಬಳ್ಳಾರಿಯ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಸರ್ವಾನುಮತದಿಂದ ಬಾನು ಮುಷ್ತಾಕ್ ಅವರ ಹೆಸರನ್ನು ಅಂತಿಮಗೊಳಿಸಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿಯವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ನಮ್ಮ ಭಾಷೆ ಬಗ್ಗೆ ನಮಗೆ ಗೌರವ ಇರಬೇಕು ಹಾಗೂ ಹಿಡಿತ ಇರಬೇಕು. ಆದರೆ, ಕನ್ನಡದವರಾಗಿ ಈಗಿನ ಮಕ್ಕಳಿಗೆ ಕನ್ನಡವೇ ಸರಿಯಾಗಿ ಬಾರದಿರುವುದು ಇಂದಿನ ದುರಂತ ಎಂದು ಬೂಕರ್ ಪ್ರಶಸ್ತಿ ವಿಜೇತ ಕನ್ನಡ ಬರಹಗಾರ್ತಿ ಬಾನು ಮುಷ್ತಾಕ್ ವಿಷಾದ ವ್ಯಕ್ತಪಡಿಸಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಹಾಗೂ ಬೆಂಗಳೂರು ಪ್ರೆಸ್‌ಕ್ಲಬ್ ವತಿಯಿಂದ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್ ಹಾಗೂ ದೀಪಾ ಭಾಸ್ತಿ ಅವರೊಂದಿಗೆ ಪ್ರೆಸ್‌ಕ್ಲಬ್‌ನಲ್ಲಿ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಬುಧವಾರ ಅವರು ಮಾತನಾಡಿದರು.



### ನಿಮ್ಮ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸುತ್ತದೆ

'ಧಿ' ನನ್ನ ಬದುಕಿನಲ್ಲಿ ನನ್ನದೇ ಆದ ಅಸ್ತಿತ್ವ ಕಂಡುಕೊಳ್ಳಬೇಕು ಎಂಬ ಉದ್ದೇಶದಿಂದ ಚಿಕ್ಕ ವಯಸ್ಸಿನಲ್ಲಿಯೇ ನಾನು ನನ್ನ ಸಮಾಜದೊಳಗಿನ ಸ್ವಾತಂತ್ರ್ಯಕ್ಕಾಗಿ ಹೋರಾಟ ಆರಂಭಿಸಿದೆ. ಶಿಕ್ಷಣ ಪಡೆದ ನಂತರ ವಕೀಲೆಯಾಗಿ, ಶಿಕ್ಷಕಿಯಾಗಿ, ಹೋರಾಟಗಾರ್ತಿಯಾಗಿ ನನ್ನನ್ನು ನಾನು ಗುರುತಿಸಿಕೊಂಡು ನನ್ನ ಅನುಭವಗಳನ್ನು ಹಾಗೂ ಕಣ್ಣಾರೆ ಕಂಡ ಘಟನೆಗಳಿಗೆ ಸಾಹಿತ್ಯದ ರೂಪ ಕೊಡಲು ಆರಂಭಿಸಿ ಇಂದು ಅಂತಾರಾಷ್ಟ್ರೀಯ ಮಟ್ಟದ ಬೂಕರ್ ಪ್ರಶಸ್ತಿ ಪಡೆಯುವುದರೊಂದಿಗೆ ಜಗತ್ತಿನ ಕಣ್ಣಿಗೆ ಬಿದ್ದಿದ್ದೇನೆ, ಎಂದು ಹರ್ಷ ವ್ಯಕ್ತಪಡಿಸಿದರು. 'ನನ್ನ ಬರಹದ ಜತೆಗೆ ನನ್ನ ಬದುಕು ನನ್ನೊಳಗೆ ಚರ್ಚೆ ಹುಟ್ಟು ಹಾಕುತ್ತಿದ್ದವು. ಬರವಣಿಗೆಯಲ್ಲಿ ಮರೆಮಾಚುವುದು ಏನೂ ಇಲ್ಲ, ಎಲ್ಲವೂ ತೆರೆದಿಟ್ಟ ಪುಸ್ತಕ. ಭವಿಷ್ಯದಲ್ಲಿ ಕಾದಂಬರಿ ಸೇರಿದಂತೆ ಆತ್ಮಕಥನವನ್ನೂ ಬರೆಯುವ ಉದ್ದೇಶವಿದ್ದು, ಇಲ್ಲಿಯವರೆಗೆ ಯಾವುದೇ ಪ್ರಶಸ್ತಿ ಅಥವಾ ಪುರಸ್ಕಾರಗಳಿಗಾಗಿ ನಾನು ಬರೆದಿಲ್ಲ, ಸಾಹಿತ್ಯ - ಹೋರಾಟ- ವಕೀಲ ವೃತ್ತಿ ಒಳಗೊಂಡಂತೆ 51 ವರ್ಷಗಳ ಸುಖಿ ದಾಂಪತ್ಯವನ್ನು ಅನುಭವಿಸಿದ್ದೇನೆ ಎಂದು ಹೇಳಿದರು.

**ನನ್ನ ನಾಡಿನ ಭಾಷೆ ಕನ್ನಡ:** ''ನನ್ನ ಮಾತೃಭಾಷೆ ಉರ್ದು, ನನ್ನ ನಾಡಿನ ಭಾಷೆ ಕನ್ನಡ. ನನಗೂ ಸಹ ಅಷ್ಟಾಗಿ ಇಂಗ್ಲಿಷ್ ಬರುವುದಿಲ್ಲ, ನಾನು ಪ್ರಾಥಮಿಕ ಶಾಲೆಯವರೆಗೆ ಓದಿದ್ದು ಕನ್ನಡ ಮಾಧ್ಯಮದಲ್ಲಿಯೇ. ಕನ್ನಡದಧಿಲ್ಲಿಯೇ ಕಥೆ ಬರೆದಿದ್ದೇನೆ. ಅದಕ್ಕೆ ಬರಹಗಾರ್ತಿ ದೀಪಾ ಭಾಸ್ತಿ ಇಂಗ್ಲಿಷ್‌ಗೆ ಅನುವಾದ ಮಾಡಿದ್ದಾರೆ. ನನಗೆ ಸರಿಯಾಗಿ ಇಂಗ್ಲಿಷ್ ಬರುವುದಿಲ್ಲಎಂಬ ಕೀಳರಿಮೆ ನನ್ನನ್ನು ಇಂದಿಗೂ ಕಾಡುತ್ತಿಲ್ಲ.

ನಿಮಗೆ ಬರುವ ಭಾಷೆ ನಿಮ್ಮ ಬಲ. ನಾವು ಮಾಡುವ ಕೆಲಸದಲ್ಲಿ ನಮ್ಮನ್ನು ನಾವು ಗುರುತಿಸಿಕೊಳ್ಳಬೇಕು ಎಂದರು. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಮಕ್ಕಳು ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಕಲಿಯುತ್ತಿದ್ದಾರೆ. ತಾವು ಕನ್ನಡ ಸಾಹಿತ್ಯದಲ್ಲಿ ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ಪಡೆದು ಸಾಧನೆ ಮಾಡಿದ್ದೀರಿ.

ಮಕ್ಕಳಿಗೆ ತಾವು ಸ್ಫೂರ್ತಿ ತುಂಬಬೇಕು ಎಂದು ಸಭಿಕರೊಬ್ಬರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಬಾನು ಮುಷ್ತಾಕ್, 'ಧಿ' ಅವರವರ ಭಾಷೆ ಅವರದ್ದು. ನನಗೆ ಬೂಕರ್ ಪ್ರಶಸ್ತಿ ಬಂದಾಗ ಅಂತಾರಾಷ್ಟ್ರೀಯ ವೇದಿಕೆಗಳು ಹಾಗೂ ಮಾಧ್ಯಮಗಳಲ್ಲಿನಾನು ಭಾಷಾಂತರಕಾರರನ್ನು ಬಳಸಿಕೊಂಡು ಸಂವಹನ ನಡೆಸಿದ್ದು, ಇದರ ಬಗ್ಗೆ ಹೆಮ್ಮೆ ಇದೆ, ಎಂದರು.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹9,742/Gram24ct ₹8,930/Gram22ct ಬೆಳ್ಳಿ: ₹107.80/Gram

## ಭಜನ-ಪ್ರವಚನ- ಸಂಕೀರ್ತನ

• ಉದಯವಾಹಿನಿ, ಬೆಂಗಳೂರು

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಶ್ರೀ ವ್ಯಾಸರಾಜ ಮಠ (ಸೋಸಲೆ) ಇವುಗಳ ಸಂಯುಕ್ತಾಶ್ರಯದಲ್ಲಿ ಜುಲೈ 1 ರಿಂದ 4ರ ವರೆಗೆ ಧಾರ್ಮಿಕ/ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅವುಗಳ ವಿವರಗಳು ಈ ರೀತಿ ಇವೆ ಭಜನಾ ಕಾರ್ಯಕ್ರಮ (ಪ್ರತಿದಿನ ಸಂಜೆ 6 ರಿಂದ 7) ಜುಲೈ 1, ಮಂಗಳವಾರ : ಮತ್ತಿಕೆರೆಯ ಶ್ರೀ ಲಕ್ಷ್ಮೀ ವೆಂಕಟೇಶ್ವರ ಭಜನಾ ಮಂಡಳಿ, ಜುಲೈ 2, ಬುಧವಾರ :ರಾಜಾಜಿನಗರದ ಅಂಭ್ರಣಿ ಭಜನಾ ಮಂಡಳಿ, ಜುಲೈ 3, ಗುರುವಾರ :ರಾಜಾಜಿನಗರದ ರುಕ್ಮಿಣಿ ಮಹಿಳಾ ಸಂಘ. ಧಾರ್ಮಿಕ ಪ್ರವಚನ ಜುಲೈ 1 ರಿಂದ 3ರ ವರೆಗೆ (ಪ್ರತಿದಿನ ಸಂಜೆ 7 ರಿಂದ 8) ಪ್ರವಚನಕಾರರು ಶ್ರೀ ದ್ವೈಪಾಯನಾಚಾರ್, ವಿಷಯ ಶ್ರೀ ಜಗನ್ನಾಥದಾಸರ ವಿರಚಿತ 'ಹರಿಕಥಾಮೃತಸಾರ. ಹರಿನಾಮ ಸಂಕೀರ್ತನೆ ಜುಲೈ 4, ಶುಕ್ರವಾರ (ಸಂಜೆ 6-30 ರಿಂದ 8-00) ಗಾಯನ ಕು|| ರಶ್ಮಿ ನಟರಾಜ್, ಕು. ರಕ್ಷಾ ನಟರಾಜ್, ಪಿಟೀಲು ಶ್ರೀ ಎಂ.ಎನ್. ಸತ್ಯನಾರಾಯಣ, ಮೃದಂಗ : ಶ್ರೀ ಶ್ರೀನಿವಾಸ್ ಅನಂತರಾಮಯ್ಯ. ಕಾರ್ಯಕ್ರಮ ನಡೆಯುವ ಸ್ಥಳ ಶ್ರೀ ವ್ಯಾಸರಾಜ ಮಠ (ಸೋಸಲೆ) 1160, 5ನೇ ಮುಖ್ಯರಸ್ತೆ, 'ಎ' ಬ್ಲಾಕ್, ರಾಜಾಜಿನಗರ 2ನೇ ಹಂತ, ಸುಬ್ರಹ್ಮಣ್ಯನಗರ, ಬೆಂಗಳೂರು-560010


ಉದಯವಾಹಿನಿ ಚಿತ್ರ

## ಆರೋಪಿ ಕರೆತರುತ್ತಿದ್ದಾಗ ಅಪಘಾತ, ಸಬ್ ಇನ್‌ಸ್ಪೆಕ್ಟರ್ ಸಾವು

• ಉದಯವಾಹಿನಿ, ಬೆಂಗಳೂರು

ಗಾಂಜಾ ಪ್ರಕರಣದಲ್ಲಿ ಆರೋಪಿಯನ್ನು ವಶಕ್ಕೆ ಪಡೆದು ಕರೆತರುವಾಗ ಸಂಭವಿಸಿದ ಅಪಘಾತದಲ್ಲಿ ಗಾಯಗೊಂಡಿದ್ದ ತಲ್ಲಘಟ್ಟಪುರ ಪೊಲೀಸ್ ಠಾಣೆ ಸಬ್‌ಇನ್‌ಸ್ಪೆಕ್ಟರ್ ಮೆಹಬೂಬ್ ಗುಡ್ಡಳ್ಳಿ ಚಿಕಿತ್ಸೆ ಫಲಿಸದೆ ಭಾನುವಾರ ಮೃತಪಟ್ಟಿದ್ದಾರೆ. ಗಾಂಜಾ ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪಿಯನ್ನು ಅತ್ತಿಬೆಲೆಯಲ್ಲಿ ಬಂಧಿಸಿ ಕಾರಿನಲ್ಲಿ ಕರೆತರುವಾಗ ಸೂರ್ಯಸಿಟಿ ಬಳಿ ಕಾರು ಪಂಕ್ಚರ್ ಆಗಿದೆ. ನಂತರ ಚಾಲಕ ರಸ್ತೆಪಕ್ಕ ನಿಲ್ಲಿಸಿ ಚಕ್ರ ಬದಲಾಯಿಸುವ ವೇಳೆ ಎಸ್‌ಐ ಹೊರಗೆ ಇಳಿದು ಫೋನ್‌ನಲ್ಲಿ ಮಾತನಾಡುತ್ತಾ ನಿಂತಿದ್ದಾಗ ಹಿಂದಿನಿಂದ ಬಂದ ಲಾರಿ ಡಿಕ್ಕಿ ಹೊಡೆದಿದೆ. ಈ ಸಂದರ್ಭದಲ್ಲಿ ಕಾರಿನಲ್ಲಿದ್ದ ಇಬ್ಬರು ಆರೋಪಿಗಳು ಅಲ್ಲಿಂದ ಪರಾರಿಯಾಗಿದ್ದಾರೆ. ತೀವ್ರವಾಗಿ ಗಾಯಗೊಂಡಿದ್ದ ಮೆಹಬೂಬ್ ಗುಡ್ಡಳ್ಳಿ ಅವರನ್ನು ಸ್ಥಳೀಯರ ನೆರವಿನಿಂದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಿಸದೆ ಭಾನುವಾರ ಮೃತಪಟ್ಟಿದ್ದಾರೆ.

## ಬ್ರಾಂಡೆಡ್ ಹೆಸರಿನಲ್ಲಿ ನಕಲಿ ಜೀನ್ಸ್ ತಯಾರಿಸುತ್ತಿದ್ದ ಅಡ್ಡೆ; ಪೊಲೀಸರ ದಾಳಿ

• ಉದಯವಾಹಿನಿ, ಬೆಂಗಳೂರು

ಪ್ರಸಿದ್ಧ ಬ್ರಾಂಡೆಡ್ ಕಂಪನಿಗಳ ಹೆಸರಿನಲ್ಲಿ ನಕಲಿ ಜೀನ್ಸ್ ಉಡುಪುಗಳ ತಯಾರಿಕೆ ಮಾಡುತ್ತಿದ್ದ ಕಾರ್ಖಾನೆವೊಂದರ ಮೇಲೆ ಮಾದನಾಯಕನಹಳ್ಳಿ ಪೊಲೀಸರು ದಾಳಿ ನಡೆಸಿ, ಸುಮಾರು ರೂಪಾಯಿ 30 ಲಕ್ಷಕ್ಕೂ ಹೆಚ್ಚು ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ. ತಡರಾತ್ರಿ ನಕಲಿ ಬ್ರಾಂಡೆಡ್ ಜೀನ್ಸ್ ತಯಾರಿಕೆ ಅಡ್ಡೆಯ ಮೇಲೆ ದಾಳಿ ನಡೆಸಿ ಪೂಮ, ನೈಕಿ ಬ್ರಾಂಡ್ ನಕಲಿ ಲೇಬಲ್‌ಗಳನ್ನು ಅಂಟಿಸಿ ಸಂಗ್ರಹಿಸಿದ್ದ ನಕಲಿ ಜೀನ್ಸ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಇದೇ ವೇಳೆ ಪೊಲೀಸರು ಹಲವು ಜಾಗತಿಕ ಕಂಪನಿಗಳ ಲೇಬಲ್‌ಗಳನ್ನು ಬಳಸಿಕೊಂಡು ಜೀನ್ಸ್ ಪ್ಯಾಂಟ್, ಶರ್ಟ್ ಸೇರಿದಂತೆ ಹಲವು ಧಿರಿಸುಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಯಾವುದೇ ಪರವಾನಗಿ ಪಡೆಯದೆ ಅಕ್ರಮವಾಗಿ ಗೋಡೌನ್‌ನಲ್ಲಿ ಸಂಗ್ರಹಿಸಿದ್ದ ನಕಲಿ ಬ್ರಾಂಡ್‌ನ ಬಟ್ಟೆಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಇದರ ಒಟ್ಟಾರೆ ಮೊತ್ತ 30 ಲಕ್ಷ ರೂ. ಎಂದು ಅವರು ಹೇಳಿದ್ದಾರೆ. ಮಾದನಾಯಕನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

## ಬಿಜೆಪಿ ಕುರುಬ ಸಮುದಾಯದ ನಾಯಕರ ಸಭೆ; ವಿಜಯೇಂದ್ರ ಪರ ಬ್ಯಾಟಿಂಗ್

• ಉದಯವಾಹಿನಿ, ಬೆಂಗಳೂರು

ಬಿಜೆಪಿಯಲ್ಲಿ ಕುರುಬ ಸಮುದಾಯಕ್ಕೆ ಪ್ರಾತಿನಿಧ್ಯತೆಗೆ ಒತ್ತಾಯಿಸಿ ಸಮುದಾಯದ ಮುಖಂಡರು ಮಹತ್ವದ ಸಭೆ ನಡೆಸಿದ್ದಾರೆ. ವಿಜಯೇಂದ್ರ ಅವರೇ ರಾಜ್ಯಾಧ್ಯಕ್ಷರಾಗಿ ಮುಂದುವರೆಯಬೇಕೆಂದು ಒತ್ತಾಯಿಸಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಸಭೆ ನಡೆಸಿರುವ ಸಮುದಾಯದ ಬಿಜೆಪಿ ನಾಯಕರು, ವಿಜಯೇಂದ್ರ ಪರ ಬ್ಯಾಟ್ ಬೀಸಿದ್ದಾರೆ. ಇದೇ ವೇಳೆ ಪಕ್ಷ ತೊರೆದ ಈಶ್ವರಪ್ಪ ಅವರನ್ನು ಮರಳಿ ತರುವ ಬಗ್ಗೆ ಹೈಕಮಾಂಡ್ ಮಟ್ಟದಲ್ಲಿ ನಿರ್ಣಯ ಆಗಬೇಕು, ಕುರುಬ ಸಮುದಾಯದ ಮುಖಂಡರಿಗೆ ಪಕ್ಷದ ಪ್ರಮುಖ ಪದಾಧಿಕಾರಿ ಹುದ್ದೆ ಕೊಡಬೇಕು, ಮುಂಬರುವ ಜಿ.ಪಂ, ತಾ.ಪಂ ಚುನಾವಣೆಗಳಲ್ಲಿ ಸಮುದಾಯಕ್ಕೆ ಹೆಚ್ಚಿನ ಟಿಕೆಟ್ ಕೊಡಬೇಕು ಎಂದು ಒತ್ತಾಯಿಸಲು ತೀರ್ಮಾನಿಸಲಾಗಿದೆ. ಕುರುಬ ಸಮುದಾಯದ ಬಿಜೆಪಿ ನಾಯಕರಾದ ನಾಯಕರಾದ ಶಾಸಕ ಭೈರತಿ ಬಸವರಾಜು, ಶಾಸಕ ದೊಡ್ಡನಗೌಡ ಪಾಟೀಲ್, ರಘುನಾಥ್ ರಾವ್ ಮಲ್ಕಾಪೂರೆ, ವರ್ತೂರು ಪ್ರಕಾಶ್ ಸೇರಿದಂತೆ ಎಲ್ಲಾ ಜಿಲ್ಲೆಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಒಂದೆರೆಡು ತಿಂಗಳಲ್ಲಿ ಬೃಹತ್ ಕುರುಬ ಸಮುದಾಯದ ಸಮಾವೇಶ ಮಾಡಿ ಹೈಕಮಾಂಡ್ ನಾಯಕರಿಗೆ ಆಹ್ವಾನ ಕೊಡಬೇಕೆಂಬ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಗಿದೆ.



ಉದಯವಾಹಿನಿ ಚಿತ್ರ

## ಕಾವೇರಿ ಆರತಿ ವಿಷಯಕ್ಕೆ ಕಾನೂನು ಮೂಲಕವೇ ಉತ್ತರ: ಡಿಕೆಶಿ

• ಉದಯವಾಹಿನಿ, ಬೆಂಗಳೂರು

ಕಾವೇರಿ ಆರತಿಗೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ನೋಟೀಸ್‌ಗೆ ಸರ್ಕಾರ ಕಾನೂನು ಮೂಲಕವೇ ಉತ್ತರ ನೀಡಲಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು. ಸದಾಶಿವನಗರ ನಿವಾಸದ ಬಳಿ ಮಾಧ್ಯಮಗಳ ಪ್ರಶ್ನೆಗಳಿಗೆ ಭಾನುವಾರ ಉತ್ತರಿಸಿದರು. ಕಾವೇರಿ ಆರತಿ ಹಿನ್ನೆಲೆಯಲ್ಲಿ ಹೈಕೋರ್ಟ್ ನೋಟೀಸ್ ಕೊಟ್ಟಿರುವ ಬಗ್ಗೆ ಕೇಳಿದಾಗ, ಪೂಜೆ, ಪ್ರಾರ್ಥನೆ ಮಾಡಲು ಯಾರೂ ಬೇಡ ಎನ್ನುವುದಿಲ್ಲ. ಕೆಲವರಿಗೆ ಆತಂಕ ಇದೆ. ಆದನ್ನು ಸರ್ಕಾರ ನಿವಾರಣೆ ಮಾಡಲಿದೆ. ಆರತಿ ಮಾಡಲು ಯಾರೂ ಅನುಮತಿ ಕೇಳುತ್ತಿಲ್ಲ. ಅಲ್ಲಿ ಪ್ರತಿನಿತ್ಯ ಆರತಿ ನಡೆಯುತ್ತಿದೆ ಎಂದು ಹೇಳಿದರು.

ಇನ್ನು ಆಗಸ್ಟ್ ತಿಂಗಳಲ್ಲಿ ರಾಜ್ಯದಲ್ಲಿ ಬದಲಾವಣೆ ಆಗಲಿದೆ ಎಂಬ ವಿರೋಧ ಪಕ್ಷದ ನಾಯಕ ಆರ್.ಅಶೋಕ್‌ಗೆ ಡಿಕೆಶಿ ಟಾಂಗ್ ಕೊಟ್ಟಿದ್ದಾರೆ. ಅಶೋಕ್ ಅವರು ಜ್ಯೋತಿಷ್ಯ ಹೇಳಲು ಆರಂಭಿಸಿದ್ದಾರಾ? ಅವರು ಜ್ಯೋತಿಷ್ಯ ಕಲಿತಿದ್ದರೆ ನನಗೂ ಸಮಯ ಕೊಡಿಸಿ. ನಾನು ಹೋಗಿ ಭವಿಷ್ಯ ಕೇಳುತ್ತೇನೆ ಎಂದು ಛೇಡಿಸಿದರು. ಇನ್ನು ಸುರ್ಜೆವಾಲ ಅವರು ರಾಜ್ಯಕ್ಕೆ ಆಗಮಿಸುತ್ತಿದ್ದು, ಶಾಸಕರನ್ನು ಪ್ರತ್ಯೇಕವಾಗಿ ಭೇಟಿ ಮಾಡುವರೇ ಎಂಬ ಪ್ರಶ್ನೆಗೆ, ಹೌದು, ಅವರು ಶಾಸಕರ ಜೊತೆ ಖುದ್ದಾಗಿ ಭೇಟಿ ಮಾಡಲಿದ್ದಾರೆ. ಈ ಬಗ್ಗೆ ಅವರೇ ಶಾಸಕರಿಗೆ ತಿಳಿಸಿದ್ದಾರೆ. ನಾನು ಕೂಡ ಶಾಸಕರಿಗೆ ಮಾಹಿತಿ ನೀಡುತ್ತೇನೆ ಎಂದು ಉತ್ತರಿಸಿದರು.

# ಮನೆ ಬಾಗಿಲಿಗೆ ಇ- ಖಾತಾ ಯೋಜನೆಗೆ ಚಾಲನೆ


### ಬ್ಯಾಟರಾಯನಪುರದಲ್ಲಿ ನಡೆಸಲಾದ ಅದ್ದೂರಿ ಕಾರ್ಯಕ್ರಮದಲ್ಲಿ ಚಾಲನೆ

• ಉದಯವಾಹಿನಿ, ಬೆಂಗಳೂರು

**ನಿಮ್ಮ ಆಸ್ತಿ- ನಮ್ಮ ಗ್ಯಾರಂಟಿ**

ರಾಜ್ಯದ 25 ಲಕ್ಷ ಆಸ್ತಿಗಳನ್ನು ಡಿಜಿಟಲೀಕರಣಗೊಳಿಸುವ ಆಕಾಂಕ್ಷೆಯೊಂದಿಗೆ ಆರಂಭಿಸಲಾಗಿರುವ ಮನೆ ಬಾಗಿಲಿಗೆ ಇ-ಖಾತಾ ಅಭಿಯಾನಕ್ಕೆ ಬೆಂಗಳೂರಿನಲ್ಲಿ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಚಾಲನೆ ನೀಡಿದರು. ಈ ಕುರಿತಂತೆ ಟ್ವೀಟ್ ಮಾಡಿರುವ ಅವರು, ಜಿಬಿಎ ಯಲಹಂಕ ವಲಯದ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಹಕಾರ ನಗರ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಬೃಹತ್ ಇ-ಖಾತಾ ಮೇಳ ಹಾಗೂ ಮನೆ-ಮನೆಗೆ ಖಾತಾ ವಿತರಣಾ ಕಾರ್ಯಕ್ರಮಕ್ಕೆ ಕಂದಾಯ ಸಚಿವರಾದ ಕೃಷ್ಣ ಬೈರೇಗೌಡ ಅವರೊಂದಿಗೆ ಚಾಲನೆ ನೀಡಿದ್ದೇನೆ ಎಂದು ತಿಳಿಸಿದರು. ಆಸ್ತಿ ದಾಖಲೆಗಳಿಗೆ ಸಂಬಂಧಿಸಿದ ಯಾವುದೇ ವಂಚನೆಗಳು ನಡೆಯಬಾರದು ಎಂಬ ಉದ್ದೇಶದಿಂದ ಇ- ಖಾತಾ ಯೋಜನೆಯನ್ನು ಜಾರಿಗೊಳಿಸಿದ್ದೇವೆ. 25 ಲಕ್ಷ ಆಸ್ತಿ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದ್ದೇವೆ. ಈ ರೀತಿಯ ಅನೇಕ ಜನಪರ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಜಾರಿಗೊಳಿಸಿದೆ.

ಈಗಾಗಲೇ ಐದು ಲಕ್ಷಕ್ಕೂ ಅಧಿಕ ಖಾತೆಗಳು ಡಿಜಿಟಲೀಕರಣಗೊಂಡಿದೆ. ಕೃಷ್ಣಬೈರೇಗೌಡರ ನೇತೃತ್ವದಲ್ಲಿ ಇತ್ತೀಚೆಗೆ 1,11,111 ತಾಂಡಾ, ಬುಡಕಟ್ಟು ಜನರಿಗೆ, ಆರನೇ ಭೂ ಗ್ಯಾರಂಟಿ ಮೂಲಕ ಭೂಮಿ ದಾಖಲೆಗಳನ್ನು ಉಚಿತವಾಗಿ ಹಂಚಿದ್ದೇವೆ ಎಂದು ಡಿಕೆ ಶಿವಕುಮಾರ್ ತಿಳಿಸಿದ್ದಾರೆ.



> ಭಾರತ ಸರ್ಕಾರವು ಕೊಡುವ ಇ-ಆಡಳಿತ ಗೋಲ್ಡನ್ ಅವಾರ್ಡ್‌ಗೂ ಇ- ಖಾತಾ ಭಾಜನವಾಗಿದೆ. ದೇಶದ ಯಾವುದೇ ಭಾಗದಲ್ಲಿದ್ದರೂ ಇ- ಖಾತಾ ಮಾಡಿಸುವುದರಿಂದ, ನಿಮ್ಮ ಆಸ್ತಿ ದಾಖಲೆಗಳು ಫೋಟೋ ಸಮೇತ ನಿಮ್ಮ ಕೈಸೇರಿರುತ್ತದೆ. ಇದು ನಮ್ಮ ಗ್ಯಾರಂಟಿ. ಅಧಿಕಾರಿಗಳು ಮತ್ತು ಸ್ವಯಂಸೇವಕರು ನಿಮ್ಮ ಮನೆಬಾಗಿಲಿಗೆ ಬಂದು ಇ- ಖಾತಾ ಮಾಡಿಕೊಟ್ಟು, ನೆರವಾಗುತ್ತಾರೆ. ಜನಸಾಮಾನ್ಯರು ಇ- ಖಾತಾಗೆ ಸಂಬಂಧಿಸಿದ ಯಾವುದೇ ಸಂದೇಹಗಳಿದ್ದರೂ ಸಹಾಯವಾಣಿಗೆ ಕರೆ ಮಾಡಬಹುದು
>
> -ಡಿಕೆ ಶಿವಕುಮಾರ್, ಉಪ ಮುಖ್ಯಮಂತ್ರಿ

**ಜು. 1ರಿಂದ ಇ-ಖಾತಾ ಆಂದೋಲನ:** ಇದೇ ವೇಳೆ, ಜು. 1ರಿಂದ ಇ-ಖಾತಾ ಆಂದೋಲನವನ್ನು ಇಡೀ ರಾಜ್ಯಾದ್ಯಂತ ಆರಂಭಿಸಲಿದ್ದೇವೆ ಎಂದು ತಿಳಿಸಿದ ಅವರು, ಬೆಂಗಳೂರಿನ ಹೆಬ್ಬಾಗಿಲಾದ ಬ್ಯಾಟರಾಯನಪುರದಿಂದ ನಾವು ಈ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದೇವೆ. ಈ ಕ್ಷೇತ್ರದ ಅಭಿವೃದ್ಧಿಗೆ 2000 ಕೋಟಿಗೂ ಅಧಿಕ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದೇವೆ. ಜುಲೈ 1ರಿಂದ ಒಂದು ತಿಂಗಳುಗಳ ಕಾಲ ಇ-ಖಾತಾ ಆಂದೋಲನ ನಡೆಯಲಿದ್ದು, ಬೆಂಗಳೂರಿನ ಎಲ್ಲಾ ವಾರ್ಡ್ ಗಳಲ್ಲೂ ಇದೇ ರೀತಿಯ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಹಮ್ಮಿಕೊಳ್ಳಲಾಗುವುದು ಎಂದು ಡಿಕೆ ಶಿವಕುಮಾರ್ ವಿವರಿಸಿದರು. ಸುಪ್ರೀಂ ಕೋರ್ಟ್ ಆದೇಶನುಸಾರ ಕಟ್ಟಡ ನಕ್ಷೆ ಇಲ್ಲದೇ, ಪ್ರಮಾಣಪತ್ರವಿಲ್ಲದೇ ವಿದ್ಯುತ್, ನೀರಿನ ಸೌಲಭ್ಯಗಳನ್ನು ಕೊಡುವಂತಿಲ್ಲ. ಈ ಬಾರಿ ನಮ್ಮ ಜನರಿಗೆ ಸಹಾಯ ಮಾಡಲು ಅಧಿಕಾರಿಗಳ ಜೊತೆ ಚರ್ಚಿಸಿ, ಪರಿಹಾರ ಸೂಚಿಸುವಂತೆ ತಿಳಿಸಿದ್ದೇನೆ. ಅನಧಿಕೃತವಾಗಿ ಯಾವುದೇ ಕಾರಣಕ್ಕೂ ಕಟ್ಟಡವನ್ನು ಕಟ್ಟ ಬೇಡಿ ಎಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ ಎಂದು ಅವರು ಕೇಳಿಕೊಂಡರು. ಇ-ಖಾತಾ ಪಡೆದುಕೊಂಡು, ವಂಚನೆಯಿಂದ ತಪ್ಪಿಸಿಕೊಳ್ಳಿ. ನಿಮ್ಮ ಆಸ್ತಿ- ನಮ್ಮ ಗ್ಯಾರಂಟಿ. ನಿಮ್ಮ ಮನೆಬಾಗಿಲಿಗೆ ಬಂದು ನಮ್ಮ ಸರ್ಕಾರ ವಿಶೇಷವಾಗಿ ಸೇವೆ ಮಾಡುತ್ತಿದೆ. ಇದರ ಸದುಪಯೋಗಪಡಿಸಿಕೊಳ್ಳಿ ಎಂದು ಅವರು ಕರೆ ನೀಡಿದರು.

### ದೊಡ್ಡ ಸೈಟುಗಳವರಿಗೆ ಒನ್ ಟೈಮ್ ಸೆಟಲ್ಮೆಂಟ್


**ಖಾತೆ ಇರದ ದೊಡ್ಡ ಸೈಟುಗಳನ್ನು ಹೊಂದಿರುವವರಿಗೆ ನೀಡಲಾಗಿರುವ ಕೆಲವು ಸೌಲಭ್ಯಗಳನ್ನು ಕುರಿತಂತೆ ಹೇಳಿರುವ ಉಪ ಮುಖ್ಯಮಂತ್ರಿ, 50x80 ಸೈಟ್‌ಗಳನ್ನು ಹೊಂದಿರುವವರಿಗೆ ನಂಬಿಕೆ ನಕ್ಷೆಯ ಮೂಲಕ ಕಟ್ಟಡ ನಕ್ಷೆಯನ್ನು ಮನೆ ಬಾಗಿಲಿಗೆ ಒದಗಿಸುವ ಯೋಜನೆಯನ್ನು ಜಾರಿಗೊಳಿಸಿದ್ದೇವೆ. ಇದನ್ನೂ ಆಂದೋಲನದ ರೀತಿಯಲ್ಲಿ ಹಮ್ಮಿಕೊಳ್ಳಲಾಗುವುದು. ಸಾರ್ವಜನಿಕರಿಗೆ ತೆರಿಗೆ ಪಾವತಿಗಾಗಿ ಒನ್ ಟೈಮ್ ಸೆಟಲ್ಮೆಂಟ್ ಮಾಡುವ ಅವಕಾಶ ನೀಡಲಾಗಿದ್ದು,1200 ಕೋಟಿ ರೂ. ಸಂಗ್ರಹವಾಗಿದೆ ಎಂದು ಹೇಳಿದರು.**

## ವಿಜಯಪುರದಲ್ಲಿ ಹೆಚ್ಚಿದ ಗಾಂಜಾ ಘಾಟು

• ಉದಯವಾಹಿನಿ, ದೇವನಹಳ್ಳಿ

**ಯುವಕರು, ವಿದ್ಯಾರ್ಥಿಗಳೇ ಪೆಡ್ಲರ್‌ಗಳ ಗುರಿ**

ಪಟ್ಟಣದ ಸಾರ್ವಜನಿಕ ಸ್ಥಳಗಳಲ್ಲಿ ರಾಜಾರೋಷವಾಗಿ ಅಕ್ರಮ ಗಾಂಜಾ ಮಾರಾಟ ನಡೆಯುತ್ತಿದೆ. ಯುವಕರು ಮತ್ತು ವಿದ್ಯಾರ್ಥಿಗಳೇ ಗಾಂಜಾ ಮಾರಾಟಗಾರರ ಮುಖ್ಯ ಗ್ರಾಹಕರು. ಬೆಂಗಳೂರು ನಗರ ಹಾಗೂ ನೆರೆಯ ಆಂಧ್ರಪ್ರದೇಶದಿಂದ ಪಟ್ಟಣಕ್ಕೆ ಅಕ್ರಮವಾಗಿ ಗಾಂಜಾ ಪೂರೈಕೆಯಾಗುತ್ತಿದೆ. ಪೂರೈಕೆ ಯಾದ ಗಾಂಜಾವನ್ನು ಮಾರಾಟಗಾರರು ಸಿಗರೇಟ್‌ನಲ್ಲಿ ತುಂಬಿ ಮಾರಾಟ ಮಾಡುತ್ತಿದ್ದಾರೆ. ಗಾಂಜಾ ತುಂಬಿದ ಸಿಗರೇಟ್ ಒಂದಕ್ಕೆ 100ಗೆ ಮಾರಾಟವಾಗುತ್ತಿದೆ. ಪಟ್ಟಣದ ಇಂದಿರಾ ನಗರ, ಭರತ್ ನಗರ ಸೇರಿದಂತೆ ಹಲವೆಡೆ ಯುವಕರು ಅತಿಯಾಗಿ ಗಾಂಜಾ ಚಟಕ್ಕೆ ದಾಸರಾಗುತ್ತಿದ್ದರೆ. ಗಾಂಜಾ ಸಿಗರೇಟ್ ಸೇವಿಸಿ ಮತ್ತಿನಲ್ಲಿ ತೇಲಾಡುವ ಯುವಕರು ಮಧ್ಯರಾತ್ರಿ ಮನೆ ಸೇರುತ್ತಿದ್ದಾರೆ. ಅಪರಾಧ ಹೆಚ್ಚುವ ಕಳವಳ ಪಟ್ಟಣದಲ್ಲಿ ಎಗ್ಗಿಲ್ಲದೆ ಅಕ್ರಮ ಗಾಂಜಾ ಮಾರಾಟ ನಡೆಯುತ್ತಿದೆ. ಕೆಲ ಯುವಕರು ಗಾಂಜಾ ಚಟಕ್ಕೆ ಒಳಗಾಗುತ್ತಿದ್ದಾರೆ.



**ಪೊಲೀಸರಿಗೆ ಗೊತ್ತಿಲ್ಲವೇ?:** ಗಾಂಜಾ ಸುಲಭವಾಗಿ ಯುವಕರು, ವಿದ್ಯಾರ್ಥಿಗಳ ಕೈ ಸೇರುತ್ತಿರುವ ಬಗ್ಗೆ ಪೊಲೀಸರಿಗೂ ಮಾಹಿತಿ ಇದೆ. ಆದರೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂಬ ಆರೋಪ ಇದೆ. ಮಾದಕವಸ್ತು ವಿರೋಧಿ ದಿನಾಚರಣೆ ಮಾಡುವುದರಲ್ಲಿ ಅರ್ಥವಿಲ್ಲ. ಗಾಂಜಾ ಮಾರಾಟ ಅಡ್ಡೆಗಳ ಪತ್ತೆ ಹಚ್ಚಿ, ಕಠಿ ಕ್ರಮ ಕೈಗೊಳ್ಳಬೇಕು ಎಂದು ನಾಗರಿಕರು ಒತ್ತಾಯಿಸಿದ್ದಾರೆ.

> ವಿಜಯಪುರದಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಇಲ್ಲ. ಎಲ್ಲಿ ಗಾಂಜಾ ಮಾರಾಟ ಮಾಡಲಾಗುತ್ತಿದೆ ಎಂಬ ಬಗ್ಗೆ ಸಾರ್ವಜನಿಕರು ಮಾಹಿತಿ ನೀಡಿದರೆ ಕ್ರಮ ಕೈಗೊಳ್ಳಲಾಗುವುದು.
>
> -ರವಿ, ಡಿವೈಎಸ್‌ಪಿ ದೊಡ್ಡಬಳ್ಳಾಪುರ ಉಪವಿಭಾಗ

## 2015 ಜಾತಿ ಜನಗಣತಿ ವರದಿ ನಿರ್ಲಕ್ಷಿಸಿದ ಕಾಂಗ್ರೆಸ್ ತಕ್ಕ ಬೆಲೆ ತೆರಲಿದೆ: ಕೇಂದ್ರ ಸಚಿವ ಭೂಪೇಂದರ್ ಯಾದವ್

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಸಾಮಾಜಿಕ-ಆರ್ಥಿಕ ಶೈಕ್ಷಣಿಕ ಸಮೀಕ್ಷೆ-2015ಅನ್ನು ನಿರ್ಲಕ್ಷಿಸಿರುವ ರಾಜ್ಯ ಕಾಂಗ್ರೆಸ್, ರಾಷ್ಟ್ರೀಯ ಕಾಂಗ್ರೆಸ್ ಗತಿಯನ್ನೇ ಎದುರಿಸಲಿದೆ ಎಂದು ಕೇಂದ್ರ ಸಚಿವ ಭೂಪೇಂದರ್ ಯಾದವ್ ಅವರು ಭವಿಷ್ಯ ನುಡಿದಿದ್ದಾರೆ. ಭಾರತೀಯ ವಿದ್ಯಾಭವನದಲ್ಲಿ ಸಾಮಾಜಿಕ ನ್ಯಾಯ ಜಾಗೃತಿ ವೇದಿಕೆ ಆಯೋಜಿಸಿದ್ದ ಜಾತಿ ಜನಗಣತಿ ಹಿಂದಿನ ದೃಷ್ಟಿಕೋನ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಸರ್ಕಾರ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಹಿಂದುಳಿದ ವರ್ಗಗಳ ವಿರೋಧಿಗಳು ಎಂದು ಆರೋಪಿಸಿದರು. ಕರ್ನಾಟಕ ಸರ್ಕಾರ ಇತ್ತೀಚೆಗೆ 2015ರ ಜಾತಿ ಜನಗಣತಿಯನ್ನು ರದ್ದುಗೊಳಿಸಿ ಹೊಸ ಸಮೀಕ್ಷೆಯನ್ನು ಕೈಗೆತ್ತಿಕೊಂಡಿದೆ. ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಉನ್ನತಿಗೆ ಶಿಫಾರಸು ಮಾಡಿದ ಕಾಕಾ ಕಾಲೇಲ್ಕರ್ ಆಯೋಗದ ವರದಿಯನ್ನು ನಿರ್ಲಕ್ಷಿಸಿದ್ದರಿಂದ ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರ ಕಳೆದುಕೊಂಡಿತು, ಇದೀಗ ಕಾಂಗ್ರೆಸ್ ಕೂಡ ಅದೇ ಹಾದಿ ಹಿಡಿದಿದ್ದು, ಮತ್ತೆ ಅಧಿಕಾರಕ್ಕೆ ಬರಲು ಸಾಧ್ಯವಾಗುವುದಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.ಒಬಿಸಿ ಮತಗಳಿಂದ ಅಧಿಕಾರ ಪಡೆದ ರಾಜೀವ್ ಗಾಂಧಿ ಸಾಮಾಜಿಕ ನ್ಯಾಯ ನೀಡಲಿಲ್ಲ. ಹಿಂದುಳಿದವರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮೇಲ್ಮಟ್ಟಕ್ಕೆ ಬರಬಾರದೆಂದೇ ಕಾಂಗ್ರೆಸ್ ಕಾಕಾ ಕಾಲೇಕರ್ ಆಯೋಗದ ವರದಿ, ಮಂಡಲ್ ವರದಿಗಳನ್ನು ಕಡೆಗಣಿಸಿತು. ಹಿಂದುಳಿದ ವರ್ಗಗಳ ಕಡೆಗಣನೆಯಿಂದಲೇ ಕಾಂಗ್ರೆಸ್ ಅಧಿಕಾರ ಕಳೆದುಕೊಳ್ಳುತ್ತಾ ಬಂತು. ಭಾರತದ ಪುನರ್ ಜಾಗೃತಿಗಾಗಿ 17-18ನೇ ಶತಮಾನದಲ್ಲಿ ದೇಶದಲ್ಲಿ ಸಾಮಾಜಿಕ ಸುಧಾರಣೆಯ ಆಂದೋಲನ ನಡೆದಿತ್ತು. ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಪ್ರಾತಿನಿಧ್ಯವು ಕೇವಲ ಹೆಸರಿಗಷ್ಟೇ, ಅದಕ್ಕಾಗಿಯೇ ದೀನದಲಿತರು, ಬಡವರಿಗೆ ನ್ಯಾಯ ಒದಗಿಸಲು ಅಂಕಿಅಂಶಗಳು ಅಗತ್ಯವಾಗಿವೆ. ತೆರಿಗೆ ಪಾವತಿಸದ 30 ವರ್ಷಕ್ಕಿಂತ ಮೇಲ್ಪಟ್ಟವರಿಂದ ನಿಗದಿತ ಮೊತ್ತವನ್ನು ಸಂಗ್ರಹಿಸಿ 60 ವರ್ಷಗಳ ನಂತರ ಅವರಿಗೆ ಪಿಂಚಣಿ ನೀಡುವ ವ್ಯವಸ್ಥೆಯನ್ನು ಜಾರಿಗೆ ತರಬೇಕು ಎಂದು ತಿಳಿಸಿದರು

## ಈಶ್ವರಪ್ಪನವರನ್ನು ಮರಳಿ ಬಿಜೆಪಿಗೆ ಕರೆತರಲು ಹೆಚ್ಚಿದ ಕೂಗು

• ಉದಯವಾಹಿನಿ, ಬೆಂಗಳೂರು



ಕಳೆದ ಲೋಕಸಭೆ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ಆರೋಪದ ಮೇಲೆ ಉಚ್ಚಾಟನೆಗೊಂಡಿದ್ದ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಅವರನ್ನು ಮರಳಿ ಬಿಜೆಪಿಗೆ ಕರೆತರಬೇಕೆಂಬ ಕೂಗು ಹೆಚ್ಚಾಗುತ್ತಿದೆ. ಈ ಸಂಬಂಧ ಖಾಸಗಿ ಹೋಟೆಲ್‌ನಲ್ಲಿ ಬಿಜೆಪಿ ಒಳಗಿರುವ ಕುರುಬ ಸಮಾಜದ ಮುಖಂಡರು ಸಭೆ ನಡೆಸಿ ಈಶ್ವರಪ್ಪ ಅವರನ್ನು ಪಕ್ಷಕ್ಕೆ ಕರೆತರಲು ಹೈಕಮಾಂಡ್ ಜೊತೆ ಮಾತುಕತೆ ನಡೆಸಬೇಕು ಎಂದು ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರಗೆ ಜವಾಬ್ದಾರಿ ನೀಡಿ ನಿರ್ಣಯ ಕೈಗೊಳ್ಳಲಾಗಿದೆ. ಸಭೆಯಲ್ಲಿ ಭಾಗಿಯಾಗಿದ್ದ ಬಹುತೇಕ ನಾಯಕರು ಈಶ್ವರಪ್ಪ ಕೇವಲ ಕುರುಬ ಸಮುದಾಯದ ನಾಯಕರಲ್ಲ, ಹಿಂದುಳಿದ ವರ್ಗಗಳ ನಾಯಕರು ಹೌದು. ಬಿಜೆಪಿ ಕಟ್ಟಿ ಬೆಳೆಸಿದರಲ್ಲಿ ಅವ ಪಾತ್ರವನ್ನು ಅಲ್ಲಗೆಳೆಯುವಂತಿಲ್ಲ, ಹೀಗಾಗಿ ಪಕ್ಷದಿಂದ ಉಚ್ಚಾಟನೆಗೊಂಡಿರುವ ಅವರನ್ನು ಕರೆತರಲು ರಾಜ್ಯ ನಾಯಕರಿಗೆ ಬಹುತೇಕರು ಒತ್ತಾಯಿಸಿದ್ದಾರೆ. ಯಾವುದೇ ಸಂದರ್ಭದಲ್ಲಿ ತಾಲ್ಲೂಕು, ಜಿಲ್ಲಾ ಪಂಚಾಯತ್ ಚುನಾವಣೆ ನಡೆಯುವ ಸಾಧ್ಯತೆ ಇದೆ. ಕುರುಬ ಸಮುದಾಯದವರಿಗೆ ಹೆಚ್ಚಿನ ಆದ್ಯತೆ ನೀಡಬೇಕು.

ಅಲ್ಲದೆ ಒಬಿಸಿ ವರ್ಗದವರಿಗೂ ಮನ್ನಣೆ ಕೊಡಬೇಕೆಂದು ಒತ್ತಾಯಿಸಲಾಗಿದೆ. ಈಶ್ವರಪ್ಪ ಅವರಿಂದ ಪಕ್ಷಕ್ಕೆ ಹೆಚ್ಚಿನ ಬಲ ಬರಲಿದೆ. ಬೇರೆ ಬೇರೆ ಕಾರಣಗಳಿಂದ ಅವರು ದೂರವಾಗಿರಬಹುದು. ಪಕ್ಷದಿಂದ ದೂರ ಸರಿದಿರುವವರನ್ನು ಮರಳಿ ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡರೆ ಸಂಘಟನೆ ಪ್ರಬಲವಾಗುತ್ತದೆ. ಈ ಬಗ್ಗೆ ವಿಜಯೇಂದ್ರ ಸೇರಿದಂತೆ ರಾಜ್ಯ ನಾಯಕರಿಗೆ ಮನವರಿಕೆ ಮಾಡಿ ಕೊಡಬೇಕು. ತಕ್ಷಣವೇ ಹೈಕಮಾಂಡ್ ಜೊತೆ ಮಾತುಕತೆ ನಡೆಸಲು ಸಭೆಯಲ್ಲಿ ಆಗ್ರಹಿಸಲಾಯಿತು. ಪಕ್ಷದಲ್ಲಿ ಹಿರಿಯ ನಾಯಕರ ಕೊರತೆ ಇದೆ. ಅಲ್ಲದೆ ಕುರುಬ ಸಮುದಾಯದಿಂದ ಸಿಎಂ ಸಿದ್ದರಾಮಯ್ಯ ಅವರನ್ನು ಬಿಟ್ಟರೆ ಹಿರಿತನದಲ್ಲಿ ಈಶ್ವರಪ್ಪ 2ನೇ ನಾಯಕರು. ಯಾವುದೋ ಕೆಟ್ಟ ಸಂದರ್ಭದಲ್ಲಿ ಪಕ್ಷದಿಂದ ಉಚ್ಚಾಟನೆಯಾಗಿರಬಹುದು.

ಭವಿಷ್ಯದ ಹಿತದೃಷ್ಟಿಯಿಂದ ಅದನ್ನು ಮರೆತು ಕರೆತಂದರೆ ಸಂಘಟನೆಗೆ ಅನುಕೂಲವಾಗಲಿದೆ. ಹೈಕಮಾಂಡ್ ನಾಯಕರಿಗೂ ಅವರ ಅಗತ್ಯತೆ ಬಗ್ಗೆ ಮನವರಿಕೆ ಮಾಡಿಕೊಡೋಣ. ಸಾಧ್ಯವಾದರೆ ದೆಹಲಿಗೆ ಒಂದು ನಿಯೋಗವು ತೆರಳಿ ರಾಷ್ಟ್ರೀಯ ಅಧ್ಯಕ್ಷರು ಸೇರಿದಂತೆ ಮತ್ತಿತರ ನಾಯಕರನ್ನು ಭೇಟಿಯಾಗುವ ಬಗ್ಗೆಯೂ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಗಿದೆ.

### ಬೆಳವಣಿಗೆಗೆ ಕೈಜೋಡಿಸಬೇಕು

**ಕಾಂಗ್ರೆಸ್‌ನಲ್ಲಿ ಪಕ್ಷ ಬಿಟ್ಟು ಹೋದವರನ್ನು ಮರಳಿ ಕರೆತಂದ ಪರಿಣಾಮ ಗೆಲುವು ಸಾಧಿಸಲಾಯಿತು. ನಮ್ಮಲ್ಲಿ ಗೊಂದಲಗಳು ಉಂಟಾಗಿದ್ದರಿಂದ ವಿಧಾನಸಭೆ ಚುನಾವಣೆಯಲ್ಲಿ ಹೀನಾಯ ಸೋಲು ಕಂಡೆವು. ಇದೇ ಗೊಂದಲ ಲೋಕಸಭೆ ಚುನಾವಣೆಯಲ್ಲೂ ಮರುಕಳಿಸಿದ್ದರಿಂದ ಮೂರಾಲ್ಕು ಸ್ಥಾನವನ್ನು ಕಳೆದುಕೊಂಡೆವು. ಎಲ್ಲರೂ ವೈಮನಸ್ಯ, ಪ್ರತಿಷ್ಠೆಯನ್ನು ಬದಿಗಿಟ್ಟು ಪಕ್ಷದ ಬೆಳವಣಿಗೆಗೆ ಕೈಜೋಡಿಸಬೇಕು. ಪಕ್ಷ ಬಿಟ್ಟವರನ್ನು ಕರೆತರಲು ಎಲ್ಲರೂ ಮುಂದಾಗಬೇಕೆಂಬ ನಿರ್ಧಾರಕ್ಕೆ ಬರಲಾಯಿತು.**

## 3 ತಿಂಗಳಲ್ಲಿ ಡಿಕೆಶಿ ಸಿಎಂ ಆಗ್ತಾರೆ: ಕಾಂಗ್ರೆಸ್‌ನಲ್ಲಿ ತಾರಕಕ್ಕೇರಿದ ಬದಲಾವಣೆ ಬಿಸಿ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಯಾರ ಶ್ರಮ ಎಷ್ಟಿದೆ ಎಂದು ಹೈಕಮಾಂಡ್‌ಗೆ ಸ್ಪಷ್ಟವಾದ ಮಾಹಿತಿ ಇದೆ. ಅದಕ್ಕೆ ಪೂರಕವಾಗಿ ಮುಂದಿನ ಮೂರು ತಿಂಗಳಲ್ಲಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಾರೆ ಎಂದು ಕಾಂಗ್ರೆಸ್ ಪಕ್ಷದ ಶಾಸಕರೊಬ್ಬರು ಹೇಳುವ ಮೂಲಕ ರಾಜಕೀಯ ಕ್ರಾಂತಿ ಹೇಳಿಕೆಗಳಿಗೆ ಮತ್ತೊಂದು ಸ್ವರೂಪ ನೀಡಿದ್ದಾರೆ. ಸೆಪ್ಟೆಂಬರ್, ಅಕ್ಟೋಬರ್ ವೇಳೆಗೆ ರಾಜ್ಯ ರಾಜಕಾರಣದಲ್ಲಿ ಕ್ರಾಂತಿಯಾಗಲಿದೆ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದ್ದರು. ಹಿರಿಯ ನಾಯಕರು ತಾಕೀತು ಮಾಡಿದ ಬಳಿಕ ತಮ ಹೇಳಿಕೆಯನ್ನು ಬದಲಾವಣೆ ಮಾಡಿದ ರಾಜಣ್ಣ ಕ್ರಾಂತಿ ಕಾಂಗ್ರೆಸ್ ನಲ್ಲೇ ಯಾಕೆ ಆಗಬೇಕು. ಬಿಜೆಪಿಯಲ್ಲಿ ನಡೆಯಬಾರದೇ, ಕೇಂದ್ರ ಸರ್ಕಾರದಲ್ಲಿ ಆಗಬಾರದೇ ಎಂದು ಮಗ್ಗಲು ಬದಲಿಸಿದ್ದರು. ರಾಜಕೀಯ ಕ್ರಾಂತಿ ಕುರಿತು ರಾಜಣ್ಣ ನೀಡಿದ್ದ ಹೇಳಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಿಲ್ಲ ಎಂದು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್‌ರನ್ನು ಪಕ್ಕದಲ್ಲಿರಿಸಿಕೊಂಡು ಹೇಳಿದ್ದರು.

ಸಚಿವ ಸತೀಶ್ ಜಾರಕಿಹೊಳಿ ಸೇರಿದಂತೆ ಅನೇಕರು ರಾಜಣ್ಣ ಹೇಳಿಕೆಗೆ ಪೂರಕವಾಗಿ ಮಾತನಾಡಿದ್ದರು. ಸಿದ್ದರಾಮಯ್ಯ ಬಣದ ಸಚಿವರು, ಶಾಸಕರು ಸೆಪ್ಟೆಂಬರ್‌ನಲ್ಲಿ ರಾಜಕೀಯ ಕ್ರಾಂತಿಯಾಗಲಿದೆ. ಕೆಪಿಸಿಸಿ ಅಧ್ಯಕ್ಷರು ಬದಲಾಗಲಿದ್ದಾರೆ, ಸಚಿವ ಸಂಪುಟ ಪುನರ್ ರಚನೆಯಾಗಲಿದೆ ಎಂದು ಹೇಳಿಕೊಂಡು ಅಡ್ಡಾಡುವ ಹೊತ್ತಿನಲ್ಲಿ ಡಿ.ಕೆ.ಶಿವಕುಮಾರ್ ಪರಮಾಪ್ತರಾಗಿರುವ ರಾಮನಗರ ಕ್ಷೇತ್ರದ ಕಾಂಗ್ರೆಸ್ ಶಾಸಕ ಇಕ್ಬಾಲ್ ಹುಸೇನ್ ಮತ್ತೊಂದು ಸ್ಫೋಟಕ ಹೇಳಿಕೆಯನ್ನು ಹೊರ ಹಾಕಿದ್ದು, ಸಿದ್ದರಾಮಯ್ಯ ಬಣಕ್ಕೆ ಟಾಂಗ್ ನೀಡಿದ್ದಾರೆ. ಮುಂದಿನ ಎರಡು ಮೂರು ತಿಂಗಳಲ್ಲಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುವುದು ಖಚಿತ. ನಾನು ಸುತ್ತು ಬಳಸಿ ಮಾತನಾಡುವುದಿಲ್ಲ. ನೇರವಾಗಿಯೇ ಹೇಳುತ್ತಿದ್ದೇನೆ. ಅವರೆಲ್ಲಾ ಹೇಳುವಂತೆ ರಾಜಕೀಯ ಕ್ರಾಂತಿಯಾಗುತ್ತದೆ. ಸಿಎಂ ಆಗಿ ಡಿ.ಕೆ.ಶಿವಕುಮಾರ್ ಅಧಿಕಾರವಹಿಸಿಕೊಳ್ಳಲಿದ್ದಾರೆ ಎಂದಿದ್ದಾರೆ.

2018ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಎಷ್ಟು ಸ್ಥಾನ ಗಳಿಸಿತ್ತು. ನಮ ಸಂಖ್ಯಾಬಲ ಎಷ್ಟಿತ್ತು ಎಂದು ಎಲ್ಲರಿಗೂ ಗೊತ್ತಿದೆ. ಡಿ.ಕೆ.ಶಿವಕುಮಾರ್ ಪಕ್ಷದ ಜವಾಬ್ದಾರಿ ವಹಿಸಿಕೊಂಡ ಬಳಿಕ ಭಾರತ್ ಜೋಡೋ ಯಾತ್ರೆಯನ್ನು ಯಶಸ್ವಿಗೊಳಿಸಿದರು. ಮೇಕೆದಾಟು ಪಾದಯಾತ್ರೆ, ಸ್ವಾತಂತ್ರ್ಯ ನಡಿಗೆಯಂತಹ ಕಾರ್ಯಕ್ರಮಗಳು ಇತಿಹಾಸದಲ್ಲೇ ನಡೆದಿರಲಿಲ್ಲ. ಕೋವಿಡ್ ಸಂದರ್ಭದಲ್ಲಿ ಆರೋಗ್ಯಹಸ್ತದಂತಹ ಅಪರೂಪದ ಕಾರ್ಯಕ್ರಮ ಡಿ.ಕೆ.ಶಿವಕುಮಾರ್ ಕೊಡುಗೆ ಎಂದಿದ್ದಾರೆ. ಡಿ.ಕೆ.ಶಿವಕುಮಾರ್ ಅವರ ಶ್ರಮ, ರೂಪುರೇಷೆ, ಹೋರಾಟ, ಬೆವರು, ಆಸಕ್ತಿ ಎಲ್ಲವೂ ಕಣ್ಣೆದುರಿಗೆ ಇದೆ. ಅದು ಹೈಕಮಾಂಡ್ ಗಮನಕ್ಕೂ ಇದೆ. ಅದಕ್ಕೆ ತಕ್ಕ ಪ್ರತಿಫಲ ಸಿಕ್ಕೇ ಸಿಗುತ್ತದೆ. ಹೈಕಮಾಂಡ್ ಸೂಕ್ತ ಸಮಯದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಹೇಳಿದರು. ದಸರಾ ವೇಳೆಗೆ ಮುಖ್ಯಮಂತ್ರಿ ಬದಲಾಗುತ್ತಾರೆ. ನೂತನ ಮುಖ್ಯಮಂತ್ರಿ ದಸರಾ ಉದ್ಘಾಟಿಸುತ್ತಾರೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಅಶೋಕ್ ಜೋತಿಷ್ಯ ಕಲಿತಿದ್ದರೆ ನನಗೂ ಸಮಯ ಕೊಡಿಸಿ, ನಾನು ಭವಿಷ್ಯ ಕೇಳುವುದಿದೆ. ಅವರನ್ನು ಭೇಟಿ ಮಾಡುತ್ತೇನೆ ಎಂದು ಮಾರ್ಮಿಕವಾಗಿ ಹೇಳಿದರು.

### ಕಾಂಗ್ರೆಸ್ ಶಾಸಕರ ಜತೆ ಸುರ್ಜೇವಾಲ ಪ್ರತ್ಯೇಕ ಮಾತುಕತೆ

**ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಸೋಮವಾರ ಬೆಂಗಳೂರಿಗೆ ಆಗಮಿಸುತ್ತಿದ್ದು, ಶಾಸಕರ ಜೊತೆ ಪ್ರತ್ಯೇಕವಾಗಿ ಚರ್ಚೆ ನಡೆಸಲಿದ್ದಾರೆ ಎಂದು ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಣದೀಪ್ ಸಿಂಗ್ ಸುರ್ಜೇವಾಲ ರಾಜ್ಯಕ್ಕೆ ಭೇಟಿ ನೀಡುತ್ತಿದ್ದು, ಶಾಸಕರ ಜೊತೆ ಪ್ರತ್ಯೇಕವಾಗಿ ಚರ್ಚೆ ನಡೆಸುತ್ತಾರೆ. ರಣದೀಪ್ ಸಿಂಗ್ ಸುರ್ಜೇವಾಲ ಅವರ ಕಚೇರಿಯಿಂದಲೇ ನೇರವಾಗಿ ಶಾಸಕರಿಗೆ ಮಾಹಿತಿ ಹೋಗಿದೆ. ನನಗೂ ಕಾರ್ಯಕ್ರಮದ ವೇಳಾ ಪಟ್ಟಿ ಕಳುಹಿಸಿದ್ದಾರೆ. ಅದರಂತೆ ನಾನು ಶಾಸಕರಿಗೆ ವಿಷಯ ತಿಳಿಸುತ್ತಿದ್ದೇನೆ.**

## ಕಾವೇರಿ ಅವಲಂಬನೆ ಕಡಿಮೆಯಾಗಲಿ

• ಉದಯವಾಹಿನಿ, ಬೆಂಗಳೂರು

ತಿಪ್ಪಗೊಂಡನಹಳ್ಳಿ ಜಲಾಶಯದ 10 ಕಿ.ಮೀ ವ್ಯಾಪ್ತಿಯಲ್ಲಿ ನಗರೀಕರಣ ಮತ್ತು ಕೈಗಾರೀಕರಣ ನಿಯಂತ್ರಿಸಿ, ನೀರು ಸಂಗ್ರಹ ಹೆಚ್ಚಿಸಿ, ಕಾವೇರಿ ನೀರಿನ ಮೇಲಿನ ಅವಲಂಬನೆ ಕಡಿಮೆ ಮಾಡಬೇಕು' ಎಂದು ತಜ್ಞರು ಅಭಿಪ್ರಾಯಪಟ್ಟರು. ಆಮ್ ಆದ್ಮಿ ಪಾರ್ಟಿ-ಕರ್ನಾಟಕದ ವತಿಯಿಂದ ಆಯೋಜಿಸಿದ್ದ 'ತಿಪ್ಪಗೊಂಡನಹಳ್ಳಿ ಜಲಾಶಯ ರಕ್ಷಿಸಿ, ಬೆಂಗಳೂರು ಉಳಿಸಿ' ವಿಚಾರ ಸಂಕಿರಣದಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಬೆಂಗಳೂರಿಗೆ ನೀರು ಸರಬರಾಜು ಮಾಡಿದರೆ ವೆಚ್ಚ ಕಡಿಮೆಯಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಯಿತು. 'ತಿಪ್ಪಗೊಂಡನಹಳ್ಳಿ ಜಲಾಶಯವನ್ನು ಪುನರುಜೀವಗೊಳಿಸಲು ಇಸ್ರೋ ಸಂಸ್ಥೆ ಹಾಗೂ ಕೆಲವು ಸಂಸ್ಥೆಗಳು ಸವಿಸ್ತಾರವಾದಂತಹ ವರದಿ ನೀಡಿದ ದಶಕ ಕಳೆದಿದೆ. ಸರ್ಕಾರ ಈ ಜಲಾಶಯದ ಪುನರುಜ್ಜೀವನಕ್ಕೆ ಯಾವುದೇ ಯೋಜನೆ ರೂಪಿಸದೇ ಬೆಂಗಳೂರಿಗೆ ಅನ್ಯಾಯ ಮಾಡುತ್ತಿದೆ' ಎಂದು ಬೆಂಗಳೂರು ಜಲಮಂಡಳಿಯ ನಿವೃತ್ತ ಎಂಜಿನಿಯರ್ ಎಂ.ಎನ್.ತಿಪ್ಪೇಸ್ವಾಮಿ ಹೇಳಿದರು. 'ನಗರಕ್ಕೆ ನೀರಿನ ಲಭ್ಯತೆಯ ಸಾಮರ್ಥ್ಯದ ಮೇಲೆ ಅಭಿವೃದ್ಧಿ ಆಗಬೇಕಿದೆ. ಆದರೆ ನೀರಿನ ಲಭ್ಯತೆಯ ವಿರುದ್ಧ ದಿಕ್ಕಿನಲ್ಲಿ ಬೆಂಗಳೂರನ್ನು ಅಭಿವೃದ್ಧಿಪಡಿಸುತ್ತಿರುವುದು ರಾಜಕಾರಣಿಗಳ ದುರಾಸೆಯ ಪರಮಾವಧಿಯಾಗಿದೆ ಎಂದು ಸಿವಿಕ್-ಬೆಂಗಳೂರು ಸಂಸ್ಥೆಯ ಕಾರ್ಯಕಾರಿ ಟ್ರಸ್ಟಿ ಕಾತ್ಯಾಯಿನಿ ಚಾಮರಾಜ್ ದೂರಿದರು. 'ಬೆಂಗಳೂರು ನಗರಕ್ಕೆ 'ನೀರಿನ ನೀತಿ'ಯನ್ನು ಕೂಡಲೇ ಜಾರಿಗೊಳಿಸಬೇಕು. ಬೆಂಗಳೂರಿನ ಕಾಲು ಭಾಗ ಮಾತ್ರ ಕಾವೇರಿ ನದಿಯನ್ನು ಆಶ್ರಯಿಸಬೇಕು. ಮುಕ್ಕಾಲು ಭಾಗ ಬೆಂಗಳೂರಿಗೆ ದಕ್ಷಿಣ ಪಿನಾಕಿನಿ ಹಾಗೂ ಸ್ಥಳೀಯ ಕೆರೆಗಳು, ಬಾವಿ, ಅಂತರ್ಜಲ ವ್ಯವಸ್ಥೆಗಳಿಂದ ನೀರನ್ನು ಸ್ವಯಂ ನಾವೇ ಪೂರೈಕೆ ಮಾಡಿಕೊಳ್ಳಬಹುದಾಗಿದೆ ಎಂದು ಮಳೆನೀರು ತಜ್ಞ ವಿಶ್ವನಾಥ್ ಹೇಳಿದರು.


ಉದಯವಾಹಿನಿ ಚಿತ್ರ

### ಮರಣ ದಾಖಲೆ ದುರ್ಬಳಕೆಗೆ ಬ್ರೇಕ್ : ಸಮಗ್ರ ಐಟಿ ವ್ಯವಸ್ಥೆ ಅಭಿವೃದ್ಧಿಗೆ ಸರಕಾರಕ್ಕೆ ಕರ್ನಾಟಕ ಹೈಕೋರ್ಟ್ ಆದೇಶ

# ಆರು ವಾರಗಳಲ್ಲಿ ಸಮಗ್ರ ಏಕರೂಪದ ವ್ಯವಸ್ಥೆ ರೂಪಿಸಲು ಸೂಚನೆ

• ಉದಯವಾಹಿನಿ, ಬೆಂಗಳೂರು



ಇತ್ತೀಚಿನ ದಿನಗಳಲ್ಲಿ ಆಸ್ತಿಗಾಗಿ ಮರಣ ದಾಖಲೆಗಳನ್ನು ತಿರುಚುವ ಪ್ರಕರಣಗಳು ಹೆಚ್ಚಾಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಹೈಕೋರ್ಟ್, ಹೊಸದಾಗಿ ಸಮಗ್ರ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವಂತೆ ಸರಕಾರಕ್ಕೆ ಹುಕುಂ ಹೊರಡಿಸಿದೆ. ಆ ಮೂಲಕ ಮರಣ ದಾಖಲೆಗಳ ದುರ್ಬಳಕೆ ಪ್ರವೃತ್ತಿಗಳಿಗೆ ಕಡಿವಾಣ ಹಾಕಲು ಮುಂದಾಗಿದೆ. ತುಮಕೂರು ಜಿಲ್ಲೆಯ ಕೋರ ಹೋಬಳಿ ಬುರುಡಗಟ್ಟ ಗ್ರಾಮದ ಸಿದ್ಧಲಿಂಗಯ್ಯ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾ. ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ಪೀಠ ಈ ಮಹತ್ವದ ಆದೇಶ ನೀಡಿದೆ. ಕಂದಾಯ, ಇ-ಆಡಳಿತ ಮತ್ತು ಪೌರಾಡಳಿತ ಇಲಾಖೆ ಸೇರಿ ಮೂರು ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು ಸೇರಿ ಮರಣ ದಾಖಲೆಗಳ ನಿರ್ವಹಣೆಗೆ ಡಿಜಿಟಲ್ ಕಾರ್ಯವಿಧಾನ ರೂಪಿಸಲು ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಬೇಕು. ಆ ಯೋಜನೆಯನ್ನು ಆರು ವಾರಗಳಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಬೇಕು, ಎಂದು ಆದೇಶಿಸಿದೆ. ಆಸ್ತಿ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಮರಣ ಪ್ರಮಾಣಪತ್ರಗಳ ದುರ್ಬಳಕೆಯನ್ನು ತಡೆಯಲು ಪಾರದರ್ಶಕ ದೋಷರಹಿತ ಕಾರ್ಯತಂತ್ರ ಅಭಿವೃದ್ಧಿಪಡಿಸಬೇಕು. ಆ ಹೊಸ ವ್ಯವಸ್ಥೆಯಲ್ಲಿ ಮೃತರ ಆಸ್ತಿ, ಭೂ ದಾಖಲೆಗಳು ಮಾತ್ರ ಪ್ರತಿಫಲನಗೊಳ್ಳುವ ಜತೆಗೆ, ಅವರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರೆ ಅದರ ವಿವರಗಳು, ಅವರ ಪ್ಯಾನ್, ಆಧಾರ್, ಮತದಾರರ ಗುರುತಿನ ಚೀಟಿ ಸೇರಿ ಎಲ್ಲಾ ವಿವರಗಳು ಲಭ್ಯವಾಗುವಂತಿರಬೇಕು, ಎಂದು ನ್ಯಾಯಾಲಯ ನಿರ್ದೇಶನ ನೀಡಿದೆ. ಅಲ್ಲದೆ, ಯಾವುದೇ ವ್ಯಕ್ತಿ ಜನನ ಮತ್ತು ಮರಣ ದಾಖಲೆಗಳ ನಿರ್ವಹಿಸುವ ರಿಜಿಸ್ಟ್ರಾರ್ ಮುಂದೆ ಅರ್ಜಿ ಸಲ್ಲಿಸಿದರೆ ಕೂಡಲೇ ಆ ವ್ಯಕ್ತಿಗೆ ಸೇರಿದ ಕಂದಾಯ ಇಲಾಖೆ, ಸಬ್ ರಿಜಿಸ್ಟ್ರಾರ್‌ಗಳ ಮುಂದಿರುವ ಎಲ್ಲಾ ಮಾಹಿತಿಗಳು ಸ್ವಯಂಚಾಲಿತವಾಗಿ ಲಭ್ಯವಾಗುವಂತೆ ಹೊಸ ವ್ಯವಸ್ಥೆ ಸಮಗ್ರವಾಗಿ ರಬೇಕು, ಎಂದು ನ್ಯಾಯಪೀಠ ಆದೇಶಿಸಿದೆ.

**ಪ್ರಕರಣದ ಹಿನ್ನೆಲೆ:** ತುಮಕೂರಿನ ಮಹದೇವಯ್ಯ ತಮ್ಮ ಅಜ್ಜಿ ಹೊನ್ನಮ್ಮ ನಿಧನರಾದ 38 ವರ್ಷಗಳ ಬಳಿಕ ಅರ್ಜಿ ಸಲ್ಲಿಸಿ ಮರಣ ಪ್ರಮಾಣಪತ್ರವನ್ನು ನೀಡುವಂತೆ ಕೋರಿದ್ದರು. ಅರ್ಜಿಯಲ್ಲಿ ಅವರು ಹೊನ್ನಮ್ಮ 1975ರ ಜೂ.15ರಂದು ಸಾವನ್ನಪ್ಪಿದ್ದರೆಂದು ಹೇಳಿದ್ದರು. ಜನನ, ಮರಣ ದಾಖಲೆಗಳ ರಿಜಿಸ್ಟ್ರಾರ್ ಆಗಿ ಕಾರ್ಯನಿರ್ವಹಿಸುವ ಉಪ ತಹಶೀಲ್ದಾರ್, ಮರಣ ಪ್ರಮಾಣಪತ್ರ ಕೋರಿ ಇಷ್ಟು ತಡವಾಗಿ ಅರ್ಜಿ ಸಲ್ಲಿಸಲಾಗಿದೆ, ಅಷ್ಟು ತಡವಾಗಿ ಮರಣ ದಿನಾಂಕ ದಾಖಲಿಸಿ ಪ್ರಮಾಣಪತ್ರವನ್ನು ನೀಡಲಾಗದು, ಎಂದು ಹಿಂಬರಹ ನೀಡಿದ್ದರು. ಅದನ್ನು ಪ್ರಶ್ನಿಸಿ ಮಹದೇವಯ್ಯ ತುಮಕೂರಿನ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಮುಂದೆ ಅರ್ಜಿ ಸಲ್ಲಿಸಿದ್ದರು.

### ಎಲ್ಲಾ ಪಕ್ಷಗಾರರ ವಾದ ಆಲಿಸಿ

**ಆ ಅರ್ಜಿಯನ್ನು ಲೋಕ ಅದಾಲತ್‌ಗೆ ವರ್ಗಾಯಿಸಲಾಗಿತ್ತು. ಅಲ್ಲಿ ಉಪ ತಹಶೀಲ್ದಾರ್ ಗೈರು ಹಾಜರಾಗಿದ್ದರೂ ಮಹದೇವಯ್ಯ ತಾವು ಹಾಗೂ ಉಪ ತಹಸೀಲ್ದಾರ್ ಸೇರಿ ಜಂಟಿ ಮೆಮೋ ಸಲ್ಲಿಸುತ್ತಿರುವುದಾಗಿ ಹೇಳಿ ವ್ಯಾಜ್ಯ ಇತ್ಯರ್ಥಪಡಿಸಲು ಕೋರಿದ್ದರು. ಜಂಟಿ ಮೆಮೋ ದಾಖಲಿಸಿಕೊಂಡಿದ್ದ ಅದಾಲತ್, ಮೆಮೋದಂತೆ ಮರಣ ಪ್ರಮಾಣಪತ್ರ ವಿತರಿಸಲು ಆದೇಶಿಸಿತ್ತು. ಅದರಂತೆ ತಹಶೀಲ್ದಾರ್ 2014ರ ಜ.31ರಂದು ಹೊನ್ನಮ್ಮನ ಮರಣ ಪ್ರಮಾಣಪತ್ರ ವಿತರಿಸಿದ್ದರು. ಈಗ ನ್ಯಾಯಾಲಯ ಹೊನ್ನಮ್ಮ ಮರಣ ಪ್ರಮಾಣಪತ್ರವನ್ನು ರದ್ದುಗೊಳಿಸಿದೆ ಮತ್ತು ಈ ವಿಚಾರವನ್ನು ತುಮಕೂರು ನ್ಯಾಯಾಲಯಕ್ಕೆ ಮತ್ತೆ ವರ್ಗಾಯಿಸಿ, ಎಲ್ಲಾ ಪಕ್ಷಗಾರರ ವಾದ ಆಲಿಸಿ ಹೊಸದಾಗಿ ಆದೇಶ ನೀಡುವಂತೆ ಆದೇಶಿಸಿದೆ.**

> ಈ ಮಧ್ಯೆ, ತುಮಕೂರಿನ ಸಿದ್ಧಲಿಂಗಯ್ಯ ಅವರ ಕಾನೂನುಬದ್ಧ ವಾರಸುದಾರರಾದ ಪತ್ನಿ ಹಾಗೂ ಮಕ್ಕಳು, ಹೈಕೋರ್ಟ್‌ನಲ್ಲಿ ಮರಣ ಪ್ರಮಾಣಪತ್ರ ವಿತರಣೆ ಮಾಡಿರುವುದನ್ನು ಪ್ರಶ್ನಿಸಿದ್ದರು. ಹೊನ್ನಮ್ಮ 1985ರಲ್ಲಿಯೇ ಸಾವನ್ನಪ್ಪಿದ್ದಾರೆ. ಆದರೆ ಅದಕ್ಕೂ ಮುನ್ನ ಹೊನ್ನಮ್ಮ 1979ರ ಏ.3ರಂದೇ ಕೋರ ಹೋಬಳಿ ಬುರುಡಗಟ್ಟ ಗ್ರಾಮದಲ್ಲಿ 3.5 ಎಕರೆ ಜಾಗವನ್ನು ಸಿದ್ಧಲಿಂಗಯ್ಯ ಅವರ ಪರವಾಗಿ ಕ್ರಯಪತ್ರ ಮಾಡಿಕೊಟ್ಟಿದ್ದರೆಂದು ಕೋರ್ಟ್‌ಗೆ ತಿಳಿಸಿದ್ದರು.

ಚನ್ನೇಗೌಡ ಉಜ್ಜನಿ ಚಲುವಯ್ಯರವರು ನಮ್ಮ ಜಿಲ್ಲೆಯ ಅನ್ನದಾತರ ಮಗ, ಶ್ರೀ ಕ್ಷೇತ್ರ ಉಜ್ಜನಿ ಚೌಡೇಶ್ವರಿ ಕೃತಿ ಮೂಲಕ ಗ್ರಾಮ ದೇವತೆಯ ಹಾಗೂ ಗ್ರಾಮೀಣ ಹಿಂದೂ ಸಂಪ್ರದಾಯಗಳ ಬಗ್ಗೆ ತಿಳಿಸಿ, ಎಲ್ಲಾ



ವರ್ಗದ ಜನರು ಸೇರಿ ಆಚರಿಸುವ ಹಬ್ಬದ ಬಗ್ಗೆ, ಕ್ಷೇತ್ರದ ಮಹಿಮೆಯ ಬಗ್ಗೆ ಅಚ್ಚುಕಟ್ಟಾಗಿ ತಿಳಿಸಿದ್ದಾರೆ. ಇವರ ಕೃತಿಯನ್ನು ಎಲ್ಲರೂ ಓದಿ ತಿಳಿಯುವ ಕಾರ್ಯ ನಡೆಯಬೇಕು.

ಪೀಠಾಧ್ಯಕ್ಷರು.
ಪರಮಪೂಜ್ಯ ಶ್ರೀ ಶ್ರೀ ಶ್ರೀ ಸಿದ್ದಲಿಂಗ ಮಹಾ ಸ್ವಾಮೀಜಿಯವರು.
ಸಿದ್ದಗಂಗಾ ಕ್ಷೇತ್ರ, ತುಮಕೂರು.

ಚನ್ನೇಗೌಡ ಉಜ್ಜನಿ ಚಲುವಯ್ಯ ರವರು ಶ್ರೀ ಕ್ಷೇತ್ರ ಮೇಲುಕೋಟೆ ವೈಭವ ಕೃತಿಯ ಮೂಲಕ ವೈಭವದ ವೈರುಮುಡಿ ಉತ್ಸವ, ಶ್ರೀ ಯೋಗ ನರಸಿಂಹಸ್ವಾಮಿಯ



ಮಹಿಮೆ, ಹಬ್ಬದ ಜಾನಪದ ಸಂಪ್ರದಾಯಗಳು, ರಥೋತ್ಸವಗಳು, ಮಠಗಳು, ಪವಿತ್ರ ಕ್ಷೇತ್ರಗಳು, ಪುಣ್ಯ ತೀರ್ಥಗಳು, ಕಲ್ಯಾಣಿಯ ಮಹಿಮೆ, ಹೀಗೆ ಇಲ್ಲಿಯ ಹಲವಾರು ಸಂಪ್ರದಾಯಗಳ ಬಗ್ಗೆ ಈ ಕೃತಿಯಲ್ಲಿ ತಿಳಿಸಿದ್ದಾರೆ.

ಪೀಠಾಧ್ಯಕ್ಷರು.
ಪರಮಪೂಜ್ಯ ಶ್ರೀ ಶ್ರೀ ಶ್ರೀ ಜಗದ್ಗುರು ನಿರ್ಮಲಾನಂದ ಮಹಾ ಸ್ವಾಮೀಜಿಗಳು.
ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಕ್ಷೇತ್ರ

ಚನ್ನೇಗೌಡ ಉಜ್ಜನಿ ಚಲುವಯ್ಯರವರು ಮೂಲತಃ ರೈತ ಮಗನಾಗಿ ಬೆಳೆದು ಆರೋಗ್ಯ, ಸಾಹಿತ್ಯ ಕ್ಷೇತ್ರದಲ್ಲಿ ಕಾಣುತ್ತಾ ಬಂದಿರುವ ನಮ್ಮದೇ ತುಮಕೂರು ಜಿಲ್ಲೆಯವರು. ತಮ್ಮ ಬದುಕು



- ಬರಹಗಳ ಮೂಲಕ ಜಾತಿ, ಧರ್ಮಗಳನ್ನು ಮೀರಿದ ಮಾನವೀಯ ಚಿಂತನೆಗಳನ್ನು ಸಮಾಜದಲ್ಲಿ ಬಿತ್ತುತ್ತಿರುವವರು, ಉತ್ತಮ ಚಿಂತನೆಯುಳ್ಳ ಬಹುಮುಖಿ ವ್ಯಕ್ತಿತ್ವದ ಗುಣ ಹೊಂದಿರುವವರು, ಇವರಿಗೆ ಶುಭವಾಗಲಿ.

ವಿದ್ಯಾ ವಾಚಸ್ಪತಿ ಡಾ.ಕವಿತಾಕೃಷ್ಣ
ಹೆಸರಾಂತ ಸಾಹಿತಿಗಳು.


ಅಮೂಲ್ಯ ರತ್ನದ ಬೆಲೆ ಅಕ್ಕಸಾಲಿಗರಿಗೆ ಗೊತ್ತು. ಪ್ರಾಮಾಣಿಕತೆಯುಳ್ಳವರು ಜೀವನದಲ್ಲಿ ಹೆಚ್ಚು ಪೆಟ್ಟು ತಿಂದಮೇಲಷ್ಟೇ ಸುಂದರವಾದ ವಿಗ್ರಹವಾಗಲು ಸಾಧ್ಯ.



ಸಮಾಜದಲ್ಲಿ ಹಲವಾರು ಸಿಹಿ-ಕಹಿ ಗಳನ್ನು ದಾಟಿದ ನಂತರವೇ ಒಬ್ಬ ಉತ್ತಮ ವ್ಯಕ್ತಿಯಾಗಿ ಬೆಳೆಯಲು ಸಾಧ್ಯ. ಹಲವು ವರ್ಷಗಳಿಂದ ಹತ್ತಿರವಾಗಿ ನೋಡಿರುವ ಸಹನೆಯುಳ್ಳ ಚನ್ನೇಗೌಡ ಉಜ್ಜನಿ ಚಲುವಯ್ಯರವರ ಎರಡು ಕೃತಿಗಳು ಈಗಾಗಲೇ ಸಮಾಜಕ್ಕೆ ಅರ್ಪಣೆಯಾಗಿದ್ದು, ಓದುಗರ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ಬೆಳಕು ಹಸಿರಾಗಿರಲಿ.

ಡಾ.ಪಾಂಡು ದಾಸಪ್ಪ
ಸರ್ಜಿಕಲ್ ಆಂಕೋಲಜಿ

ಚನ್ನೇಗೌಡ ಉಜ್ಜನಿ ಚಲುವಯ್ಯರವರು ಸಾಮಾಜಿಕ, ಪ್ರಾದೇಶಿಕ ನ್ಯಾಯದ ಉತ್ತಮ ಚಿಂತಕರಾಗಿ, ಸ್ವತಂತ್ರ ಭಾರತದಲ್ಲಿ ಸ್ವಾಭಿಮಾನಿ, ಸದೃಡ ಕರ್ನಾಟಕ ನಿರ್ಮಾಣದತ್ತ ಹೊಸ ಚಿಂತನೆಯ ದಾರಿಯಲ್ಲಿ



ಸಾಗುತ್ತಿರುವ ಇವರ ಉತ್ಸಾಹಭರಿತ ನಗು, ದಯಾಪೂರ್ಣ ಮುಗುಳ್ನಗೆ, ಕ್ರಿಯಾಶೀಲತೆ, ಸರಳತೆ, ನೊಂದವರಿಗೆ ಮಾನವೀಯ ಗುಣಗಳುಳ್ಳ ಸಹಾನುಭೂತಿ, ಕರುಣಾ ಮನೋಭಾವವುಳ್ಳ ಸ್ಫೂರ್ತಿದಾಯಕ ಮಾತುಗಳು ಸದಾ ಆದರ್ಶಮಯ

- ಡಾ. ಪ್ರತಾಪ್ ಬಾಲಕೃಷ್ಣ
ಪ್ರೊಫೆಸರ್ ಆಫ್ ಸರ್ಜರಿ
ಅಂಬೇಡ್ಕರ್ ಮೆಡಿಕಲ್ ಕಾಲೇಜು

ಲೇಖಕರಾಗಿ, ಶಿಕ್ಷಕರಾಗಿ, ಪರಿಸರ ಹಾಗೂ ಸಾಮಾಜಿಕ ಕಾಳಜಿಯುಳ್ಳ



ಸೇವಾ ಮನೋಭಾವದ ಸಹೃದಯಿ ಶ್ರೀಯುತ ಚನ್ನೇಗೌಡ ಉಜ್ಜನಿ ಚಲುವಯ್ಯ ರವರು ಒಳ್ಳೆಯ ವ್ಯಕ್ತಿತ್ವದ ಸ್ನೇಹಜೀವಿ. ಇವರು ಕೋವಿಡ್ ಸಮಯದಲ್ಲಿ ಉಚಿತವಾಗಿ ಮಾಸ್ಕ್, ಸ್ಯಾನಿಟೈಜರ್, ಆಹಾರ ಸಾಮಗ್ರಿಗಳ ವಿತರಣೆ ಮಾಡಿರುವ ಇವರ ಬಗ್ಗೆ ಕನ್ನಡ, ಹಿಂದಿ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಹಲವಾರು ಉತ್ತಮ ಸಂಘ ಸಂಸ್ಥೆ ಗಳ ಮೂಲಕ ಗೌರವ ಸನ್ಮಾನಗಳು, ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ.

-ಶ್ರೀಮತಿ ವೃಂದಮ್ಮ
ಫ್ಲಾರೆನ್ಸ್ ನೈಟಿಂಗೇಲ್ ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತೆ

# ಸಮಾಜ ಸೇವಕರು ಚನ್ನೇಗೌಡ ಉಜ್ಜನಿ ಚಲುವಯ್ಯ

**ಅನ್ನದಾತ ರೈತ ಕುಟುಂಬದ ತಾಯಿ ಶ್ರೀಮತಿ ಅಂಬಿಕಮ್ಮ ತಂದೆ ಶ್ರೀ ಚಲುವಯ್ಯರವರ ಎರಡನೇ ಮಗನಾದ ಚನ್ನೇಗೌಡ ಉಜ್ಜನಿ ಚಲುವಯ್ಯ 01/07/1975 ರಲ್ಲಿ ತುಮಕೂರು ಜಿಲ್ಲೆಯ, ಹುಲಿಯೂರು ದುರ್ಗ ಹೋಬಳಿ, ಉಜ್ಜನಿ ಕ್ಷೇತ್ರದಲ್ಲಿ ಹುಟ್ಟಿ ಬೆಳೆದು, ಪ್ರೌಢ ಶಿಕ್ಷಣವನ್ನು ಸ್ವಕ್ಷೇತ್ರ ಉಜ್ಜನಿಯಲ್ಲಿಯೇ ಮುಗಿಸಿ, ಎಂ ಎ ಕನ್ನಡ ಪದವಿ ಮೂಲಕ ಜೀವನ ಬೆಂಗಳೂರು ನಗರದಲ್ಲಿ ಸಾಗುತ್ತಿದೆ.**

ವೃತ್ತಿ ಕ್ಷೇತ್ರ : ವೈದ್ಯಕೀಯ ಕ್ಷೇತ್ರದಲ್ಲಿ ಔಷದ ಮಾರಾಟ ವಿಭಾಗದ ಹಿರಿಯ ಅಧಿಕಾರಿ.
ಪ್ರವೃತ್ತಿ ಕ್ಷೇತ್ರ : ಲೇಖಕರು,
ಮೊದಲ ಕೃತಿ :
ಶ್ರೀ ಕ್ಷೇತ್ರ ಉಜ್ಜನಿ ಚೌಡೇಶ್ವರಿ
ಎರಡನೆಯ ಕೃತಿ :
ಶ್ರೀ ಕ್ಷೇತ್ರ ಮೇಲುಕೋಟೆ ವೈಭವ

ಸಿರಿ ಸಾಂಸ್ಕೃತಿಕ ಪ್ರತಿಷ್ಠಾನ (ರಿ.)ಪ್ರಧಾನ ಕಾರ್ಯದರ್ಶಿಗಳು
ಕರ್ನಾಟಕ ವಿಜಯ ಸೇನೆ (ರಿ.)
ಪ್ರಧಾನ ಕಾರ್ಯದರ್ಶಿಗಳು
ಶ್ರೀ ವಿಘ್ನೇಶ್ವರ ಸೇವಾ ಟ್ರಸ್ಟ್ (ರಿ.) ಉಪಾಧ್ಯಕ್ಷರಾಗಿ ಸಮಾಜ ಸೇವಕರು.
ನಾಡಿನ ಉದ್ದಗಲಕ್ಕೂ ಸಾಹಿತ್ಯ, ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ಕ್ರೀಡಾ, ಲಲಿತ ಕಲೆ, ಹೀಗೆ ಇನ್ನೂ ಹಲವಾರು ಕ್ಷೇತ್ರದಲ್ಲಿ ಸಾಧನೆ ಮಾಡಿರುವವರನ್ನು ಗುರುತಿಸಿ ಗೌರವಿಸುವ ಕಾಯಕದಲ್ಲಿ ತೊಡಗಿರುವುದು.
ರಕ್ತದಾನ ಶಿಭಿರ ಹಮ್ಮಿಕೊಳ್ಳುವುದು , ಜೊತೆಗೆ ರಕ್ತದಾನ ಮಡುವ, ಮಾಡಿಸುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸುವುದು.
ಹಲವಾರು ಕಾರ್ಯಕ್ರಮಗಳಲ್ಲಿ ಮುಖ್ಯ ಅತಿಥಿಯಾಗಿ, ನಿರೂಪಣೆ ಜವಾಬ್ದಾರಿ.

## ಕ್ರೀಡಾ ಕ್ಷೇತ್ರದಲ್ಲಿ ಶಿಕ್ಷಕರು

ಕರಾಟೆ ಕ್ಷೇತ್ರದಲ್ಲಿ 3 ವಿವಿಧ ಸಂಸ್ಥೆಯಲ್ಲಿ 6ನೇ ಡಿಗ್ರೀ ಬ್ಲಾಕ್ ಬೆಲ್ಟ್ ಪದವಿ ಪಡೆದ ಅಧ್ಯಕ್ಷರು ಸ್ಪೋರ್ಟ್ಸ್ ಕರಾಟೆ-ಡು ಫಿಟ್ನೆಸ್ ಸೆಲ್ಫ್ ಡಿಫೆನ್ಸ್ ಅಸೋಸಿಯೇಷನ್ (ರಿ.)
ಇಂಟರ್ನ್ಯಾಷನಲ್ ಯೋಗ ಸಿ ರೆಫರಿ ಪ್ರಮಾಣ ಪತ್ರ.
ಮೂರು ಬಾರಿ ಯೋಗ ಗಿನ್ನಿಸ್ ವರ್ಡ್ ರೆಕಾರ್ಡ್ ವೆಬಿನಾರ್.
ಗ್ಲೋಬಲ್ ವರ್ಲ್ಡ್ ರೆಕಾರ್ಡ್ ಅಚೀವ್ಮೆಂಟ್ ಪ್ರೋಗ್ರಾಮ್.
ಮಕ್ಕಳನ್ನು ಕರಾಟೆ, ಯೋಗಾಭ್ಯಾಸದಲ್ಲಿ ತೊಡಗಿಸಿ, ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಮಕ್ಕಳನ್ನು ರಾಜ್ಯ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆಸುವುದು.
ಹೆಣ್ಣು ಮಕ್ಕಳಿಗೆ ಉಚಿತ ಆತ್ಮರಕ್ಷಣೆ ತರಬೇತಿ ನೀಡುವುದು.
ಹಲವಾರು ಸಂಘ ಸಂಸ್ಥೆಗಳಲ್ಲಿ ಸಮಾಜಕ್ಕೆ ಅವಶ್ಯವಿರುವ ಬಗ್ಗೆ ಭೋದಕರಾಗಿ ಸೇವೆ ಸಲ್ಲಿಸುವುದು.



**ಸ್ವಚ್ಛತಾ ಕಾರ್ಯಕ್ರಮ, ಸಾಂಸ್ಕೃತಿಕ, ಸಾಮಾಜಿಕ, ಕ್ರೀಡಾ, ಶೈಕ್ಷಣಿಕ, ಸಾಮಾಜಿಕ, ಲಲಿತ ಕಲೆ, ಪ್ರಸ್ತುತ ಅವಶ್ಯ ಮಾಹಿತಿ, ಆರೋಗ್ಯ ಮಾಹಿತಿಯನ್ನು ನೀಡುತ್ತಿರುವುದು.**

**ಪತ್ರಿಕಾ ಬರಹಗಾರರು. ಸಮಾಜದಲ್ಲಿ ಜನಜೀವನಕ್ಕೆ ತುಂಬಾ ಹತ್ತಿರವಾದಂತಹ ಉಪಯುಕ್ತ ಮಾಹಿತಿಗಳನ್ನು ಪತ್ರಿಕೆಗಳಲ್ಲಿ ಸರಳ ಭಾಷೆಯಲ್ಲಿ ಜನಸಾಮಾನ್ಯರಿಗೆ ತಿಳಿಸುತ್ತಿರುವುದು.**

**ಈಗಾಗಲೇ ನೂರಕ್ಕೂ ಹೆಚ್ಚು ಉಪಯುಕ್ತ ಮಾಹಿತಿಗಳು ಹಲವಾರು ಪತ್ರಿಕೆಗಳಲ್ಲಿ ಪ್ರಕಟ**

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕನ್ನಡ ಜಾಗೃತಿ ಸಮಿತಿಯ ಸದಸ್ಯರು.
ಕನ್ನಡ ಸಾಹಿತ್ಯ ಪರಿಷತ್ತು. ಸಾಂಸ್ಕೃತಿಕ ಸಲಹಾ ಸಮಿತಿಯ ಸದಸ್ಯರು
ಕನ್ನಡಪರ ಚಿಂತಕರು

ಕನ್ನಡ ಕಾಯಕ ವರ್ಷಾಚಾರಣೆಯನ್ನು ವಿಶ್ವಮಾನವ ರಾಷ್ಟ್ರಕವಿ ಕುವೆಂಪುರವರ ಜನ್ಮದಿನದ ಪ್ರಯುಕ್ತ ಪ್ರತೀ ವರ್ಷ ಕನ್ನಡವನ್ನು ಪ್ರೀತಿಸಿ, ಬೆಳಸಿ, ಬಳಸಿ.. ಹಾಗೆಯೇ ನಮ್ಮ ಸುತ್ತಮುತ್ತಲಿನ ಪರಿಸರವನ್ನು ಕನ್ನಡಮಯವನ್ನಾಗಿ ಮಾಡಿ' ಎಂದು ತಿಳಿಸುವ ಕಾರ್ಯಕ್ರಮಗಳನ್ನು ಹಲವಾರು ವರ್ಷಗಳಿಂದ ಮಾಡುತ್ತಿದ್ದು, ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ, ಅಂಚೆ ಕಚೇರಿಗಳಲ್ಲಿ, ನಗರದ ಪ್ರತಿಷ್ಠಿತ ವೃತ್ತಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕನ್ನಡ ಜಾಗೃತಿ ಅಭಿಯಾನ ಮಾಡುವುದು.

ಹಲವಾರು ಕನ್ನಡಪರ ಸಂಘಟನೆಗಳಲ್ಲಿ ಪದಾಧಿಕಾರಿಯಾಗಿದ್ದು, ನಾಡಿನ ನೆಲ-ಜಲ, ಭಾಷೆಗಾಗಿ ಹಲವು ಕನ್ನಡಪರ ಹೋರಾಟಗಳನ್ನು ಮಾಡಿರುವುದು.

ಡಾ. ಸರೋಜಿನಿ ಮಹಿಷಿ ವರದಿ ಜಾರಿಗೆ ತರಲು ಹಲವು ಕನ್ನಡಪರ ಸಂಘಟನೆಯ ಒಕ್ಕೂಟದಲ್ಲಿ ಮಹಾತ್ಮಗಾಂಧಿ ಪ್ರತಿಮೆ ಮುಂದೆ ಕುಳಿತು, ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಸರ್ಕಾರಕ್ಕೆ ತಿಳಿಸುವ ಮೂಲಕ ಶಾಂತಿಯುತ ಧರಣಿ ಸತ್ಯಾಗ್ರಹದಲ್ಲಿ ಭಾಗಿಯಾಗಿರುವುದು.

**ಪ್ರತಿಷ್ಠಿತ ಸರ್ಕಾರಿ ಹಾಗೂ ಹಲವು ಸಂಘ ಸಂಸ್ಥೆಗಳಿಂದ ಸುಮಾರು 25 ಕ್ಕೂ ಹೆಚ್ಚು ಗೌರವ ಪ್ರಮಾಣ ಪತ್ರಗಳನ್ನು ಸ್ವೀಕಾರ ಮಾಡಲಾಗಿದೆ.**

ಚನ್ನೇಗೌಡ ಉಜ್ಜನಿ ಚಲುವಯ್ಯ ರವರ ವೈಶಿಷ್ಟ್ಯಪೂರ್ಣ ಬರಹದ ಮೂಲಕ ಪ್ರಭಾವಿಸಿದ ಪುರಾತನ ಹಿನ್ನೆಲೆಯುಳ್ಳ ಎರಡು ಪುಣ್ಯ ಕ್ಷೇತ್ರಗಳ ಬಗೆಗಿನ ಕೃತಿಗಳು ಜನ ಮೆಚ್ಚುಗೆ ಪಡೆದಿದ್ದು ಇಂದಿಗೂ



ಪ್ರಭಾವಿಸುತ್ತಲೇ ಇರುವ ಬರಹಗಾರರು. ಕನ್ನಡ ಭಾಷೆಯ ಬಗೆಗಿನ ಉತ್ಕಟ ಪ್ರೀತಿ, ಪರಿಸರ ಪ್ರೇಮ, ಸಾಮಾಜಿಕ ಕಾಳಜಿ, ಪ್ರಗತಿಪರ ಚಿಂತನೆ ಹೊಂದಿರುವ ಅಪರೂಪದ ಬಹುಮುಖಿ ವ್ಯಕ್ತಿತ್ವದ ಗುಣ ಹೊಂದಿರುವ ಇವರ ಜೀವನದ ದಾರಿಯಲ್ಲಿ ಸಿಗುವ ನಲಿವು, ಗೆಲುವುಗಳು ಅನುಭವಗಳಿಂದ ಕಲಿತ ಪಾಠವು ಬೆಲ್ಲದಂತಹ ಸಿಹಿ ಬದುಕಿಗೆ ಮುನ್ನುಡಿಯಾಗಲಿ ಇವರ ಮುಂದಿನ ಜೀವನ ಸುಖದಿಂದ ತುಂಬಿರಲಿ.

-ಶ್ರೀಮತಿ ಭಾರತಿ ಎಂ ಪ್ರಕಾಶ್
ಕನ್ನಡಪರ ಹೋರಾಟಗಾರರು
ಅಧ್ಯಕ್ಷರು, ಸಿರಿ ಸಾಂಸ್ಕೃತಿಕ ಪ್ರತಿಷ್ಠಾನ (ರಿ.)

## ಪರಿಸರ ಕಾಳಜಿ

- ಹಸಿರೇ ಉಸಿರು ಗಿಡನೆಟ್ಟು ನಾಡು ಉಳಿಸಿ ಈ ಬಗ್ಗೆ ಹಲವು ಕಾರ್ಯಕ್ರಮಗಳನ್ನು ಮಾಡುತ್ತಿರುವುದು.
- ಪೌರರಕ್ಷಣಾದಳ(ಸೆಕ್ಟರ್ ವಾರ್ಡನ್)
- ರಾಜ್ಯ ಸರ್ಕಾರದ ಐಪಿಎಸ್ ಅಧಿಕಾರಿಗಳ ಪ್ರಮಾಣ ಪತ್ರ ಸ್ವೀಕಾರ
- ಪೌರರಕ್ಷಣಾ ದಳದಲ್ಲಿ (ಸಿವಿಲ್ ಡಿಫನ್ಸ್) ಡಿವಿಷನ್ 33 ವಿಭಾಗದಲ್ಲಿ ಸೆಕ್ಟರ್ ವಾರ್ಡನ್ ಆಗಿ ಸೇರ್ಪಡೆ.
- ವರ್ಷದ ಕೊನೇ ದಿನದ ಬಂದೋಬಸ್ತ್ ಸೇವೆ,
- ರಸ್ತೆ ಅಪಘಾತ ದುರಂತ, ಅಗ್ನಿ ಅವಘಡ, ಪ್ರಕೃತಿ ವಿಕೋಪ, ಪ್ರಾಣಿ-ಪಕ್ಷಿಗಳ ರಕ್ಷಣೆ ಜೊತೆಗೆ ಕೋವಿಡ್ ನಂತಹ ತುರ್ತು ಅರೋಗ್ಯ ಸಮಯದಲ್ಲಿ ಸ್ಪಂದಿಸುವುದು.
- ನಗರದಲ್ಲಿ ಟ್ರಾಫಿಕ್ ಜಾಮ್ ಸಮಯದಲ್ಲಿ ಬಾಗಿಯಾಗುವುದು.
- ಚುನಾವಣೆ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿಯವರ ಜೊತೆಯಲ್ಲಿ ಕಾರ್ಯ ನಿರ್ವಹಿಸುವುದು.
- ಪಲ್ಸ್ ಪೋಲಿಯೊ ಜಾಗೃತಿ ಅಭಿಯಾನ ಕಾರ್ಯಕ್ರಮದಲ್ಲಿ ಭಾಗವಹಿಸುವುದು.
- ಸಾಹಿತ್ಯ, ಸಾಂಸ್ಕೃತಿಕ, ಶಿಕ್ಷಣ, ಸಾಮಾಜಿಕ, ಕ್ರೀಡಾ ಕ್ಷೇತ್ರಗಳಲ್ಲಿ ಸಂದ ಗೌರವ ಸನ್ಮಾನಗಳು ಹಾಗೂ ಪ್ರಶಸ್ತಿ ಪುರಸ್ಕಾರಗಳು

## ರಾಜ್ಯಮಟ್ಟದ ಪ್ರಶಸ್ತಿ ಪುರಸ್ಕಾರಗಳು.

- ಕನ್ನಡ ಸೇವಾ ರತ್ನ ಪ್ರಶಸ್ತಿ.
- ಗುರು ರತ್ನ ಪ್ರಶಸ್ತಿ(ಎರಡು ಬಾರಿ)
- ಸ್ನೇಹಜೀವಿ ರೈತ ಮಿತ್ರ ಪ್ರಶಸ್ತಿ.
- ಸಮಾಜ ಸೇವಾ ಸಾರ್ಥಕ ಭೂಷಣ ಪ್ರಶಸ್ತಿ.
- ಹೊಯ್ಸಳ ಪ್ರಶಸ್ತಿ.
- ಅವಾರ್ಡ್ ಆಫ್ ಹಾನರ್.
- ನಾಲ್ವಡಿ ಕೃಷ್ಣ ರಾಜ ಒಡೆಯರ್ ಸದ್ಭಾವನಾ ಪ್ರಶಸ್ತಿ.
- ವೀರ ಸಾವರ್ಕರ್ ಪ್ರಶಸ್ತಿ
- ವೀರ ಮದಕರಿ ನಾಯಕ ಪ್ರಶಸ್ತಿ.
- ಲೋಕಪ್ರಿಯ ಸಮಾಜರತ್ನ ಪ್ರಶಸ್ತಿ
- ಮಸ್ತಿ ವೆಂಕಟೇಶ್ ಅಯ್ಯಂಗಾರ್ ಸದ್ಭಾವನಾ ಪ್ರಶಸ್ತಿ
- ನಮ್ಮ ಕನ್ನಡ ರಕ್ಷಕ ರಾಜ್ಯ ಪ್ರಶಸ್ತಿ.
- ಸಮಾಜಸೇವಾದುರಂದರಸಿರಿ ರಾಜ್ಯ ಪ್ರಶಸ್ತಿ.
- ಚುಟುಕು ಸಾಹಿತ್ಯ ಪರಿಷತ್ತು ಸನ್ಮಾನ.
- ಲಾಲಾ ಲಜಾಪತರಾಯ್ ಸದ್ಭಾವನಾ ಪ್ರಶಸ್ತಿ.
- ನಮ್ಮ ಹೆಮ್ಮೆಯ ಕನ್ನಡಿಗ ಪ್ರಶಸ್ತಿ.
- ಪವರ್ ಸ್ಟಾರ್ ಅಪ್ಪು ಸಮಾಜ ಸೇವಾ ಪ್ರಶಸ್ತಿ.

ನಮ್ಮ ಪರಮಾಪ್ತ ಬಳಗದ ಸಹೃದಯ ವ್ಯಕ್ತಿ ಶ್ರೀ ಚನ್ನೇಗೌಡ ಉಜ್ಜನಿ ಚಲುವಯ್ಯರವರು.. ಕ್ರೀಡೆ ಮತ್ತು ಸಮಾಜ ಸೇವೆ, ಕನ್ನಡ ಸೇವೆಗಾಗಿ ತಮ್ಮ ಬದುಕನ್ನ ಮುಡಿಪಾಗಿಟ್ಟ ಸಾಧಕರು.. ನಿರಂತರ ಒಂದಲ್ಲ ಒಂದು ಸಾಮಾಜಿಕ ಕಳಕಳಿಯ ಕೆಲಸಗಳನ್ನು ಮಾಡುವ ಇವರಿಗೆ.. ಸ್ನೇಹ ರತ್ನ ಎಂದು ಹೃದಯಪೂರ್ವಕವಾಗಿ ಕರೆಯುತ್ತೇನೆ.. ನಾಡು ನುಡಿ ಮತ್ತು ಸೇವಾ ಕ್ಷೇತ್ರದ ಧುರೀಣರಾದ ಚನ್ನೇಗೌಡರವರಿಗೆ ತಾಯಿ ಭುವನೇಶ್ವರಿಯ ಅನುಗ್ರಹವಿರಲಿ...



ಡಾ. ಗುಣವಂತ ಮಂಜು ಸಾಹಿತಿಗಳು ಚಲನಚಿತ್ರ ನಿರ್ದೇಶಕರು

## ರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳು

- ಪ್ರೌಡ್ ಇಂಡಿಯಾ ಪ್ರಶಸ್ತಿ
- ರಾಜೇಂದ್ರ ಪ್ರಸಾದ್ ರಾಷ್ಟ್ರೀಯ ಪ್ರಶಸ್ತಿ.
- ಭೀಮರತ್ನ ಡಾ. ಬಿ ಆರ್ ಅಂಬೇಡ್ಕರ್ ರಾಷ್ಟ್ರೀಯ ಪ್ರಶಸ್ತಿ.
- ಲಾಯಲ್ ಅಂಡ್ ಡೆಡಿಕೇಟೆಡ್ ಅಚೀವ್ ಮೆಂಟ್ ಅವಾರ್ಡ್.
- ಟೂರ್ನಮೆಂಟ್ ಕಮಿಷನ್ ಮೆಂಬರ್
- SKF ನ್ಯಾಷನಲ್ ಸ್ಟೈಲ್ ಚೀಫ್

## ಅಂತಾರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳು

- ಚಾಣಕ್ಯ ಅಂತರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರ.
- ಭೀಮರತ್ನ ಇಂಟರ್ನ್ಯಾಷನಲ್ ಪ್ರಶಸ್ತಿ.
- ಇಂಟರ್ನ್ಯಾಷನಲ್ ಹ್ಯೂಮನಿಟಿ ಅವಾರ್ಡ್.
- ಸಿಸಿಎಫ್ 2018 ಇಂಟರ್ನ್ಯಾಷನಲ್ ಪ್ರಶಸ್ತಿ.
- ಬ್ರುಸ್ಲೀ ಇಂಟರ್ನ್ಯಾಷನಲ್ ಅವಾರ್ಡ್.

ಶ್ರೀಯುತ ಡಾ. ಚನ್ನೇಗೌಡ ಉಜ್ಜನಿ ಚಲುವಯ್ಯರವರು ಬಹಳ ಗೌರವಾನ್ವಿತ ವ್ಯಕ್ತಿಗಳು, ಲೇಖಕರು, ಬರಹಗಾರರು,



ಮುಖ್ಯವಾಗಿ ಸ್ನೇಹಜೀವಿಗಳು, ಕ್ರೀಡಾಜಗತ್ತಿನಲ್ಲಿ, ಒಳ್ಳೆಯ ಹೆಸರು ಮಾಡಿದ್ದಾರೆ ಮತ್ತು ಸಾಕಷ್ಟು ಮಕ್ಕಳನ್ನು ಈ ನಿಟ್ಟಿನಲ್ಲಿ ಬೆಳೆಸಿ ನಾಡಿಗೆ ಒಳ್ಳೆಯ ಕ್ರೀಡಾಪಟುಗಳನ್ನು ನೀಡಿದ್ದಾರೆ. ಕನ್ನಡ ಕೃಷಿಯಲ್ಲಿ ಈ ನೆಲದ ಭಾಷೆಯನ್ನು ಬೆಳೆಸಿ ಉಳಿಸಲು ಶ್ರಮವಹಿಸಿ ಕೆಲಸ ಮಾಡುತ್ತಿದ್ದಾರೆ, ನಾ ಕಂಡಂತೆ ಸಾಂಸ್ಕೃತಿಕ ಕ್ಷೇತ್ರದಲ್ಲಿ ಕೂಡ ತಮ್ಮನ್ನು ತಾವು ಗುರುತಿಸಿ ಕೊಂಡು ಒಳ್ಳೆಯ ಹೆಸರನ್ನು ಗಳಿಸಿದ್ದಾರೆ.

- ಶ್ರೀಮತಿ, ಡಾ. ವಸುಧಾ ಶ್ರೀನಿವಾಸ ಮೂರ್ತಿ,
ಸಂಸ್ಥಾಪಕ ಅಧ್ಯಕ್ಷರು, ಚೈತನ್ಯ ಇಂಟರ್ ನ್ಯಾಷನಲ್ ಆರ್ಟ್ಸ್ ಅಕಾಡೆಮಿ (ರಿ.)

ಆತ್ಮೀಯ ಚನ್ನೇಗೌಡ ಉಜ್ಜನಿ ಚಲುವಯ್ಯ ಸುಮಾರು ಎರಡು ದಶಕಗಳಿಗಿಂತಲೂ ಹೆಚ್ಚು



ಸಮಯದಿಂದ ನಾನು ಇವರ ಒಡನಾಟವನ್ನು ತಿಳಿದಿದ್ದೇನೆ. ಇವರ ಒಳ್ಳೆಯ ವ್ಯಕ್ತಿತ್ವ, ಉತ್ತಮ ಗುಣಮಟ್ಟದ ಕರಾಟೆ ಶಿಕ್ಷಕರು, ಉತ್ತಮ ನಡವಳಿಕೆಯ ವ್ಯಕ್ತಿತ್ವ, ಇವರ ಕನ್ನಡದ ಕಾಯಕ, ಸಮಾಜದಲ್ಲಿ ಒಳ್ಳೆಯ ಹೆಸರು ಪಡೆದಿರುವ ಸ್ನೇಹಮಯಿ, ಕನ್ನಡ ಕೃಷಿಯಲ್ಲಿರುವ ಸಹೃದಯಿ ಎಂದು ಹೇಳಲು ಸಂತೋಷವಾಗಿದೆ. ನಿಮಗೆ ಶುಭವಾಗಲಿ ಎಂದು ಹಾರೈಸುತ್ತೇನೆ.

-ಡಾ. ಪ್ರವೀಣ್ ರಂಕಾ
ಗ್ರ್ಯಾಂಡ್ ಮಾಸ್ಟರ್

ಕನ್ನಡ ಪ್ರೇಮ ಮತ್ತು ಜನರೆಡೆಗಿನ ಪ್ರೀತಿ ಜನಮಾನಸದಲ್ಲಿ ವಿನಮ್ರನಾಗುತ್ತಾ ಸಮಾಜ ಮುಖಿ ಕೆಲಸಗಳನ್ನು ಮಾಡುತ್ತಿದ್ದಾರೆ. ಕನ್ನಡದ ಕೃಷಿಯಲ್ಲಿರುವ ನಲ್ಮೆಯ ಗೆಳೆಯ ಚನ್ನೇಗೌಡ ಉಜ್ಜನಿ ಚಲುವಯ್ಯರವರು ಸಾಮಾಜಿಕ ಸೇವೆಯ ಬದ್ಧತೆ, ನ್ಯಾಯ ನಿಷ್ಠುರತೆ, ಪ್ರೀತಿ - ಮಮತೆ ಮುಂತಾದ ಮಾನವೀಯ ಮೌಲ್ಯಗಳ ಜೊತೆಗೆ ಸ್ನೇಹ - ಸೌಹಾರ್ದತೆ, ಪ್ರೀತಿಯ ಬೆಳಕನ್ನು ನೀಡುವ ಇವರಿಗೆ ಯಶಸ್ಸಿನ ಜೊತೆ ಇನ್ನೂ ಅನೇಕ ಗೌರವ ಪುರಸ್ಕಾರಗಳು ಲಭಿಸಲಿ.



-ಕೆ. ಎರ್ರಿಸ್ವಾಮಿ
ಸಂಸ್ಥಾಪಕ ರಾಜ್ಯಾಧ್ಯಕ್ಷರು , ಕರ್ನಾಟಕ ಜನ ಸೈನ್ಯ (ರಿ.)

ಸ್ನೇಹಜೀವಿ ಚನ್ನೇಗೌಡ ಉಜ್ಜನಿ ಚಲುವಯ್ಯರವರದು ಅದ್ಭುತ ವ್ಯಕ್ತಿತ್ವ. ವೃತ್ತಿಯ ಜೊತೆ ಜೊತೆಯಲ್ಲಿ ಕನ್ನಡದ ಕಾಯಕದಲ್ಲಿರುವ ಇವರು ಸಾಹಿತಿಯಾಗಿ ಸ್ವಕ್ಷೇತ್ರವಾದ ಉಜ್ಜನಿ ಶ್ರೀ ಚೌಡೇಶ್ವರಿ ದೇವಿ ನೆಲೆಸಿರುವ ಬಗ್ಗೆ ಅಚ್ಚುಕಟ್ಟಾಗಿ ಕೃತಿ ರಚಿಸಿದ್ದು ಓದುಗರ ಕೈ ಸೇರಿದ್ದು ಈಗಾಗಲೇ ತುಮಕೂರು ಸಿದ್ದಗಂಗಾ ಶ್ರೀಗಳ ಗುರು ಹಿರಿಯರ ಮೆಚ್ಚುಗೆಗಳು ದೊರಕಿವೆ. ಬದುಕಿನ ಹೋರಾಟವೇ ಬೇರೆ, ಸಮಾಜ ಮುಖಿ ಕೆಲಸವೇ ಬೇರೆ ಎನ್ನುವಂತೆ ಕರಾಟೆ ಕ್ಷೇತ್ರದಲ್ಲಿ ಗುರುಗಳಾಗಿ ಹೆಸರು ಮಾಡಿದ್ದಾರೆ.



-ಶ್ರೀಮತಿ ರತ್ನಾ ಕಾಳೇಗೌಡ ,
ಹೆಸರಾಂತ ಸಾಹಿತಿಗಳು

ನಲ್ಮೆಯ ಗೆಳೆಯ ಚನ್ನೇಗೌಡ ಉಜ್ಜನಿ ಚಲುವಯ್ಯರವರು, ಕನ್ನಡಪರ ಚಿಂತಕರು, ಸಂಘಟಕರು, ಲೇಖಕರು, ಬರಹಗಾರರು, ಸಮಾಜ ಸೇವೆ, ಪರಿಸರ ಪ್ರೇಮಿಗಳು, ಕೋವಿಡ್ ಸೈನಿಕರು, ಶಿಕ್ಷಕರು, ವೃತ್ತಿಯಲ್ಲಿ ವೈದ್ಯಕೀಯ ಕ್ಷೇತ್ರದ ಅಧಿಕಾರಿಗಳು, ಈ ನಾಡಿನ ಹಿತ ಚಿಂತನೆಯ ಬಗ್ಗೆ ಅವರು ಹಲವಾರು ರೀತಿಯಲ್ಲಿ ಸಮಾಜಕ್ಕೆ ಕೊಡುಗೆ ನೀಡುತ್ತಿರುವುದು ಹೆಮ್ಮೆಯ ವಿಷಯವಾಗಿದೆ.



- ಡಾ.ಎ.ಎನ್.ವೆಂಕಟೇಶ್ ಉತ್ತನೂರು
ಅಕಾಡೆಮಿಕ್ ಕೌನ್ಸಿಲ್ ಮೆಂಬರ್
ಬೆಂಗಳೂರು ವಿಶ್ವವಿದ್ಯಾನಿಲಯ

**ನಿಸ್ವಾರ್ಥ ಸಾಧನೆಯ ಸರದಾರ, ಇನ್ನೂ ಅನೇಕ ರೀತಿಯಲ್ಲಿ ಬಣ್ಣಿಸಿ ವಿಜಯವಾಣಿ, ವಿಜಯ ಕರ್ನಾಟಕ, ಉದಯವಾಹಿನಿ, ವಿದ್ಯಾ ವಿವೇಕ, ಉದಯವಾಣಿ, ಸಂಜೆ ಪ್ರಭ, ಮುಸ್ಸಂಜೆ ವಾಣಿ, ಹಠಮಾರಿ ಪತ್ರಿಕೆ, ಕನ್ನಡ ಚಂದ, ಮಾಸ್ತಮ್ಮ ವಾಣಿ, ವಿದ್ಯಾ ವಾಹಿನಿ, ಇನ್ನೂ ಅನೇಕ ಪತ್ರಿಕೆಗಳಲ್ಲಿ ಸ್ವ-ಪರಿಚಯ ಹಾಗೂ ಸೇವಾ ಕಾರ್ಯಕ್ರಮಗಳ ಬಗ್ಗೆ ಪ್ರಕಟಗೊಂಡಿವೆ.**

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ**: ಮಕ್ಕಳೊಂದಿಗೆ ಆಟವಾಡುವುದು ನಿಮಗೆ ಯಾವುದೇ ಅದ್ಭುತ ಚಿಕಿತ್ಸೆಯ ಅನುಭವ ನೀಡುತ್ತದೆ. ಸಹೋದರ-ಸಹೋದರಿಯರ ಸಹಾಯದಿಂದ ಇಂದು ನೀವು ಅರ್ಥಿಕವಾಗಿ ಲಾಭವನ್ನು ಪಡೆಯಬಹುದು.

**ವೃಷಭ**: ಇಂದು ಮನೆಯ ಯಾವುದೇ ಎಲೆಕ್ಟ್ರಾನಿಕ್ ಸರಕುಗಳ ಕೆಟ್ಟು ಹೋಗುವ ಕಾರಣದಿಂದಾಗಿ ನಿಮ್ಮ ಹಣ ಖರ್ಚಾಗಬಹುದು. ಮಕ್ಕಳ ಅವರ ಸಾಧನೆಗಳಿಂದ ನೀವು ಹೆಮ್ಮೆ ಪಡುವಂತೆ ಮಾಡಬಹುದು.

**ಮಿಥುನ**: ಮನೆಯಿಂದ ಹೊರಗೆ ಹೋಗುವ ಮೂಲಕ, ನೀವು ತೆರೆದ ಗಾಳಿಯಲ್ಲಿ ನಡೆಯಲು ಬಯಸುತ್ತೀರಿ. ನಿಮ್ಮ ಮನಸ್ಸು ಶಾಂತವಾಗಿರುತ್ತದೆ, ಅದು ದಿನವಿಡೀ ನಿಮಗೆ ಪ್ರಯೋಜನವನ್ನು ನೀಡುತ್ತದೆ.

**ಕರ್ಕಾಟಕ**: ನಿಮ್ಮ ಸಂಗಾತಿಯ ಆರೋಗ್ಯದ ಚಿಂತೆ ಉಂಟುಮಾಡಬಹುದು ಮತ್ತು ಸ್ವಲ್ಪ ವೈದ್ಯಕೀಯ ಗಮನದ ಅಗತ್ಯವಿದೆ. ಒಂದು ಅಚ್ಚರಿಯ ಸಂದೇಶ ನಿಮಗೆ ಸಿಹಿ ಕನಸುಗಳನ್ನು ನೀಡುತ್ತದೆ.

**ಸಿಂಹ**: ನಿಮ್ಮ ಜೀವನ ಸಂಗಾತಿಯೊಂದಿಗೆ ಸೇರಿ ಇಂದು ನೀವು ಭವಿಷ್ಯಕ್ಕೆ ಯಾವುದೇ ಆರ್ಥಿಕ ಯೋಜನೆಯನ್ನು ಮಾಡಬಹುದು ಮತ್ತು ಈ ಯೋಜನೆ ಯಶಸ್ವಿಯಾಗಲಿದೆ ಎಂದು ಭರವಸೆ ಇದೆ.

**ಕನ್ಯಾ**: ಕುಟುಂಬದ ಸದಸ್ಯರು ಬೆಂಬಲ ನೀಡಿದರೂ ತುಂಬ ಬೇಡಿಕೆಯಿಡುತ್ತಾರೆ. ಪ್ರೀತಿಪಾತ್ರರೊಡನೆ ನಿಮ್ಮ ವೈಯಕ್ತಿಕ ಭಾವನೆಗಳು, ರಹಸ್ಯಗಳನ್ನು ಹಂಚಿಕೊಳ್ಳಲು ಇದು ಸರಿಯಾದ ಸಮಯವಲ್ಲ.

**ತುಲಾ**: ನೀವು ದೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯ ನ್ಯಾಯಾಲಯ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರೆ, ನೀವು ಅದರಲ್ಲಿ ವಿಜಯವನ್ನು ಪಡೆಯಬಹುದು.

**ವೃಶ್ಚಿಕ**: ಸಾಧ್ಯವಾದರೆ ದೀರ್ಘ ಪ್ರಯಾಣವನ್ನು ತಪ್ಪಿಸಿ. ಏಕೆಂದರೆ ನೀವು ಪ್ರಯಾಣಿಸಲು ತುಂಬಾ ದುರ್ಬಲರಾಗಿದ್ದೀರಿ ಹಾಗೂ ಇದು ಮತ್ತಷ್ಟು ನಿಮ್ಮನ್ನು ದುರ್ಬಲಗೊಳಿಸುತ್ತದೆ. ನಿಮ್ಮ ಕೋಪವನ್ನು ನಿಯಂತ್ರಿಸಿ.

**ಧನಸ್ಸು**: ವೈಯಕ್ತಿಕ ಸಮಸ್ಯೆಗಳು ಮಾನಸಿಕ ಸಂತೋಷವನ್ನು ಹಾಳು ಮಾಡಬಹುದು. ಆದರೆ ಒತ್ತಡವನ್ನು ನಿಭಾಯಿಸಲು ಆಸಕ್ತಿದಾಯಕವಾದದ್ದನ್ನೇನಾದರೂ ಓದುವ ಮೂಲಕ ಸ್ವಲ್ಪ ಮಾನಸಿಕ ವ್ಯಾಯಾಮ ಮಾಡಿಕೊಳ್ಳಿ.

**ಮಕರ**: ನೀವು ನಿಮ್ಮ ಮನೆಯ ಕಿರಿಯ ಸದಸ್ಯರೊಂದಿಗೆ ಸಮಯವನ್ನು ಕಳೆಯುವುದು ಕಲಿಯಬೇಕು. ನೀವು ಅದನ್ನು ಮಾಡದಿದ್ದರೆ, ನೀವು ಮನೆಯಲ್ಲಿ ಅಭಿಮಾನವನ್ನು ಬೆಳೆಸಲು ಸಾಧ್ಯವಾಗುವುದಿಲ್ಲ.

**ಕುಂಭ**: ನೀವು ಅಭಿಪ್ರಾಯ ನೀಡುವಾಗ ಇತರರ ಭಾವನೆಗಳನ್ನು ಪರಿಗಣಿಸಿ. ನೀವು ಮಾಡಿದ ಯಾವುದೇ ತಪ್ಪು ನಿರ್ಧಾರ ಅವರಿಗೆ ಮಾತ್ರ ವ್ಯತಿರಿಕ್ತ ಪರಿಣಾಮ ಉಂಟುಮಾಡದೇ ನಿಮಗೂ ಮಾನಸಿಕ ಒತ್ತಡ ನೀಡುತ್ತದೆ.

**ಮೀನ**: ಹೆಚ್ಚಿನ ಕ್ಯಾಲೊರಿ ಆಹಾರವನ್ನು ತಪ್ಪಿಸಿ ಮತ್ತು ನಿಮ್ಮ ವ್ಯಾಯಾಮವನ್ನು ಕೈಬಿಡಬೇಡಿ. ಹಣಕಾಸಿನಲ್ಲಿ ಸುಧಾರಣೆ ನೀವು ಅಗತ್ಯ ವಸ್ತುಗಳನ್ನು ಖರೀದಿಸುವುದನ್ನು ಅನುಕೂಲಕರವಾಗಿಸುತ್ತದೆ.

### ● ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಏರ್ಪಡಿಸಲಾಗಿರುವ ಆಯೋಜನೆ

# ಸರ್ಕಾರದ 2 ವರ್ಷಗಳ ಸಾಧನೆ ಹಾಗೂ ಯೋಜನೆಗಳ ಕುರಿತು ವಸ್ತುಪ್ರದರ್ಶನ

• ಉದಯವಾಹಿನಿ ಚಿತ್ರದುರ್ಗ


ಉದಯವಾಹಿನಿ ಚಿತ್ರ

ಸಾಧನೆಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ

ರಾಜ್ಯ ಸರ್ಕಾರದ ಎರಡು ವರ್ಷಗಳ ಅಭಿವೃದ್ಧಿ ಸಾಧನೆ ಹಾಗೂ ಪಂಚ ಗ್ಯಾರಂಟಿ ಯೋಜನೆಗಳನ್ನು ಬಿಂಬಿಸುವ ವಸ್ತು ಪ್ರದರ್ಶನಕ್ಕೆ ಯೋಜನೆ ಮತ್ತು ಸಾಂಖ್ಯಿಕ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಚಾಲನೆ ನೀಡಿದರು. ನಗರದ ಕೆಎಸ್‌ಆರ್‌ಟಿ ಬಸ್ ನಿಲ್ದಾಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಕರ್ನಾಟಕ ರಾಜ್ಯ ಸರ್ಕಾರದ ಎರಡು ವರ್ಷಗಳ ಸಾಧನೆ ಹಾಗೂ ಸರ್ಕಾರದ ವಿವಿಧ ಯೋಜನೆಗಳ ಕುರಿತ ಮಾಹಿತಿಯುಳ್ಳ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಿ, ಸರ್ಕಾರದ ಸಾಧನೆ ಫಲಕಗಳನ್ನು ವೀಕ್ಷಿಸಿದರು.

ವಸ್ತು ಪ್ರದರ್ಶನ ಮಳಿಗೆಯಲ್ಲಿ ಅಳವಡಿಸಲಾದ ಗ್ಯಾರಂಟಿ ಸಮರ್ಪಣೆ ಅಭಿವೃದ್ಧಿಯ ಸಂಕಲ್ಪ, ನಾಡಿನ ಏಳು ಕೋಟಿ ಜನರ ಬೆಳಕು ಗ್ಯಾರಂಟಿ ಬದುಕು ಫಲಕ, ಸರ್ಕಾರದ ಯೋಜನೆಗಳಾದ ಮಹಿಳೆಯರಿಗೆ ರಾಜ್ಯಾದ್ಯಂತ ಉಚಿತ ಪ್ರಯಾಣಿಸಲು ''ಶಕ್ತಿ ಯೋಜನೆ, ಬಡ, ಹಿಂದುಳಿದ ಸೇರಿದಂತೆ ಎಲ್ಲಾ ಮಹಿಳೆಯರು ಸ್ವಾವಲಂಬಿ ಬದುಕು ನಡೆಸಲು ಮನೆಯ ಯಜಮಾನಿಯರಿಗೆ ಪ್ರತಿ ತಿಂಗಳು ರೂ.2000 ಹಣ ನೀಡುವ ಗೃಹಲಕ್ಷ್ಮಿ ಯೋಜನೆ, ಹಸಿವು ಮುಕ್ತ ಕರ್ನಾಟಕದತ್ತ ದಾಪುಗಾಲಿಡುತ್ತಿರುವ ಅನ್ನಭಾಗ್ಯ, ಪದವಿ, ಡಿಪ್ಲೊಮಾ ಪೂರ್ಣಗೊಳಿಸಿದ ಯುವ ಜನತೆಗೆ ಉದ್ಯೋಗ ಪಡೆಯಲು ಅನುಕೂಲವಾಗಲು ಪ್ರತಿ ತಿಂಗಳು ಪದವೀಧರರಿಗೆ ರೂ.3000 ಹಾಗೂ ಡಿಪ್ಲೊಮೊ ಪದವಿದರರಿಗೆ ರೂ.1500 ನೀಡುವ ಯುವನಿಧಿ, ಪ್ರತಿ ಮನೆಗೆ ಉಚಿತ ವಿದ್ಯುತ್ ನೀಡುವ ಗೃಹಜ್ಯೋತಿ ಯೋಜನೆಗಳು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಜಾರಿಗೊಂಡಿದ್ದು, ಜನಸಾಮಾನ್ಯರ ಬದುಕಿಗೆ ಆಸರೆಯಾಗಿರುವ ಪಂಚ ಗ್ಯಾರಂಟಿ ಯೋಜನೆಗಳು ಸೇರಿದಂತೆ ಸರ್ಕಾರದ ವಿವಿಧ ಯೋಜನೆಗಳನ್ನೊಳಗೊಂಡ ಸಮಗ್ರ ಮಾಹಿತಿಯುಳ್ಳ ಫಲಕಗಳನ್ನು ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ಗಣ್ಯರು ವೀಕ್ಷಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಏರ್ಪಡಿಸಲಾಗಿರುವ ರಾಜ್ಯ ಸರ್ಕಾರದ ಎರಡು ವರ್ಷದ ಸಾಧನೆ ಹಾಗೂ ಪಂಚ ಗ್ಯಾರಂಟಿ ಯೋಜನೆಗಳನ್ನು ಬಿಂಬಿಸುವ ವಸ್ತು ಪ್ರದರ್ಶನ ಎಲ್ಲರ ಗಮನ ಸೆಳೆಯುತ್ತಿದೆ. ಈ ವಸ್ತು ಪ್ರದರ್ಶನದಲ್ಲಿ ನಾಡಿನ ಜನರ ಬದುಕು ಬೆಳಗಿಸಿದ ಗ್ಯಾರಂಟಿ ಯೋಜನೆಗಳ ಸಮಗ್ರ ಮಾಹಿತಿ, ಯಶೋಗಾಥೆಗಳನ್ನೊಳಗೊಂಡ ಪುಸ್ತಕವನ್ನು ರಾಜ್ಯದ ಮುಖ್ಯಮಂತ್ರಿಗಳಿಂದ ಪಡೆಯುವಂತೆ ಬಿಂಬಿಸುವ ಸೆಲ್ಫಿ ತೆಗೆದುಕೊಂಡು ಸಾರ್ವಜನಿಕರು ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಚಳ್ಳಕೆರೆ ಶಾಸಕರು ಹಾಗೂ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಟಿ. ರಘುಮೂರ್ತಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಂ.ಕೆ. ತಾಜ್‌ಪೀರ್, ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನಾ ಪ್ರಾಧಿಕಾರ ಅಧ್ಯಕ್ಷ ಆರ್.ಶಿವಣ್ಣ, ಸೇರಿದಂತೆ ಗ್ಯಾರಂಟಿ ಯೋಜನಾ ಪ್ರಾಧಿಕಾರದ ಸದಸ್ಯರು ಮತ್ತಿತರರು ಇದ್ದರು.

### ಅಭಿವೃದ್ಧಿ ಸಾಧನೆಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ರಾಜ್ಯ ಸರ್ಕಾರದ ಎರಡು ವರ್ಷಗಳ ಸಾಧನೆ ಹಾಗೂ ಯೋಜನೆಗಳನ್ನು ಬಿಂಬಿಸುವ ವಸ್ತು ಪ್ರದರ್ಶನವನ್ನು ನಗರದ ಕೆಎಸ್‌ಆರ್‌ಟಿ ಬಸ್ ನಿಲ್ದಾಣದಲ್ಲಿ ಆಯೋಜಿಸಲಾಗಿದ್ದು, ಜೂನ್ 28 ರಿಂದ 30 ರವರೆಗೆ ವಸ್ತುಪ್ರದರ್ಶನವು ಸಾರ್ವಜನಿಕರ ವೀಕ್ಷಣೆಗೆ ಲಭ್ಯವಿರುತ್ತದೆ. ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಗಳ ಲಾಭ ಪ್ರತಿಯೊಬ್ಬ ಅರ್ಹ ಫಲಾನುಭವಿಗಳಿಗೆ ದೊರಕಿಸುವ ನಿಟ್ಟನಲ್ಲಿ ಗ್ಯಾರಂಟಿ ಯೋಜನೆಗಳು ಒಳಗೊಂಡಂತೆ ಸರ್ಕಾರದ ಜನಪರ ಯೋಜನೆಗಳ, ಅಭಿವೃದ್ಧಿ ಸಾಧನೆಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಿಲು ವಸ್ತು ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ವಾರ್ತಾಧಿಕಾರಿ ಬಿ.ವಿ.ತುಕಾರಾಂರಾವ್ ಮಾಹಿತಿ ನೀಡಿದರು.**

### ಸಂತಸ ವ್ಯಕ್ತಪಡಿಸಿದರು

**ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಭಾವಚಿತ್ರಗಳನ್ನು ಒಳಗೊಂಡ ಸೆಲ್ಫಿ ಪಾಯಿಂಟ್‌ಗಳನ್ನು ವೀಕ್ಷಿಸಿ ಪ್ರಶಂಸಿದ ಜಿಲ್ಲಾ ಉಸ್ತುವಾರಿ ಸಚಿವರು, ಈ ಸೆಲ್ಫಿ ಪಾಯಿಂಟ್‌ಗಳಲ್ಲಿ ಚಳ್ಳಕೆರೆ ಶಾಸಕರಾದ ರಘುಮೂರ್ತಿ ಅವರೊಂದಿಗೆ ನಿಂತು ಪೋಟೋ ಕ್ಲಿಕ್ಕಿಸಿಕೊಂಡರು. ಕಾರ್ಯಕ್ರಮಕ್ಕೆ ಆಗಮಿಸಿದ್ದ ವಿವಿಧ ಗಣ್ಯರು ಕೂಡ ಸೆಲ್ಫಿಪಾಯಿಂಟ್‌ನಲ್ಲಿ ನಿಂತು ಫೋಟೊ ತೆಗೆಯಿಸಿಕೊಂಡು ಸಂತಸ ವ್ಯಕ್ತಪಡಿಸಿದರು.**

## ವಿವಿಧ ಸಾಧನೆಗೈದ ಸಾಧಕರಿಗೆ ಹಾ.ಚ.ಹವ್ಯಾಸಿ ಕಲಾವಿದರ ನಾಟ್ಯ ಸಂಘದಿಂದ ಸನ್ಮಾನ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಾ ಹಾರಕೂಡ ಶ್ರೀ ಚನ್ನಬಸವೇಶ್ವರ ಹವ್ಯಾಸಿ ಕಲಾವಿದರ ನಾಟ್ಯ ಸಂಘದಿಂದ ಹಮ್ಮಿಕೊಂಡ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಹಾಗೂ ಡಾಕ್ಟರೇಟ್ ಪದವಿ ಪಡೆದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಮಲ್ಲಿಕಾರ್ಜುನ ಪಾಲಾಮೋರ್ ,ಮಹಿಳಾ ಸಬಲೀಕರಣ ಪ್ರಶಸ್ತಿ ಪಡೆದ ಸ್ತ್ರೀ ಶಕ್ತಿ ಒಕ್ಕೂಟದ ಅಧ್ಯಕ್ಷೆ ನರಸಮ್ಮ ಲಕ್ಷ್ಮಣ ಆವುಂಟಿ ಮತ್ತು ಬರಹಗಾರರ ಸಂಘದ ರಾಜ್ಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ ಶಂಕರಜೀ ಹೂವಿನಹಿಪ್ಪರಗಿ, ಕನಕಪುರ ಗ್ರಾ.ಪಂ.ಅಧ್ಯಕ್ಷರಾಗಿ ಆಯ್ಕೆಯಾದ ಸುನೀಲ ಕುಮಾರ ಮೇತ್ರಿ,ರೈತ ಸಂಘದ ಜಿಲ್ಲಾ ಕಾರ್ಯದರ್ಶಿಯಾಗಿ ನೇಮಕವಾದ ಶಿವರಾಜ ಪಾಟೀಲ ಗೋಣಗಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.


## ಕೋಳಿ ಅಂಕದ ಮೇಲೆ ದಾಳಿ: ಮೂವರ ಬಂಧನ

• ಉದಯವಾಹಿನಿ, ಭಟ್ಕಳ

ತಾಲ್ಲೂಕಿನ ಸಬ್ಬತ್ತಿ ಅರಣ್ಯ ಪ್ರದೇಶದಲ್ಲಿ ಶನಿವಾರ ನಡೆಯುತ್ತಿದ್ದ ಅಕ್ರಮ ಕೋಳಿ ಅಂಕದ ಮೇಲೆ ಶನಿವಾರ ದಾಳಿ ನಡೆಸಿದ ಗ್ರಾಮೀಣ ಠಾಣೆಯ ಪೊಲೀಸರು ಮೂವರನ್ನು ಬಂಧಿಸಿ, ಆಟಕ್ಕೆ ಬಳಸಿದ 3.56 ಲಕ್ಷ ಹಣವನ್ನು ವಶಪಡಿಸಿಕೊಂಡಿದ್ದಾರೆ. ತಾಲ್ಲೂಕಿನ ಬೇಂಗ್ರೆ ಸಾರದಹೊಳೆಯ ನಿವಾಸಿ ಜಗದೀಶ ಮಾಸ್ತಿ ನಾಯ್ಕ (30), ಹಡೀಲ್ ನಿವಾಸಿ ಶಶಿಕಾಂತ ತಂದೆ ನಾಗೇಶ ನಾಯ್ಕ (26), ಸಬ್ಬತ್ತಿಯ ನಾರಾಯಣ ಕುಪ್ಪಯ್ಯ ನಾಯ್ಕ (35) ಬಂಧಿತ ಆರೋಪಿಗಳು. ದಾಳಿ ವೇಳೆ ಓಡಿ ಹೋದ ತಲಾಂದ ನಿವಾಸಿ ಗಣಪತಿ ವಿಠಲ, ಮುಟ್ಟಳ್ಳಿ ನಿವಾಸಿಗಳಾದ ಧನು ಮತ್ತು ಪ್ರದೀಪ, ಶಿರೂರು ನಿವಾಸಿಗಳಾದ ಸಂತೋಷ , ಸುಪ್ರೀತ ಹಾಗೂ ಬೈಂದೂರಿನ ನಿವಾಸಿ ರಾಜು ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಠಾಣಾ ಪಿಎಸ್‌ಐ ಭರಮಪ್ಪ ಬೆಳಗಲಿ, ಎಎಸ್‌ಐ ರಾಜೇಶ ಕೊರ್ಗ, ಸಿಬ್ಬಂದಿ ನಿಂಗನಗೌಡ ಪಾಟೀಲ, ಮಂಜುನಾಥ ಖಾರ್ವಿ, ಕಾರ್ಯಚರಣೆಯಲ್ಲಿ ಭಾಗವಹಿಸಿದ್ದರು.

## ಮೊಹರಂ ಆಟವಿ ಕಥಾಲ ಜು. 5 ರಂದು

• ಉದಯವಾಹಿನಿ ಇಂಡಿ


ಉದಯವಾಹಿನಿ ಚಿತ್ರ

ಇಂಡಿಯ ಪ್ರಸಿದ್ದ ಹಿಂದು ಮುಸ್ಲಿಮ್ ಭಾವೈಕ್ಯದ ಮೊಹರಮ್ ಹಬ್ಬದ ಆಟವಿ ಖತಾಲ್ ಜು. 5 ರಂದು ಶನಿವಾರ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಜು. 4 ರಂದು ಶುಕ್ರವಾರ ಮಧ್ಯಾನ್ಹ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಝೂಲ್ ಫಕೀರ ಮೆರವಣಿಗೆ ನಡೆಯುತ್ತದೆ.

ಶನಿವಾರ ಜು. 5 ರಂದು ಆಟವಿಖತಾಲ ಮತ್ತು ಜು. 6 ರಂದು ರವಿವಾರ ನಗರದ ಪ್ರಮುಖ ಬೀದಿಗಳಲ್ಲಿ ಹಸನ, ಹುಸೇನ ಮತ್ತು ಕಾಸಿಮರ ದೇವರ ಮೆರವಣಿಗೆ ನಡೆಯುತ್ತದೆ. ಇಂಡಿಯ ಮೊಹರಂಗೆ ವಿಜಯಪುರ, ಬಾಗಲಕೋಟ, ಕಲಬುರಗಿ, ಹೈದ್ರಾಬಾದ, ಪೂನಾ, ಮುಂಬಯಿ ಸೇರಿದಂತೆ ಹಲವಾರು ಕಡೆಗಳಿಂದ ಭಕ್ತರು ಬರುತ್ತಾರೆ. ತಾಲ್ಲೂಕಿನ ವಿವಿಧ ಗ್ರಾಮಗಳಿಂದ ಬಂದ ಕರಬಲ್ ಮೆರವಣಿಗೆ, ಝೂಲ್ ಫಕೀರ, ಹುಲಿ ಕುಣಿತ, ಭಡಂಗ ಮೆರವಣಿಗೆ ಸೇರಿದಂತೆ ಅನೇಕ ಗುಂಪುಗಳಿಂದ ತಮ್ಮ ಭಕ್ತಿ ಸೇವೆ ಸಲ್ಲಿಸುವದು ಇಲ್ಲಿಯ ಮೊಹರಂ ವಿಶೇಷ.

ಮೊಹರಂ ನಿಮಿತ್ಯ ಈಗಾಗಲೇ ಪುರಸಭೆ ಯಿಂದ ಕುಡಿಯುವ ನೀರಿನ ವ್ಯವಸ್ಥೆ, ಸ್ವಚ್ಚತೆ ಕಾರ್ಯ ನಡೆದಿದ್ದು ಪ್ರತಿ ವರ್ಷ ಪೋಲಿಸ ಇಲಾಖೆ ಶಾಂತಿ ಸುವ್ಯವಸ್ಥೆ ಕಾಪಾಡುವಲ್ಲಿ ಸಹಕರಿಸುತ್ತದೆ ಅದಲ್ಲದೆ ದೇವಸ್ಥಾನದಲ್ಲಿ 6 ಮತ್ತು ಹೊರಗಡೆ 20 ಸಿಸಿಟಿವಿ ಕ್ಯಾಮೆರಾ ವ್ಯವಸ್ಥೆ ಮಾಡಲಾಗಿದೆ ಎಂದು ಜಾತ್ರಾ ಸಮಿತಿಯವರು ತಿಳಿಸಿದ್ದಾರೆ.

## ಪೋಲಕಪಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ: ಠಾಕೂರ್ ನೇಮಕ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ಪೋಲಕಪಳ್ಳಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನಡೆದ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಮೋಹನ್ ಸಿಂಗ್ ಠಾಕೂರ್ ಹಾಗೂ ಉಪಾಧ್ಯಕ್ಷರಾಗಿ ಬಾಬುರಾವ ಪೂಜಾರಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ರೀಟರ್ನಿಂಗ್ ಅಧಿಕಾರಿ ಶ್ರೀಜೀವನ್ ಧನಕರ್,ಸಿಇಓ ಸಂಜೀವಕುಮಾರ ಮುಲ್ಗಿ ತಿಳಿಸಿದ್ದಾರೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ಚುನಾವಣೆಯಲ್ಲಿ ಉಮೇದವಾರರಾಗಿ ಸಾಮಾನ್ಯ, ಮಹಿಳೆ,ಪ.ಜಾ.ಪ.ಪಂ.ಹಿಂದುಳಿದ ವರ್ಗ, ಮತಕ್ಷೇತ್ರದಿಂದ ನಾಮಪತ್ರಗಳನ್ನು ಸಲ್ಲಿಸಿರುವ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅದರಂತೆ ಅಧ್ಯಕ್ಷ ಉಪಾಧ್ಯಕ್ಷ ನಡೆದ ಚುನಾವಣೆಯಲ್ಲಿಯೂ ಸಹ ಸಅಧ್ಯಕ್ಷ ಠಾಕೂರ್ ಉಪಾಧ್ಯಕ್ಷ ಪೂಜಾರಿ ಅವಿರೋಧ ಆಯ್ಕೆಯಾದರು.

ಅವಿರೋಧವಾಗಿ ಆಯ್ಕೆಯಾದ ಸಂಘದ ನಿರ್ದೇಶಕರಾದ ಅಜೀತ ಪಾಟೀಲ,ಮೋಹನ್ ಸಿಂಗ್ ಠಾಕೂರ್,ಬಸವರಾಜ ಹಿತ್ತಲ,ಸುರೇಶ ಹುಡುಗಿ,ಶ್ರೀಧರ ಪಾಟೀಲ,ಅಶೋಕ ನರಸರೆಡ್ಡಿ,ಎಂಡಿ ಸಾಜೀದ್,ಬಾಬುರಾವ ಪೂಜಾರಿ,ರೂಪಕಲಾ ಕಟ್ಟಿಮನಿ,ಗೌರಮ್ಮ ಶಿವಶರಣಯ್ಯ,ಪಟ್ಟರಾಜ ಮೇತ್ರಿ,ಚಂದ್ರಪ್ಪ ಪೂಜಾರಿ ನಿರ್ದೇಶಕರಾಗಿ ಆಯ್ಕೆಯಾಗಿದ್ದರು.

ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆ ಮುಕ್ತಾಯ ನಂತರ ಸದಸ್ಯರು ಅಭಿಮಾನಿಗಳು ಸಿಹಿ ಹಂಚಿ ಸಂಭ್ರಮಿಸಿ ಅಭಿಮಾನಿಗಳು ಶಾಲು ಹೂಮಾಲೆ ಹಾಕಿ ಸನ್ಮಾನಿಸಿದರು.


ಉದಯವಾಹಿನಿ ಚಿತ್ರ

## ಹೆಚ್ಚುವರಿ ಹಣ ವಸೂಲಿ ಗ್ರಾಮ ಒನ್ ಮಾನ್ಯತೆ ರದ್ದು

• ಉದಯವಾಹಿನಿ, ರಿಪ್ಪನ್‌ಪೇಟೆ

ಸಕಾಲ ಸೇವೆಗಳಿಗೆ ಸರ್ಕಾರ ನಿಗದಿಪಡಿಸಿಕ್ಕಿಂತ ಹೆಚ್ಚು ಹಣವನ್ನು ಗ್ರಾಹಕರಿಂದ ಪಡೆಯುತ್ತಿದ್ದ ಹಿನ್ನೆಲೆಯಲ್ಲಿ ಪಟ್ಟಣದ ಸಾಗರ ರಸ್ತೆಯ ಗ್ರಾಮ ಒನ್ ಕೇಂದ್ರದ ಮಾನ್ಯತೆಯನ್ನು ಹೊಸನಗರ ತಹಶೀಲ್ದಾರ್ ರಶ್ಮಿ ಹಾಲೇಶ್ ರದ್ದುಪಡಿಸಿದ್ದಾರೆ.

ಆಧಾರ್ ಕಾರ್ಡ್‌ನಲ್ಲಿ ನಂಬರ್ ಬದಲಾವಣೆಗೆ 50ರ ಬದಲಾಗಿ 350, ಪಾನ್‌ಕಾರ್ಡ್ ಹೆಸರು ಬದಲಾವಣೆಗೆ 150ರ ಬದಲಿಗೆ 1,000 ಹಣ ವಸೂಲಿ ಮಾಡುತ್ತಿರುವ ಕುರಿತು ನೀರು ಸಲ್ಲಿಕೆಯಾಗಿತ್ತು. ಈ ಬಗ್ಗೆ ನಾಡಕಚೇರಿ ಉಪ ತಹಶೀಲ್ದಾರ್ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೇಲ್ನೋಟಕ್ಕೆ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಸೂಚನೆಯ ಮೇರೆಗೆ ಕಂದಾಯ ಇಲಾಖೆಯ ಸ್ಥಳೀಯ ಅಧಿಕಾರಿಗಳು ನಾಮಫಲಕ ತೆರವುಗೊಳಿಸಿದರು.

## ಟ್ಯಾಂಕರ್ ನೀರು ಪೂರೈಕೆಗೆ ಕ್ರಮ

• ಉದಯವಾಹಿನಿ, ಗದಗ

ವಿವಿಧ ತಾಂತ್ರಿಕ ದೋಷಗಳಿಂದ ಕಳೆದ 10 ದಿನಗಳಿಂದ ಅವಳಿ ನಗರಕ್ಕೆ ತುಂಗಭದ್ರಾ ನದಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಿತ್ತು. ಜೂನ್ 28ರಿಂದ ಕುಡಿಯುವ ನೀರಿನ ಪೂರೈಕೆ ಪ್ರಾರಂಭಿಸಲಾಗಿದೆ. ಒಂದು ವೇಳೆ ನೀರು ಪೂರೈಕೆಯಲ್ಲಿ ವಿಳಂಬವಾದ ಪ್ರದೇಶಗಳಿಗೆ ನಗರಸಭೆಯಿಂದ ನಿಯೋಜಿಸಲಾದ ಟ್ಯಾಂಕರ್‌ಗಳ ಮೂಲಕ ನೀರು ಪೂರೈಕೆಯನ್ನು ಉಚಿತವಾಗಿ ಮಾಡಲಾಗುವುದು ಎಂದು ನಗರಸಭೆ ಪೌರಾಯುಕ್ತ ರಮೇಶ್ ಪವಾರ ತಿಳಿಸಿದ್ದಾರೆ.

ಮುಂದಿನ ದಿನಗಳಲ್ಲಿ ನೀರಿನ ಪೂರೈಕೆಯ ಸಮಸ್ಯೆ ಉಂಟಾಗಿದಲ್ಲಿ ವಾರ್ಡ್ ನಂ.1 ರಿಂದ 17 – ಸಿಂಧೂ, ಕಿರಿಯ ಎಂಜಿನಿಯರ್ ಮೊಬೈಲ್ ಸಂಖ್ಯೆ: 80884 98021 ಹಾಗೂ ವಾರ್ಡ್ ನಂ.18ರಿಂದ 35ರವರೆಗೆ ಸಿದ್ದು ಹುಣಸೀಮರದ, ಕಿರಿಯ ಎಂಜಿನಿಯರ್ ಮೊಬೈಲ್ ಸಂಖ್ಯೆ: 8088782451 ಸಂಪರ್ಕಿಸಿ ನೀರಿನ ಟ್ಯಾಂಕರ್ ಪಡೆಯಬಹುದು ಎಂದು ತಿಳಿಸಿದ್ದಾರೆ.

## ಬಂದ್ ಮಾಡಲು ಒತ್ತಡ ಕಲ್ಲು ಹಿಡಿದು ಬೆದರಿಕೆ

• ಉದಯವಾಹಿನಿ, ದಾವಣಗೆರೆ

ಭದ್ರಾ ಬಲದಂಡೆ ನಾಲೆ ಸೀಳಿ ಚಿಕ್ಕಮಗಳೂರು ಹಾಗೂ ಚಿತ್ರದುರ್ಗ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸುವುದನ್ನು ವಿರೋಧಿಸಿ ಕರೆ ನೀಡಿದ್ದ ದಾವಣಗೆರೆ ಬಂದ್ ವೇಳೆ ಕೆಲ ಪ್ರತಿಭಟನಕಾರರು ಕೈಯಲ್ಲಿ ಕಲ್ಲು ಹಿಡಿದು ಬಸ್, ಆಟೊ ಚಾಲಕರು ಹಾಗೂ ಅಂಗಡಿಗಳ ವ್ಯಾಪಾರಿಗಳಿಗೆ ಬೆದರಿಕೆಯೊಡ್ಡಿದರು, ಅವಾಚ್ಯ ಶಬ್ದಗಳಿದ ನಿಂದಿಸಿದರು.

ಬಿಜೆಪಿ ರೈತ ಮೋರ್ಚಾ ಹಾಗೂ ಜಿಲ್ಲಾ ರೈತ ಒಕ್ಕೂಟದ ವತಿಯಿಂದ ಬಂದ್‌ಗೆ ಕರೆ ನೀಡಲಾಗಿತ್ತು. ಮುಂಜಾನೆಯೇ ರಸ್ತೆಗಿಳಿದ ಬಿಜೆಪಿ ಮುಖಂಡರು ಪ್ರತಿಭಟನಾ ರ‍್ಯಾಲಿ ನಡೆಸಿ, ಅಂಗಡಿ ಮುಂಗಟ್ಟುಗಳನ್ನು ಮುಚ್ಚುವಂತೆ ಒತ್ತಾಯಿಸಿದರ ಈ ವೇಳೆ ಬಿಜೆಪಿ ರೈತ ಮೋರ್ಚಾದ ರಾಜ್ಯ ಘಟಕದ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್ ಅವರು ಕೈಯಲ್ಲಿ ಕಲ್ಲು ಹಿಡಿದ ಬಸ್, ಆಟೊ ಚಾಲಕರು, ಹೋಟೆಲ್ ಮತ್ತು ಇನ್ನಿತರ ಅಂಗಡಿಗಳ ವ್ಯಾಪಾರಿಗಳಿಗೆ ಬೆದರಿಕೆಯೊಡ್ಡಿದರು. ಮತ್ತೆ ರಸ್ತೆಗಳಲ್ಲಿ ಕಾಣಿಸಿಕೊಂಡರೆ ಕಲ್ಲೇಟು ಬೀಳುತ್ತೆ ಎಂದು ಹೆದರಿಸಿದರು. ದೊಡ್ಡ ಗಾತ್ರದ ಕಲ್ಲು ಹಿಡಿದು ಬೇಕರಿಯೊಂದರತ್ತ ನುಗ್ಗಿದರು. ಅವರ ಜೊತೆಗಿದ್ದವರು ಬೇಕರಿ ಸಿಬ್ಬಂದಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದರು.

## ಮೈಕ್ರೋ ಪೈನಾನ್ಸ್ ಕಿರುಕುಳ ತಾಳಲಾರದೇ ಸೈಯದ್ ಸಲೀಂ ನೇಣುಬಿಗಿದು ಆತ್ಮಹತ್ಯೆ: ಪ್ರಕರಣ ದಾಖಲು

• ಉದಯವಾಹಿನಿ, ಚಿಂಚೋಳಿ


ಉದಯವಾಹಿನಿ ಚಿತ್ರ

ತಾಲ್ಲೂಕಿನ ಸುಲೇಪೇಟ ಗ್ರಾಮದಲ್ಲಿ ಮೈಕ್ರೋ ಫೈನಾನ್ಸ್ ಸಿಬ್ಬಂದಿ ಕಿರುಕುಳ ತಾಳಲಾರದೆ ಸೈಯದ್ ಸಲೀಂ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ಸುಲೇಪೇಟ ಠಾಣೆ ವ್ಯಾಪ್ತಿಯಲ್ಲಿ ನಡದಿದೆ. ಮೈಕ್ರೋ ಫೈನಾನ್ಸ್‌ನಲ್ಲಿ ಸಿಬ್ಬಂದಿಗಳ ಕಿರುಕುಳ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಮೃತನ ಪತ್ನಿ ಸುಲೇಪೇಟ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ ಎಂದು ಪೋಲೀಸರು ತಿಳಿಸಿದ್ದಾರೆ.

ಈ ಹಿನ್ನೆಯಲ್ಲಿ ಸುಲೇಪೇಟ ಗ್ರಾಮದ ಬಸವೇಶ್ವರ ವೃತದಲ್ಲಿ ಮೈಕ್ರೋ ಫೈನಾನ್ಸ್ ಕಂಪನಿಗಳು ಜನರ ಮೇಲೆ ನಡೆಸುತ್ತಿರುವ ದೌರ್ಜನ್ಯ ಮತ್ತು ದಬ್ಬಾಳಿಕೆಯನ್ನು ಖಂಡಿಸಿ ಗ್ರಾಮಸ್ಥರ ರಸ್ತೆ ತಡೆದು ಶವ ಇಟ್ಟು ಬೃಹತ್ ಪ್ರತಿಭಟನೆ ಮಾಡಿದರು. ಮೈಕ್ರೋ ಫೈನಾನ್ಸ್ ನವರ ಕಿರುಕುಳ ತಾಳಲಾರದೆ ಸಾಲು ಸಾಲು ಆತ್ಮಹತ್ಯೆಗಳು ನಡೆಯುತ್ತಿವೆ,ಜನಸಾಮಾನ್ಯರಿಗೆ ತೊಂದರೆ ಕೊಟ್ಟು ವಸೂಲಿ ಮಾಡಬಾರದೆಂದು ಮೈಕ್ರೋ ಫೈನಾನ್ಸ್ ಕಂಪನಿಗಳಿಗೆ ಸರಕಾರ ಆದೇಶ ಮಾಡಿದ್ದರೂ ಕೂಡಾ ಮೈಕ್ರೋ ಫೈನಾನ್ಸ್ ಕಂಪನಿಗಳು ಆದೇಶ ಪಾಲಿಸುತ್ತಿಲ್ಲ, ಆದ್ದರಿಂದ ಸಂಬಂಧಪಟ್ಟ ಇಲಾಖೆಗಳಿಗೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಬೇಕು, ಮೈಕ್ರೋಫೈನಾನ್ಸ್ ಕಿರಿಕುಳ ತಡೆಯಬೇಕು, ಮೃತನ ಕುಟುಂಬಕ್ಕೆ 1ಕೋಟಿ ಪರಿಹಾರ ನೀಡಬೇಕು,ಮೃತನ ಕುಟುಂಬದವರಿಗೆ ಸರಕಾರಿ ನೌಕರಿ ನೀಡಬೇಕು,ಮೃತನ ಸಂಪೂರ್ಣ ಸಾಲ ಮನ್ನಾ ಮಾಡಿ ಸೂಕ್ತ ಪರಿಹಾರ ನೀಡಬೇಕು,ಮುಂದಿನ ದಿನಗಳಲ್ಲಿ ಇಂತಹ ಘಟನೆ ನಡೆಯದಂತೆ ನೋಡಿಕೊಳ್ಳಬೇಕು ಎಂದು ಒತ್ತಾಯಿಸಿ ಕಂದಾಯ ಅಧಿಕಾರಿ ಕೇಶವರಾವ ಕುಲಕರ್ಣಿ ಅವರಿಗೆ ಮನವಿ ಪತ್ರ ನೀಡಿದರು.

## ಬೆಳೆ ಸಮೀಕ್ಷೆ ಆ್ಯಪ್ ಬಿಡುಗಡೆ : ನಿಮ್ಮ ಬೆಳೆ ನೀವೇ ನೋಂದಾಯಿಸಿಕೊಳ್ಳಿ

• ಉದಯವಾಹಿನಿ, ಕಡೂರು

ರೈತರು ತಮ್ಮ ಬೆಳೆಗಳನ್ನು ತಾವೇ ನೋಂದಾಯಿಸಿಕೊಳ್ಳುವ ಜತೆಗೆ ವಿಮೆ ಪರಿಹಾರ ಸೇರಿದಂತೆ ಸರ್ಕಾರದ ಸೌಲಭ್ಯ ಪಡೆಯಲು ನೆರವಾಗುವಂತೆ ಬೆಳೆ ಸಮೀಕ್ಷೆಗೆ ಮೊಬೈಲ್ ಅಪ್ಲಿಕೇಷನ್ ಬಿಡುಗಡೆ ಮಾಡಲಾಗಿದೆ ಎಂದು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ಅಶೋಕ್ ಮಾಹಿತಿ ನೀಡಿದರು.

ಸರ್ಕಾರ ಬೆಳೆ ವಿಮೆ, ಬರ, ಅತಿವೃಷ್ಟಿಯಂತಹ ಹಾನಿಗಳಿಗೆ ಪರಿಹಾರ ಒದಗಿಸುವ ಜತೆಗೆ ಬೆಂಬಲ ಬೆಲೆ ಯೋಜನೆಯಡಿ ಧಾನ್ಯಗಳ ಮಾರಾಟ, ಬ್ಯಾಂಕ್ ಸಾಲ ಇತ್ಯಾದಿಗಳಿಗೆ ಬೆಳೆ ಸಮೀಕ್ಷೆಯನ್ನು ಕಡ್ಡಾಯಗೊಳಿಸಿದ್ದು, ಬೆಳೆ ಸಮೀಕ್ಷೆ ದತ್ತಾಂಶದಿಂದ ಮಾಹಿತಿ ಪಡೆಯಲಿದೆ. ಆದ್ದರಿಂದ ಎಲ್ಲಾ ರೈತರು ತಪ್ಪದೆ ಬೆಳೆ ಸಮೀಕ್ಷೆ ಕೈಗೊಳ್ಳಬೇಕು. ರೈತರು ತಮ್ಮ ಜಮೀನಿನಲ್ಲಿ ನಿಂತು ಆಧಾರ್ ಸಂಖ್ಯೆ ನಮೂದಿಸಿ ಒಟಿಪಿ ಪಡೆದು ದೃಢಿಕರಿಸಬೇಕು.

ಹೆಸರು, ಹುಟ್ಟಿದ ದಿನಾಂಕ, ವಿಳಾಸ, ಮೊಬೈಲ್ ಸಂಖ್ಯೆ ನಮೂದಿಸಬೇಕು. ಎಫ್‌ಐಡಿ, ಪಹಣಿಗೂ ಆಧಾರ್ ಲಿಂಕ್ ಆಗಿರುವುದರಿಂದ ಸರ್ವೆ ನಂಬರ್ ಮೇಲೆ ಕ್ಲಿಕ್ ಮಾಡಿ, ಸೂಕ್ತ ಹಿಸ್ಸಾ ದಾಖಲಿಸಿ, ಬೆಳೆ ವಿವರ, ಬಿತ್ತನೆ ಮಾಡಿದ ದಿನಾಂಕ, ನೀರಾವರಿ ಅಥವಾ ಮಳೆಯ ಆಶ್ರಿತ ಎಂಬುದನ್ನು ದಾಖಲಿಸಬೇಕು. ನಂತರ ಬೆಳೆಯ ಚಿತ್ರವನ್ನು ತೆಗೆದು ಅಪ್‌ಲೋಡ್ ಮಾಡಬೇಕು ಎಂದರು. ಬೆಳೆ ದರ್ಶಕ್‌ನಲ್ಲಿ ವೀಕ್ಷಣೆಗೆ ರೈತರಿಗೆ ಅವಕಾಶ ಇದೆ. ಬೆಳೆ ಸಮೀಕ್ಷೆಯಾದ ನಂತರ ದಾಖಲಾದ ಬೆಳೆಗಳ ವಿವರವನ್ನು ಬೆಳೆ ದರ್ಶಕ್' ಆ್ಯಪ್‌ನಲ್ಲಿ ವೀಕ್ಷಿಸಬಹುದು. ಇದನ್ನೂ ಸಹ ಪ್ಲೇ ಸ್ಟೋರ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬೇಕು. ತಪ್ಪಾಗಿ ನಮೂದಿಸಿದ್ದರೆ ಆ್ಯಪ್‌ನಲ್ಲೇ ಆಕ್ಷೇಪಣೆ ಸಲ್ಲಿಸಲು ಅವಕಾಶವಿರುತ್ತದೆ.


ಉದಯವಾಹಿನಿ ಚಿತ್ರ

**2025-26ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆಗೆ ರೈತರು ಸ್ವತಃ ತಮ್ಮ ಜಮೀನುಗಳಲ್ಲಿನ ಬೆಳೆ ಸಮೀಕ್ಷೆ ಮಾಡಿ, ಪಹಣಿಯಲ್ಲಿ ನೋಂದಾಯಿಸಬಹುದಾಗಿದೆ. ರೈತರು ತಮ್ಮ ಮೊಬೈಲ್‌ನಲ್ಲಿ ಗೂಗಲ್ ಪ್ಲೇ ಸ್ಟೋರ್‌ನಲ್ಲಿ Kharif crop survey -25 ಡೌನ್‌ಲೋಡ್ ಮಾಡಿಕೊಳ್ಳಿ, ಕಳೆದ ಬಾರಿ ಡೌನ್‌ಲೋಡ್ ಮಾಡಿದ್ದರೆ ಅಪ್‌ಡೇಟ್ ಮಾಡಿಕೊಳ್ಳಿ -ಅಶೋಕ್**

## ನಿರ್ವಹಣೆ ಕೊರತೆ: ಪಾಳು ಬಿದ್ದ ಉದ್ಯಾನ

• ಉದಯವಾಹಿನಿ, ಮಹಾಲಿಂಗಪುರ

ಪಟ್ಟಣದ ವಿವಿಧೆಡೆ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಆರಂಭಿಸಿರುವ ಉದ್ಯಾನಗಳು ಸಮರ್ಪಕ ನಿರ್ವಹಣೆ ಇಲ್ಲದೆ ಪಾಳು ಬಿದ್ದಿದ್ದು, ಕುಡುಕರ ಆಶ್ರಯ ತಾಣವಾಗಿ ಮಾರ್ಪಟ್ಟಿವೆ.

ಮಹಾಂತೇಶ ನಗರ, ರಬಕವಿ ರಸ್ತೆ, ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದ ಬಳಿ ತಲಾ ಒಂದು ಹಾಗೂ ಶಾಂತಿನಿಕೇತನ ಕಾಲೋನಿಯಲ್ಲಿ ಎರಡು ಉದ್ಯಾನಗಳಿದ್ದು, ಒಂದೊಂದು ಉದ್ಯಾನದ್ದು ಒಂದೊಂದು ರೀತಿಯ ಅವ್ಯವಸ್ಥೆಗಳು ಗೋಚರಿಸುತ್ತವೆ. ಜಯನಗರ ಬಡಾವಣೆಯಲ್ಲಿ ಉದ್ಯಾನಕ್ಕೆ ಜಾಗ ಮೀಸಲಿಟ್ಟು ಹತ್ತು ವರ್ಷವಾದರೂ ಆರಂಭವಾಗಿಲ್ಲ.


ಉದಯವಾಹಿನಿ ಚಿತ್ರ

**ಆಸನಗಳೇ ಇಲ್ಲ:** ರಬಕವಿ ರಸ್ತೆಯಲ್ಲಿ 2008ರಲ್ಲಿ ಆರಂಭಿಸಿರುವ ಸಾರ್ವಜನಿಕ ಉದ್ಯಾನದಲ್ಲಿ ಕುಳಿತುಕೊಳ್ಳಲು ಆಸನಗಳೇ ಇಲ್ಲ. 24 ವಿದ್ಯುತ್ ದೀಪಗಳನ್ನು ಅಳವಡಿಸಿದ್ದು, ಎಲ್ಲವೂ ಸ್ಥಗಿತಗೊಂಡಿವೆ. ರಾತ್ರಿಯಾದರೆ ಸಾಕು ಕತ್ತಲು ಪ್ರದೇಶವಾಗಿ ಗೋಚರಿಸುತ್ತದೆ. ಉದ್ಯಾನದ ಕಂಪೌಂಡ್‌ಗಳನ್ನು ಪಕ್ಕದ ಮನೆಯವರು ಬಟ್ಟೆ ಒಣಗಿಸಲು ಬಳಕೆ ಮಾಡುತ್ತಿದ್ದಾರೆ. ಇರುವ ಐದಾರು ಸಲಕರಣೆಗಳು ಸಹ ಉಪಯೋಗಕ್ಕೆ ಬರದಂತಾಗಿವೆ. ಇರುವ ಕಾರಂಜಿಯೂ ಹಾಳಾಗಿದೆ. ಕುಡುಕರ ತಾಣವಾಗಿ ಗೋಚರಿಸುತ್ತದೆ.

**ಹಾಳಾದ ಸಲಕರಣೆಗಳು:** ಸಿದ್ದಾರೂಢ ಬ್ರಹ್ಮವಿದ್ಯಾಶ್ರಮದ ಬಳಿ 2016ರಲ್ಲಿ ಸ್ವಾಮಿ ವಿವೇಕಾನಂದ ಚಿಣ್ಣರ ಉದ್ಯಾನ ಉದ್ಘಾಟನೆಗೊಂಡಿದೆ. ಹೆಸರಿಗೆ ತಕ್ಕಂತೆ ಮಕ್ಕಳಿಗೆ ಆಟವಾಡಲು ಸಲಕರಣೆ ಇರಿಸಲಾಗಿದೆಯಾದರೂ ಎಲ್ಲವೂ ಹಾಳಾಗಿವೆ. ಸಲಕರಣೆಗಳಿಗೆ ಗಿಡಗಂಟಿಗಳು ಬೆಳೆದು ನಿಂತಿವೆ. ಬೀದಿ ನಾಯಿಗಳ ವಾಸಸ್ಥಾನವಾಗಿ ಉದ್ಯಾನ ಮಾರ್ಪಟ್ಟಿದೆ. ಕಾರಂಜಿಯ ನಿಂತ ಕಲುಷಿತ ನೀರು, ಕಸ, ಪ್ಲಾಸ್ಟಿಕ್ ಬಾಟಲಿಗಳು ತೇಲಾಡುತ್ತಿವೆ. ಕುಳಿತುಕೊಳ್ಳಲು ಸರಿಯಾದ ಆಸನಗಳೇ ಇಲ್ಲ. 20 ವಿದ್ಯುತ್ ದೀಪಗಳಿದ್ದರೂ ಹೆಸರಿಗೆ ಮಾತ್ರ ಎಂಬಂತಾಗಿದೆ.

### ಜಾಗತಿಕ ಮಟ್ಟದಲ್ಲಿ ಕಬ್ಬಿಣ ಅದಿರು ಬೆಲೆಯಲ್ಲಿ ಭಾರೀ ಪ್ರಮಾಣದಲ್ಲಿ ಇಳಿಕೆಯಾದ ಪರಿಣಾಮ ಕರ್ನಾಟಕದಿಂದ ರಫ್ತು ನಡೆಯುತ್ತಿಲ್ಲ

# ನೈರುತ್ಯ ರೈಲ್ವೆ ಸರಕು ಸಾಗಣೆ ಆದಾಯ 448 ಕೋಟಿ ರೂ ಖೋತಾ

• ಉದಯವಾಹಿನಿ, ಹುಬ್ಬಳ್ಳಿ

ಕಳೆದ ಹಣಕಾಸು ವರ್ಷದಲ್ಲಿ ನೈರುತ್ಯ ರೈಲ್ವೆಯು ಸರಕು ಸಾಗಣೆಯ ಆದಾಯದಲ್ಲಿ ಸುಮಾರು 448 ಕೋಟಿ ರೂ. ಆದಾಯ ಖೋತಾ ಆಗಿದೆ. ಇದು ಐದು ವರ್ಷಗಳ ಅವಧಿಯಲ್ಲಿಯೇ ದೊಡ್ಡ ಕುಸಿತವಾಗಿದೆ.

ಐದು ವರ್ಷಗಳಲ್ಲಿಯೇ ದೊಡ್ಡ ಕುಸಿತ

ಸರಕು ಸಾಗಣೆ ಆದಾಯ 2024-25ರ ಆರ್ಥಿಕ ವರ್ಷದಲ್ಲಿ ಶೇ.9.4ರಷ್ಟು ಕಡಿಮೆಯಾಗಿದ್ದು, 448.74 ಕೋಟಿ ರೂ. ಆದಾಯ ನಷ್ಟವಾಗಿದೆ. ಸರಕು ಸಾಗಣೆ ಆದಾಯ 2022-23 ರಲ್ಲಿ 4,701.68 ಕೋಟಿ ರೂ., 2023-24 ರಲ್ಲಿ 5 ,121.24 ಕೋಟಿ ರೂ. ಇದ್ದುದು, 2024-25 ರಲ್ಲಿ 4,672.50 ಕೋಟಿ ರೂ.ಗೆ ಇಳಿಕೆಯಾಗಿದೆ. ನೈರುತ್ಯ ರೈಲ್ವೆಯು ಕಬ್ಬಿಣ ಅದಿರು, ಸ್ಟೀಲ್ ಉತ್ಪನ್ನ, ಕಲ್ಲಿದ್ದಲು, ಸಿಮೆಂಟ್ ಹಾಗೂ ಆಹಾರ ವಸ್ತುಗಳನ್ನು ನಾನಾ ಕಡೆಗಳಿಗೆ ಸಾಗಿಸುತ್ತದೆ. ಕಬ್ಬಿಣದ ಅದಿರು ನೈರುತ್ಯ ರೈಲ್ವೆಯ ಪ್ರಮುಖ ಸರಕು ಸಾಗಣೆಯ ಆದಾಯದ ಮೂಲ. ಅದರಲ್ಲೂ ರಫ್ತು ಅದಿರು ಪ್ರಾಮುಖ್ಯತೆ ಹೊಂದಿದೆ. ಜಾಗತಿಕ ಮಟ್ಟದಲ್ಲಿ ಕಬ್ಬಿಣ ಅದಿರು ಬೆಲೆಯಲ್ಲಿ ಭಾರೀ ಪ್ರಮಾಣದಲ್ಲಿ ಇಳಿಕೆಯಾದ ಪರಿಣಾಮ ಕರ್ನಾಟಕದಿಂದ ರಫ್ತು ನಡೆಯುತ್ತಿಲ್ಲ. ಹಾಗಾಗಿ ಸರಕು ಸಾಗಣೆ ಆದಾಯಕ್ಕೆ ಭಾರಿ ಹೊಡೆತ ಬಿದ್ದಿದೆ ಎಂದು ನೈಋುತ್ಯ ರೈಲ್ವೆ ವಿಶ್ಲೇಷಿಸಿದೆ. ಜನವರಿ 2024ರಲ್ಲಿ ವಿದೇಶದಲ್ಲಿ ಮೆಟ್ರಿಕ್ ಟನ್‌ಗೆ ಗರಿಷ್ಠ 139 ಡಾಲರ್ ಇದ್ದ ಕಬ್ಬಿಣ ಅದಿರು ಬೆಲೆ, ಸೆಪ್ಟೆಂಬರ್ 2024ರ ವೇಳೆಗೆ ಹಠಾತ್ ಆಗಿ 91.28 ಡಾಲರ್‌ಗೆ ಕುಸಿಯಿತು. 2024ರ ಕೊನೆ ಹಾಗೂ 25ರ ಆರಂಭದ ಮೂರು ತಿಂಗಳಲ್ಲಿ 90-103 ಡಾಲರ್‌ನಲ್ಲಿ ವಹಿವಾಟು ನಡೆದಿದ್ದರಿಂದ ರಫ್ತುದಾರರು ಅದಿರು ಸಾಗಣೆಗೆ ಹಿಂದೇಟು ಹಾಕಿದರು. ಇದರಿಂದ ಸರಕು ಸಾಗಣೆಯಲ್ಲಿ ಶೇ.77.44 ರಷ್ಟು ಕಡಿಮೆಯಾಯಿತು.

ನೇರವಾಗಿ ಆದಾಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿತು, ಎಂದು ನೈಋುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಡಾ.ಮಂಜುನಾಥ ಕನಮಡಿ ಅಭಿಪ್ರಾಯ ಪಡುತ್ತಾರೆ. ಉಕ್ಕಿನ ಕಾರ್ಖಾನೆಗಳಿಗೆ ಕಚ್ಚಾ ವಸ್ತು ಸಾಗಣೆ ಸುಸ್ಥಿರವಾಗಿದ್ದು, ಶೇ.20.06 ಹೆಚ್ಚಳವಾಗಿದೆ. ಬಹುತೇಕ ಕಾರ್ಖಾನೆಗಳು ನೈರುತ್ಯ ರೈಲ್ವೆ ಅವಲಂಬಿಸಿದ್ದು, ಕಾರ್ಖಾನೆಗಳು ಗಣಿ ಪ್ರದೇಶಗಳಿಂದಲೇ ನಿರಂತರವಾಗಿ ಸರಕು ತರಿಸಿಕೊಳ್ಳುತ್ತಿವೆ.




### ಗೋವಿನ ಜೋಳ ರಫ್ತು ಇಲ್ಲ


**ಕೃಷಿ ಉತ್ಪನ್ನಗಳ ಸಾಗಣೆಯಲ್ಲಿ ಗೋವಿನಜೋಳ ಪ್ರಮುಖವಾಗಿದೆ. ಗೋವಿನಜೋಳ ಉತ್ಪನ್ನಕ್ಕೆ ವಿದೇಶದಲ್ಲಿ ಭಾರಿ ಬೇಡಿಕೆ ಇದ್ದು, ಆಂಧ್ರಪ್ರದೇಶದ ವಿಶಾಖಪಟ್ಟಣಂ ಮತ್ತು ತಮಿಳುನಾಡು ಕೃಷ್ಣಗಿರಿ ಬಂದರು ಮೂಲಕ ವಿದೇಶಕ್ಕೆ ಸಾಗಿಸಲಾಗುತ್ತದೆ. ಈ ಬಂದರುಗಳಿಗೆ ನೈರುತ್ಯ ರೈಲ್ವೆಯಿಂದಲೇ ಸಾಗಣೆ ಮಾಡಲಾಗುತ್ತದೆ. ಗದಗ, ಹಾವೇರಿ, ಬಾಗಲಕೋಟ, ವಿಜಯಪುರ, ಬೆಳಗಾವಿ ಹೀಗೆ ನಾನಾ ಕಡೆಗಳಿಂದ ಗೋವಿನಜೋಳವನ್ನು ರಫ್ತು ಮಾಡಲಾಗುತ್ತಿದೆ. ಆದರೆ, 2024-25 ರಲ್ಲಿಇಳುವರಿ ಕುಂಠಿತ ಹಾಗೂ ಗುಣಮಟ್ಟದ ಕಾರಣಕ್ಕೆ ಗೋವಿನ ಜೋಳ ರಫ್ತು ಮಾಡಿಲ್ಲ. ಇದು ಕೂಡ ಸರಕು ಸಾಗಣೆ ಆದಾಯದ ಮೇಲೆ ಪರಿಣಾಮವಾಗಿದೆ, ಎಂದು ಹುಬ್ಬಳ್ಳಿ ವಾಣಿಜ್ಯೋದ್ಯಮ ಸಂಸ್ಥೆ ಮಾಜಿ ಅಧ್ಯಕ್ಷ ವಿನಯ ಜವಳಿ ತಿಳಿಸಿದ್ದಾರೆ.**

- **2024-25 ಆರ್ಥಿಕ ವರ್ಷದಲ್ಲಿ ನೈರುತ್ಯ ರೈಲ್ವೆಯು ಸರಕು ಸಾಗಣೆಯ ಆದಾಯದಲ್ಲಿ 448 ಕೋಟಿ ರೂ. ನಷ್ಟವನ್ನು ಅನುಭವಿಸಿದೆ, ಇದು ಐದು ವರ್ಷಗಳಲ್ಲಿ ಅತಿದೊಡ್ಡ ಕುಸಿತವಾಗಿದೆ.**
- **ಕಬ್ಬಿಣದ ಆದಿರೂಪ ಮತ್ತು ರಫ್ತು ಬೆಲೆಯಲ್ಲಿ ಇಳಿಕೆಯನ್ನು ಗಮನಿಸಿದಾಗ, ರಾಜ್ಯದಿಂದ ಕಬ್ಬಿಣದ ರಫ್ತು ಕಡಿಮೆಯಾದ ಕಾರಣ, ಸರಕು ಸಾಗಣೆ ಆದಾಯಕ್ಕೆ ಭಾರಿ ಹೊಡೆತ ಬಿದ್ದಿದೆ.**
- **2024-25 ಆರ್ಥಿಕ ವರ್ಷದಲ್ಲಿ ನೈರುತ್ಯ ರೈಲ್ವೆ ಸರಕು ಸಾಗಣೆಯಲ್ಲಿ ಶೇ.19.8ರಷ್ಟು ಬೆಳವಣಿಗೆ ದಾಖಲಿಸಿದ್ದು, ಮಾರುಕಟ್ಟೆ ಚಲನಶೀಲತೆಗೆ ಅನುಗುಣವಾಗಿ ವ್ಯಾಗನ್‌ಗಳ ಮತ್ತು ಹಳಿಗಳ ಸರಕು ಸಾಮರ್ಥ್ಯವನ್ನು ಹೆಚ್ಚಿಸಲಾಗುತ್ತಿದೆ.**

## ಕೆನೆಪದರ ಗುರುತಿನಿಂದ ಸಾಮಾಜಿಕ ನ್ಯಾಯಸಾಧ್ಯ : ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ

**ನಾಗಪುರ:** ಪರಿಶಿಷ್ಟ ಸಮುದಾಯದಲ್ಲಿ ''ಕೆನೆಪದರ'' ಅನ್ವಯಿಸುವ ಅಗತ್ಯವನ್ನು ಸುಪ್ರೀಂಕೋರ್ಟ್ ಗುರುತಿಸಿದ್ದು ತಮ್ಮ ನ್ಯಾಯಾಂಗ ವೃತ್ತಿಜೀವನದ ನಿರ್ಣಾಯಕ ಕ್ಷಣಗಳಲ್ಲಿ ಒಂದು ಎಂದು ಸುಪ್ರೀಂಕೋರ್ಟ್ ಮುಖ್ಯನ್ಯಾಯಮೂರ್ತಿ ಬಿ.ಆರ್ ಗವಾಯಿ ಹೇಳಿದ್ದಾರೆ. ಉನ್ನತ ಹುದ್ದೆಯಲ್ಲಿರುವ ಪರಿಶಿಷ್ಟ ಸಮುದಾಯದ ಅಧಿಕಾರಿಗಳ ಮಕ್ಕಳನ್ನು ನಿಜವಾಗಿಯೂ ಅನಾನುಕೂಲಕರ ಕುಟುಂಬಗಳ ಮಕ್ಕಳೊಂದಿಗೆ ಸಮಾನವಾಗಿ ನಡೆಸಿಕೊಳ್ಳುವುದು ದೃಢೀಕರಣ ಕ್ರಮದ ಉದ್ದೇಶವನ್ನು ದುರ್ಬಲಗೊಳಿಸುತ್ತದೆ ಎಂದಿದ್ದಾರೆ.

ಮಹಾರಾಷ್ಟ್ರದ ನಾಗ್ಪುರ ಭೇಟಿಯ ಸಂದರ್ಭದಲ್ಲಿ ಪತ್ರಿಕೆಯೊಂದಕ್ಕೆ ವಿಶೇಷ ಸಂದರ್ಶನ ನೀಡಿದ ಅವರು ಸಾಮಾಜಿಕ ನ್ಯಾಯವನ್ನು ಪರಿಷ್ಕರಿಸಲು ಇದು ಅತ್ಯಗತ್ಯ. ಕೆನೆಪದರವನ್ನು ಗುರುತಿಸುವುದರಿಂದ ಪ್ರಯೋಜನಗಳು ಅತ್ಯಂತ ಅರ್ಹರಿಗೆ ತಲುಪುವುದನ್ನು ಖಚಿತಪಡಿಸಲಾಗುತ್ತಿದೆ ಎಂದಿದ್ದಾರೆ. ಮೀಸಲಾತಿ ಪ್ರಯೋಜನಗಳ ಸಮಾನ ವಿತರಣೆ ಖಚಿತಪಡಿಸಿಕೊಳ್ಳಲು ಪರಿಶಿಷ್ಟ ಸಮುದಾಯದಲ್ಲಿ ಗುಂಪುಗಳಲ್ಲಿ ಉಪ-ವರ್ಗೀಕರಣವನ್ನು ಅನುಮತಿಸುವ ಪಿಐಎಲ್ ತೀರ್ಪಿನ ಭಾಗವಾಗಿ ಈ ಹೇಳಿಕೆ ಬಂದಿದೆ.



ಮೇ 14 ರಂದು 52ನೇ ಮುಖ್ಯ ನ್ಯಾಯಮೂರ್ತಿಯಾಗಿ ಅಧಿಕಾರ ವಹಿಸಿಕೊಂಡಿರುವ ಬಿ.ಆರ್ ಗವಾಯಿ ಅವರು ನ್ಯಾಯಾಂಗ ಅತಿಕ್ರಮಣದ ವಿರುದ್ಧವೂ ಎಚ್ಚರಿಕೆ ನೀಡಿದ್ದು ನ್ಯಾಯಾಂಗ ಸಾಹಸ ಅಥವಾ ನ್ಯಾಯಾಂಗ ಭಯೋತ್ಪಾದನೆಯಾಗಬಾರದು ಎಂದಿದ್ದಾರೆ. ಸನ್ಯಾಯಾಂಗ ಸಾಂವಿಧಾನಿಕ ಅನುಸರಣೆ ಖಚಿತಪಡಿಸುತ್ತದೆ. ಅತಿಕ್ರಮಣ ಸಮತೋಲನವನ್ನು ಹಾಳು ಮಾಡುತ್ತದೆ ಸಂವಿಧಾನವು ಕೇವಲ ಕಾನೂನು ದಾಖಲೆಯಲ್ಲ, ಸಾಮಾಜಿಕ ಪರಿವರ್ತನೆಗೆ ಒಂದು ಸಾಧನವಾಗಿದೆ ಎಂದಿದ್ದಾರೆ. ಎರಡನೇ ದಲಿತ ಮತ್ತು ಮೊದಲ ಬೌದ್ಧ ಮುಖ್ಯನ್ಯಾಯಮೂರ್ತಿ ಎನ್ನುವ ಹಿರಿಮೆ ಪಡೆದಿರುವ ಬಿ,ಆರ್ ಗವಾಯಿ ಅವರು ಪರಿಶಿಷ್ಟ ಸಮಯದಾಯದಲ್ಲಿ

**ನ್ಯಾಯಾಂಗ ಅತಿಕ್ರಮಣದ ವಿರುದ್ಧ ಎಚ್ಚರಿಕೆ**

ಬಾಕಿ ಇರುವ 81,000 ಕ್ಕೂ ಹೆಚ್ಚು ಪ್ರಕರಣಗಳನ್ನು ಕಡಿಮೆ ಮಾಡುವುದು , ಗ್ರಾಮೀಣ ನ್ಯಾಯಾಲಯಗಳಲ್ಲಿ ಮೂಲಸೌಕರ್ಯವನ್ನು ಸುಧಾರಿಸುವತ್ತ ತಮ್ಮ ಗಮನ ಹರಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. 370ನೇ ವಿಧಿ, ಚುನಾವಣಾ ಬಾಂಡ್‌ಗಳು, ನೋಟು ರದ್ಧತಿ ಮತ್ತು ವಾಕ್ ಸ್ವಾತಂತ್ರ್ಯದ ಮೇಲಿನ ಹೆಗ್ಗುರುತು ತೀರ್ಪುಗಳನ್ನು ಒಳಗೊಂಡಂತೆ ಅವರು ಸುಮಾರು 300 ತೀರ್ಪುಗಳನ್ನು ಬರೆದಿರುವ ಬಿ.ಆರ್. ಗವಾಯಿ, 370ನೇ ವಿಧಿಯ ರದ್ಧತಿಯನ್ನು ಎತ್ತಿಹಿಡಿದ ಐದು ನ್ಯಾಯಾಧೀಶರ ಪೀಠದ ಭಾಗವಾಗಿದ್ದರು.

## 90 ಡಿಗ್ರಿ ಸೇತುವೆ: 7 ಎಂಜಿನಿಯರ್‌ಗಳ ಅಮಾನತು ಮಾಡಿದ ಮ.ಪ್ರದೇಶ ಸರ್ಕಾರ

**ಭೋಪಾಲ್:** 90 ಡಿಗ್ರಿ ತಿರುವು ಸಹಿತ ಅಪಾಯಕಾರಿ ಮೇಲ್ಸೇತುವೆ ನಿರ್ಮಾಣ ಪ್ರಕರಣಕ್ಕೆ ಸಂಬಂಧಿಸಿದಂತೆ ಮಧ್ಯ ಪ್ರದೇಶ ಸರ್ಕಾರ 7 ಎಂಜಿನಿಯರ್‌ಗಳನ್ನು ಅಮಾನತು ಮಾಡಿದೆ. ಮಧ್ಯಪ್ರದೇಶ ರಾಜಧಾನಿ ಭೋಪಾಲ್‌ನಲ್ಲಿ ನಿರ್ಮಾಣವಾಗಿರುವ ರೈಲ್ವೆ ಮೇಲ್ಸೇತುವೆ ವಿವಾದಕ್ಕೆ ಕಾರಣವಾಗಿದೆ. ಸದ್ಯ ಈ ಮೇಲ್ಸೇತುವೆಯ ಫೋಟೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಇದರ ಇಂಜಿನಿಯರ್ ಯಾರು ಎಂದು ಜನ ಕಿಡಿಕಾರುತ್ತಿದ್ದಾರೆ. ಮಧ್ಯ ಪ್ರದೇಶ ರಾಜಧಾನಿ ಭೋಪಾಲ್‌ನ ಐಶ್‌ಬಾಗ್ ರೈಲ್ವೆ ಕ್ರಾಸಿಂಗ್‌ನಲ್ಲಿನ ಸಂಚಾರ ದಟ್ಟಣೆ ಕಡಿಮೆ ಮಾಡಲು ಮೇಲ್ಸೇತುವೆಯನ್ನು ನಿರ್ಮಿಸಲಾಗಿದೆ. ಮಾರ್ಚ್ 2023ರಲ್ಲಿ ಸೇತುವೆ ನಿರ್ಮಾಣ ಪ್ರಾರಂಭವಾಗಿತ್ತು. ಈ ಸೇತುವೆಯಿಂದ ಪ್ರಯಾಣದ ಸಮಯ ಕಡಿಮೆಯಾಗುತ್ತದೆ ಮತ್ತು ಟ್ರಾಫಿಕ್ ಸಮಸ್ಯೆಗಳು ಪರಿಹಾರವಾಗುತ್ತವೆ ಎಂದು ನಿರೀಕ್ಷಿಸಲಾಗಿತ್ತು. ಈ ಸೇತುವೆ ರೈಲ್ವೆ ಮೇಲ್ಸೇತುವೆಯು ಮಹಾಮಾಯಿ ಸಕಾ ಬಾಗ್, ಪುಷ್ಪಾ ನಗರ, ರೈಲ್ವೆ ನಿಲ್ದಾಣ ಪ್ರದೇಶ ಮತ್ತು ನ್ಯೂ ಭೋಪಾಲ್ ನಡುವೆ ಸಂಪರ್ಕ ಕಲ್ಪಿಸುತ್ತದೆ. ಈ ಸೇತುವೆಯಿಂದ ಪ್ರತಿದಿನ ಸುಮಾರು ಮೂರು ಲಕ್ಷ ಜನರಿಗೆ ಅನುಕೂಲವಾಗಲಿದೆ ಎಂದು ಅಧಿಕಾರಿಗಳು ಹೇಳಿದ್ದರು.

## ಪೈಪ್‌ಲೈನ್ ಅಗೆಯುವ ವೇಳೆ ಮಣ್ಣು ಕುಸಿದು ನಾಲ್ವರು ಸಾವು

**ಜೈಪುರ:** ರಾಜಸ್ಥಾನದ ಭರತ್‌ಪುರದಲ್ಲಿ ಭಾನುವಾರ ಬೆಳಗ್ಗೆ ಪೈಪ್ ಲೈನ್ ಅಗೆಯುವ ಕೆಲಸದ ಸಮಯದಲ್ಲಿ ಮಣ್ಣು ಕುಸಿದು ನಾಲ್ವರು ಕಾರ್ಮಿಕರು ಮೃತಪಟ್ಟಿದ್ದು, ಐವರು ಅವಶೇಷಗಳಡಿ ಸಿಲುಕಿರುವ ಶಂಕೆ ವ್ಯಕ್ತವಾಗಿದೆ. ಜಂಗಿ ಕಾ ನಾಗ್ಲಾ ಗ್ರಾಮದ ಬಳಿ ಪೈಪ್‌ಲೈನ್ ಹಾಕಲು ಅಗೆದ 10 ಅಡಿ ಆಳದ ಕಂದಕವನ್ನು ಕೆಲವು ಕಾರ್ಮಿಕರು ತುಂಬುತ್ತಿದ್ದಾಗ ಮಣ್ಣು ಕುಸಿದಿದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಹನ್ನೆರಡು ಕಾರ್ಮಿಕರು ಮಣ್ಣಿನಡಿಯಲ್ಲಿ ಸಿಲುಕಿಕೊಂಡಿದ್ದಾರೆ. ಕಾರ್ಮಿಕರ ಕೂಗು, ಚೀರಾಟ ಕೇಳಿ, ಇತರ ಕಾರ್ಮಿಕರು ಮತ್ತು ಯೋಜನಾ ಸಿಬ್ಬಂದಿ ಕೂಡಲೇ ಸ್ಥಳಕ್ಕೆ ಧಾವಿಸಿ ರಕ್ಷಣಾ ಪ್ರಯತ್ನಗಳನ್ನು ಪ್ರಾರಂಭಿಸಿದರು. ಆದರೆ ಮಣ್ಣಿನ ಆಳ ಮತ್ತು ಭಾರದಿಂದಾಗಿ ರಕ್ಷಣಾ ಪ್ರಯತ್ನಗಳಿಗೆ ಅಡ್ಡಿಯುಂಟಾದವು. ಜಿಲ್ಲಾಡಳಿತ, ಪೊಲೀಸ್ ಮತ್ತು ವಿಪತ್ತು ನಿರ್ವಹಣಾ ತಂಡಗಳು ಎಚ್ಚರಿಕೆ ನೀಡಿದ ಕೂಡಲೇ ಸ್ಥಳಕ್ಕೆ ತಲುಪಿದವು. ರಕ್ಷಣಾ ತಂಡಗಳು ಮಣ್ಣು ತೆಗೆಯಲು ಮತ್ತು ಸಿಕ್ಕಿಬಿದ್ದ ಕಾರ್ಮಿಕರನ್ನು ಹೊರತರಲು ಮಣ್ಣು ತೆಗೆಯುವ ಯಂತ್ರಗಳನ್ನು ಬಳಸಿದವು.

ಮಣ್ಣಿನಡಿಯಿಂದ 6 ಕಾರ್ಮಿಕರನ್ನು ಹೊರತೆಗೆಯುವಲ್ಲಿ ಯಶಸ್ವಿಯಾದರು. ಅವರಲ್ಲಿ ಇಬ್ಬರು ಮೃತಪಟ್ಟರು. ಇನ್ನಿಬ್ಬರು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ, ಇನ್ನೂ ಐದು ಮಂದಿ ಮಣ್ಣಿನಡಿಯಲ್ಲಿ ಸಿಲುಕಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

## ಉತ್ತರಕಾಶಿಯಲ್ಲಿ ಮೇಘಸ್ಫೋಟ

**ಕಾಶಿ:** ಯಮುನೋತ್ರಿ ಹೆದ್ದಾರಿಯಲ್ಲಿ ಮೇಘಸ್ಫೋಟದ ಬಗ್ಗೆ ಮಧ್ಯರಾತ್ರಿಯ ಸುಮಾರಿಗೆ ಮಾಹಿತಿ ಬಂದಿದೆ ಎಂದು ಬಾರ್ಕೋಟ್ ಪೊಲೀಸ್ ಠಾಣೆಯ ಎಸ್‌ಎಚ್‌ಒ ದೀಪಕ್ ಕಥೈತ್ ತಿಳಿಸಿದ್ದಾರೆ. ಉತ್ತರಕಾಶಿ ಜಿಲ್ಲೆಯ ಯಮುನೋತ್ರಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾನುವಾರ ಮುಂಜಾನೆ ಸಂಭವಿಸಿದ ಮೇಘಸ್ಫೋಟದಲ್ಲಿ ಒಂಬತ್ತು ರಸ್ತೆ ನಿರ್ಮಾಣ ಕಾರ್ಮಿಕರು ಕೊಚ್ಚಿಹೋಗಿರುವ ಶಂಕೆಯಿದೆ. ಉತ್ತರಕಾಶಿ ಜಿಲ್ಲೆಯ ಯಮುನೋತ್ರಿ ದೇವಸ್ಥಾನಕ್ಕೆ ಹೋಗುವ ದಾರಿಯಲ್ಲಿ ಬಾರ್ಕೋಟ್ ಪ್ರದೇಶದ ಸಿಲೈ ಬೆಂಡ್ ಬಳಿ ಭಾರೀ ಮಳೆ ಮತ್ತು ಮೇಘಸ್ಫೋಟದ ಪರಿಣಾಮವಾಗಿ ಕಾರ್ಮಿಕರು ನಾಪತ್ತೆಯಾಗಿದ್ದಾರೆ ಎಂದು ಉತ್ತರಕಾಶಿಯ ವಿಪತ್ತು ನಿಯಂತ್ರಣ ಕೊಠಡಿ ತಿಳಿಸಿದೆ. ಯಮುನೋತ್ರಿ ಹೆದ್ದಾರಿಯಲ್ಲಿ ಮೇಘಸ್ಫೋಟದ ಬಗ್ಗೆ ಮಧ್ಯರಾತ್ರಿಯ ಸುಮಾರಿಗೆ ಮಾಹಿತಿ ಬಂದಿದೆ ಎಂದು ಬಾರ್ಕೋಟ್ ಪೊಲೀಸ್ ಠಾಣೆಯ ಎಸ್ ಎಚ್‌ಒ ದೀಪಕ್ ಕಥೈತ್ ತಿಳಿಸಿದ್ದಾರೆ.

## ಮೊಹಲ್ಲಾಗಳಲ್ಲಿ ಭಗವದ್ಗೀತೆ ಪ್ರಚಾರದಿಂದ ಹಿಂದೂ ರಾಷ್ಟ್ರದ ಕಲ್ಪನೆ ಸಾಕಾರ: ರಾಣೆ

**ಪುಣೆ:** ಮುಸ್ಲಿಂರು ವಾಸಿಸುವ ಮೊಹಲ್ಲಾಗಳಲ್ಲಿ ಭಗವದ್ಗೀತೆ ಪ್ರಚಾರದಿಂದ ಹಿಂದೂ ರಾಷ್ಟ್ರದ ಕಲ್ಪನೆ ಸಾಕಾರಗೊಳ್ಳಲಿದೆ ಎಂದು ಮಹಾರಾಷ್ಟ್ರದ ಸಚಿವ ನಿತೇಶ್ ರಾಣೆ ಹೇಳಿದ್ದಾರೆ. ಭಗವದ್ಗೀತೆ ಎಂದಿಗೂ ದ್ವೇಷವನ್ನು ಅಥವಾ ಮತಾಂತರಗಳನ್ನು ಬೋಧಿಸುವುದಿಲ್ಲ. ಅದರ ಬೋಧನೆಗಳು ಮೊಹಲ್ಲಾಗಳಿಗೆ ಹರಡಿದರೆ, ಅವರ ಆಲೋಚನೆಗಳು ಸಹ ರೂಪಾಂತರಗೊಳ್ಳುತ್ತವೆ. ಇದು ನಮ್ಮ ಹಿಂದೂ ರಾಷ್ಟ್ರವನ್ನು ಬಲಪಡಿಸುತ್ತದೆ ಎಂದಿದ್ದಾರೆ. ಭಗವದ್ಗೀತೆಯ ಬೋಧನೆಗಳು ಸಾಮರಸ್ಯ ಮತ್ತು ಚಿಂತನೆಗೆ ಹಚ್ಚುತ್ತವೆ. ಅದರ ಸಂದೇಶ ಮೂಲೆ ಮೂಲೆಗೂ ತಲುಪಬೇಕು ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಶಾಲಾ ಪಠ್ಯಕ್ರಮದಲ್ಲಿ 1 ನೇ ತರಗತಿಯಿಂದ ಹಿಂದಿ ಸೇರ್ಪಡೆ ಕುರಿತ ವಿವಾದ ಮತ್ತು ವಿರೋಧ ಪಕ್ಷದ ಪ್ರತಿಭಟನೆ ನಡುವೆಯಾವುದೇ ಭಾಷೆಯನ್ನು ಕಡ್ಡಾಯಗೊಳಿಸಲಾಗಿಲ್ಲ. ವಿದ್ಯಾರ್ಥಿಗಳು ಬಯಸಿದಲ್ಲಿ ಸಂಸ್ಕೃತವನ್ನು ಮೂರನೇ ಭಾಷೆಯಾಗಿ ಆರಿಸಿಕೊಳ್ಳಬಹುದು. ಗೀತೆ ರಚನೆಕಾರ ಜಾವೇದ್ ಅಖ್ತರ್, ನಟ ಅಮೀರ್ ಖಾನ್ ಅಥವಾ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮರಾಠಿ ಭಾಷೆಯಲ್ಲಿ ಮಾತನಾಡುವುದನ್ನು ನಾನು ಕೇಳಿಲ್ಲ ಎಂದರು.

## ಅಪ್ರಾಪ್ತ ಬಾಲಕಿ ಮತ್ತು ಯುವಕನ ಶವ ಪತ್ತೆ

**ಜೈಸಲ್ಮೇರ್:** ರಾಜಸ್ಥಾನದ ಜೈಸಲ್ಮೇರ್ ಜಿಲ್ಲೆಯ ಭಾರತ-ಪಾಕಿಸ್ತಾನ ಗಡಿಯ ಬಳಿ ಅಪ್ರಾಪ್ತ ಬಾಲಕಿ ಮತ್ತು ಯುವಕನ ಭಾಗಶಃ ಕೊಳೆತ ಶವಗಳು ಪತ್ತೆಯಾಗಿವೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ. ಪೊಲೀಸರ ಪ್ರಕಾರ, ಕೊಳೆಯುವಿಕೆಯ ಪ್ರಮಾಣ ಮತ್ತು ವ್ಯಾಪ್ತಿಯನ್ನು ನೋಡಿದರೆ, ಇಬ್ಬರೂ ಸುಮಾರು ಒಂದು ವಾರದ ಹಿಂದೆ ಸಾವನ್ನಪ್ಪಿದ್ದಾರೆ. ರವಿ ಕುಮಾರ್ (18) ಎಂಬ ವ್ಯಕ್ತಿಯ ಪಾಕಿಸ್ತಾನಿ ಸಿಮ್ ಕಾರ್ಡ್ ಮತ್ತು ಗುರುತಿನ ಚೀಟಿಯನ್ನು ಸಹ ಸ್ಥಳದಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಅಂತರರಾಷ್ಟ್ರೀಯ ಗಡಿಯಿಂದ ಭಾರತದ ಭೂಪ್ರದೇಶದಿಂದ ಸುಮಾರು 10-12 ಕಿಲೋಮೀಟರ್ ದೂರದಲ್ಲಿರುವ ಸಾಧೇವಾಲಾ ಪ್ರದೇಶದಲ್ಲಿ ಶವಗಳು ಪತ್ತೆಯಾಗಿವೆ ಎಂದು ಜೈಸಲ್ಮೇರ್ ಎಸ್ಪಿ ಸುಧೀರ್ ಚೌಧರಿ ತಿಳಿಸಿದ್ದಾರೆ. ಬಾಲಕಿ ಮತ್ತು ಯುವಕರು ಭಾರತೀಯರೇ ಅಥವಾ ಪಾಕಿಸ್ತಾನಿ ಪ್ರಜೆಗಳೇ ಎಂಬುದು ತಕ್ಷಣಕ್ಕೆ ಸ್ಪಷ್ಟವಾಗಿಲ್ಲ. ಈ ವಿಷಯವನ್ನು ಮತ್ತಷ್ಟು ತನಿಖೆ ಮಾಡಲಾಗುತ್ತಿದೆ.

### ● ಇದು ಭಾರತದ ಕುಕೃತ್ಯ ಎಂದ ಪಾಕ್ – ಭಾರತದ ವಿದೇಶಾಂಗ ಇಲಾಖೆಯಿಂದ ತಿರುಗೇಟು

# ವಾಜಿರಿಸ್ತಾನ ಆತ್ಮಹತ್ಯಾ ದಾಳಿ: ಪಾಕಿಸ್ತಾನಕ್ಕೆ ಭಾರತ ತಿರುಗೇಟು

**ನವದೆಹಲಿ:** ಪಾಕಿಸ್ತಾನದ ವಾಜಿರಿಸ್ತಾನದ ಉತ್ತರ ಭಾಗದಲ್ಲಿ ಜೂ. 28ರಂದು ಪ್ರಬಲ ಬಾಂಬ್ ಸ್ಫೋಟ ಸಂಭವಿಸಿದ್ದು ಅದರಲ್ಲಿ 16 ಪಾಕಿಸ್ತಾನದ ಸೈನಿಕರು ಮೃತಪಟ್ಟಿದ್ದಾರೆ. 29 ಜನರು ಗಾಯಗೊಂಡಿದ್ದಾರೆ.

- ವಾಜಿರಿಸ್ತಾನ್ ನಲ್ಲಿ ಮಾನವ ಬಾಂಬ್ ಸ್ಫೋಟ. ಘಟನೆಯಲ್ಲಿ ಪಾಕಿಸ್ತಾನದ 16 ಸೈನಿಕರ ಸಾವು.
- ಘಟನೆಯ ಹೊಣೆ ಹೊತ್ತ ಪಾಕಿಸ್ತಾನದಲ್ಲಿರುವ ಉಗ್ರ ಸಂಘಟನೆ ತಾಲಿಬಾನ್ ಪಾಕಿಸ್ತಾನ.
- ಆದರೂ, ಇದು ಭಾರತದ ಕುಕೃತ್ಯ ಎಂದ ಪಾಕ್ - ಭಾರತದ ವಿದೇಶಾಂಗ ಇಲಾಖೆಯಿಂದ ತಿರುಗೇಟು.

ಗಾಯಗೊಂಡವರಲ್ಲಿ 10 ಸೈನಿಕರು ಹಾಗೂ 19 ನಾಗರಿಕರಾಗಿದ್ದಾರೆ.

ಪಾಕಿಸ್ತಾನದ ಖೈಬರ್ ಪಖ್ತುಂಖ್ ವಾಲಾ ಪ್ರಾಂತ್ಯದಲ್ಲಿರುವ ವಾಜಿರಿಸ್ತಾನದ ಹೊರವಲಯದಲ್ಲಿ ಪಾಕಿಸ್ತಾನದ ಸೇನಾ ಟ್ರಕ್‌ಗಳು ಸಾಗುತ್ತಿರುವಾಗ ಅದೇ ರಸ್ತೆಯಲ್ಲಿ ಅಡ್ಡವಾಗಿ ಬಂದ ವ್ಯಾನೊಂದು ಒಂದು ಸೇನಾವಾಹನಕ್ಕೆ ಡಿಕ್ಕಿ ಹೊಡೆಯಿತು. ಡಿಕ್ಕಿ ಹೊಡೆದ ಕೂಡಲೇ ವ್ಯಾನಿನಲ್ಲಿದ್ದ ಭಯಾನಕ ಸ್ಫೋಟಕಗಳು ಒಮ್ಮಿಂದೊಮ್ಮೆಲೇ ಸ್ಫೋಟಗೊಂಡು ಡಿಕ್ಕಿ ಹೊಡೆಯಲ್ಪಟ್ಟ ಸೇನಾ ವಾಹನ ಹಾಗೂ ಅದರ ಹಿಂದೆ – ಮುಂದಿದ್ದ ಸೇನಾ ವಾಹನಗಳು ಛಿದ್ರವಾದವು. ಜೊತೆಗೆ ವ್ಯಾನಿನಲ್ಲಿದ್ದ ಆತ್ಮಹತ್ಯಾ ಬಾಂಬರ್ ಕೂಡ ಸಾವಿಗೀಡಾಗಿದ್ದಾನೆ. ಈ ಘಟನೆಯ ಹೊಣೆಯನ್ನು ಪಾಕಿಸ್ತಾನಿ ತಾಲಿಬಾನ್ ಸಂಘಟನೆ ಹೊಣೆ ಹೊತ್ತಿದೆ.



**ಉಗ್ರರ ಕ್ಯಾಂಪ್‌ಗೆ ಮರುಜೀವ**

ಈ ಸ್ಫೋಟ ಮಾಡಿದ್ದು ನಾವೇ ಎಂದು ಪಾಕಿಸ್ತಾನಿ ತಾಲಿಬಾನ್ ಸಂಘಟನೆ ಹೊಣೆ ಹೊತ್ತುಕೊಂಡಿದ್ದರೂ, ಇದೆಲ್ಲಾ ಭಾರತದ ಕೈವಾಡ ಎಂದು ಪಾಕಿಸ್ತಾನ ಆರೋಪಿಸಿದೆ. ಆದರೆ, ಆ ಆರೋಪಗಳನ್ನು ಭಾರತ ತಳ್ಳಿಹಾಕಿದೆ. ಈ ಕುರಿತಂತೆ ಭಾರತದ ವಿದೇಶಾಂಗ ಇಲಾಖೆಯು ಪ್ರಕಟಣೆಯೊಂದನ್ನು ನೀಡಿದ್ದು ಅದರಲ್ಲಿ ಪಾಕಿಸ್ತಾನದ ಆರೋಪವನ್ನು ತೀವ್ರವಾಗಿ ಖಂಡಿಸಿದೆ. ಇಂಥ ಹೇಳಿಕೆಗಳು ಇಡೀ ವಿಶ್ವದಲ್ಲಿ ಭಾರತಕ್ಕಿರುವ ಘನತೆಯನ್ನು ಮಣ್ಣುಪಾಲು ಮಾಡುವಂಥ ಉದ್ದೇಶವನ್ನು ಹೊಂದಿವೆ'' ಎಂದು ಭಾರತ ಹೇಳಿದೆ.

**ಉಗ್ರರ ಕ್ಯಾಂಪ್‌ಗಳಿಗೆ ಮರುಜೀವ:** ಏ. 22 ರಂದು ಭಾರತದ ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದಿದ್ದ ಪಹಲ್ಗಾಮ್ ದಾಳಿಗೆ ಪ್ರತೀಕಾರವಾಗಿ ಭಾರತವು ಪಾಕಿಸ್ತಾನದ ವಿರುದ್ಧ ಕೈಗೊಂಡ ಆಪರೇಷನ್ ಸಿಂಧೂರ್ ಅಡಿಯಲ್ಲಿ ಪಾಕಿಸ್ತಾನದ ಉಗ್ರರ ತರಬೇತಿ ಶಿಬಿರಗಳನ್ನು ಧ್ವಂಸಗೊಳಿಸಲಾಯಿತು. ಆದರೆ, ಅಂತಾರಾಷ್ಟ್ರೀಯ ಹಣಕಾಸು ನೆರವನ್ನು ಪಡೆದ ಪಾಕಿಸ್ತಾನವು ಮತ್ತೆ ಆ ಉಗ್ರರ ತರಬೇತಿ ಕೇಂದ್ರಗಳನ್ನು ಮರುಸ್ಥಾಪಿಸಲು ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

### ಪಾಕಿಸ್ತಾನ ಪರ ಬೇಹುಗಾರಿಕೆ ನೌಕಾಪಡೆ ಸಿಬ್ಬಂದಿ ಬಂಧನ

ಹಣದ ಆಸೆಗಾಗಿ, ಪಾಕಿಸ್ತಾನಕ್ಕೆ ಭಾರತದ ರಹಸ್ಯ ಮಾಹಿತಿಗಳನ್ನು ರವಾನಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ದೆಹಲಿಯಲ್ಲಿ ಜೂ. 26ರಂದು ಬಂಧಿಸಲಾಗಿತ್ತು. ಆತನನ್ನು ದೆಹಲಿಯ ನೌಕಾ ಪ್ರಧಾನ ಕಚೇರಿಯ ಉದ್ಯೋಗಿ ವಿಶಾಲ್ ಯಾದವ್ ಎಂದು ಗುರುತಿಸಲಾಗಿದೆ. ಮೇ ತಿಂಗಳಲ್ಲಿ ಭಾರತವು ಪಾಕಿಸ್ತಾನದ ವಿರುದ್ಧ ಆಪರೇಷನ್ ಸಿಂಧೂರ್ ಕಾರ್ಯಾಚರಣೆ ಕೈಗೊಂಡಿದ್ದಾಗ, ಆತ ಐಎಸ್‌ಐಗೆ ರಹಸ್ಯ ಮಾಹಿತಿ ನೀಡುತ್ತಿದ್ದ ಎಂಬ ಆರೋಪಗಳು ಆತನ ಮೇಲಿವೆ.

### ಸಹಿ ಹಾಕಲು ರಾಜನಾಥ್ ಸಿಂಗ್ ನಿರಾಕರಣೆ

ಶಾಂಘೈ ಸಹಕಾರ ಸಂಘದ (ಎಸ್‌ಸಿಒ) ರಕ್ಷಣಾ ಸಚಿವರ ಶೃಂಗಸಭೆ ಇತ್ತೀಚೆಗೆ ನಡೆಯಿತು. ಭಾರತದ ರಕ್ಷಣಾ ಸಚಿವರಾದ ರಾಜನಾಥ್ ಸಿಂಗ್ ಅವರು ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ಏಷ್ಯಾ ಖಂಡದಲ್ಲಿ ಭಯೋತ್ಪಾದನಾ ಚಟುವಟಿಕೆಗಳನ್ನು ಹತ್ತಿಕ್ಕುವ ಸಲುವಾಗಿ ಕೆಲವೊಂದು ನಿರ್ಧಾರಗಳನ್ನು ಕೈಗೊಳ್ಳಲಾಯಿತು. ಹಾಗೆ ಕೈಗೊಂಡ ನಿರ್ಧಾರಗಳಿಗೆ ಸಭೆಗೆ ಆಗಮಿಸಿದ್ದ ಏಷ್ಯಾ ದೇಶಗಳ ಎಲ್ಲಾ ಸಚಿವರು ಸಹಿ ಹಾಕಿದರು. ಆದರೆ, ಅದರಲ್ಲಿ ಪಹಲ್ಗಾಮ್ ದಾಳಿಯ ಉಲ್ಲೇಖವಿರಲಿಲ್ಲ. ಹಾಗಾಗಿ, ಅದಕ್ಕೆ ಸಹಿ ಹಾಕಲು ರಾಜನಾಥ್ ಸಿಂಗ್ ನಿರಾಕರಿಸಿದರು.

## ದುರಂತದ ಹೊಣೆ ಹೊತ್ತ ಒಡಿಶಾ ಸರ್ಕಾರ; ಸಿಎಂ ಕ್ಷಮೆಯಾಚನೆ
## ವೈಫಲ್ಯದ ವಿರುದ್ಧ ವಿಪಕ್ಷಗಳಿಂದ ಆಕ್ಷೇಪ

**ಒಡಿಶಾ:** ಪುರಿ ಜಗನ್ನಾಥ ದೇವಾಲಯದಲ್ಲಿ ಭಾನುವಾರ ನಡೆದ ಕಾಲ್ತುಳಿತ ದುರಂತ ಪ್ರಕರಣಕ್ಕೆ ಸಂಬಂಧಿಸಿ, ಸಿಎಂ ಮೋಹನ್ ಚರಣ್ ಮಾಝಿ ಎಕ್ಸ್‌ನಲ್ಲಿ ಟ್ವೀಟ್ ಮಾಡಿದ್ದು, ಭದ್ರತಾ ಲೋಪದ ಬಗ್ಗೆ ತನಿಖೆ ಮತ್ತು ಭಕ್ತರಲ್ಲಿ ಕ್ಷಮೆಯಾಚಿಸಿದ್ದಾರೆ.

ಜಗನ್ನಾಥ ದೇವರ ಭಕ್ತರಲ್ಲಿ ಕ್ಷಮೆಯಾಚಿಸುತ್ತೇನೆ. ಮೃತರ ಕುಟುಂಬಗಳಿಗೆ ಸಂತಾಪ ಸೂಚಿಸುತ್ತೇನೆ. ಈ ಕಠಿಣ ಸಂದರ್ಭದಲ್ಲಿ ದುಃಖವನ್ನು ಭರಿಸುವ ಶಕ್ತಿ ದೇವರು ನೀಡಲಿ ಎಂದು ಪ್ರಾರ್ಥಿಸುತ್ತೇನೆ. ಕಾಲ್ತುಳಿತದಲ್ಲಿ ಭದ್ರತಾ ಲೋಪ ಉಂಟಾಗಿದೆಯೇ ಎಂಬುದರ ಕುರಿತು ತನಿಖೆ ನಡೆಸಿ, ತಪ್ಪಿತಸ್ಥರು ಕಂಡುಬಂದರೆ, ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಈ ನಿರ್ಲಕ್ಷ್ಯವನ್ನು ಕ್ಷಮಿಸಲಾಗದು. ಭದ್ರತಾ ಲೋಪದ ಕುರಿತು ಪರಿಶೀಲಿಸಲು ಈಗಾಗಲೇ ಸೂಚನೆ ನೀಡಲಾಗಿದೆ ಎಂದು ಎಂದು ಒಡಿಶಾ ಸಿಎಂ ಟ್ವಿಟರ್‌ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ.

ದುರಂತ ಸಂಭವಿಸಿದಾಗ ಘಟನಾ ಸ್ಥಳದಲ್ಲಿ ಸರ್ಕಾರಿ ಅಧಿಕಾರಿಗಳು ಇರಲಿಲ್ಲ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಗಾಯಗೊಂಡವರಿಗೆ



ಸಹಾಯ ಮಾಡಲು ಅವರ ಸಂಬಂಧಿಕರೇ ಮೊದಲು ಬಂದರು. ಇದು ಸರ್ಕಾರದ ಕರ್ತವ್ಯ ಲೋಪವನ್ನು ಎತ್ತಿ ತೋರಿಸುತ್ತದೆ. ರಥಯಾತ್ರೆಯ ದಿನದಂದು ನಂದಿಘೋಷ ರಥವನ್ನು ಎಳೆಯಲು ತಡವಾಯಿತು. ಇದಕ್ಕೆ ಮಹಾಪ್ರಭುವಿನ ಇಚ್ಛೆ ಎಂದು ಕಾರಣ ನೀಡಲಾಯಿತು. ಇದು ಆಡಳಿತದ ಬೇಜವಾಬ್ದಾರಿತನವನ್ನು ಮರೆಮಾಚುವ ಒಂದು ನೆಪ ಎಂದು ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ.

ದುರಂತದ ಬಗ್ಗೆ ರಾಹುಲ್ ಗಾಂಧಿಯವರು ಟ್ವೀಟ್ ದುರಂತದಲ್ಲಿ ಗಾಯಗೊಂಡವರಿಗೆ ಸೂಕ್ತ ನೆರವು ನೀಡುವಂತೆ ರಾಹುಲ್ ಗಾಂಧಿ ಕಾಂಗ್ರೆಸ್ ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ.


### ಸರ್ಕಾರ ವಿಫಲ

ಬಿಜು ಜನತಾದಳದ ಅಧ್ಯಕ್ಷ ನವೀನ್ ಪಟ್ನಾಯಕ್ ಎಕ್ಸ್‌ನಲ್ಲಿ ಟ್ವೀಟ್ ಮಾಡಿದ್ದು, ಪುರಿಯ ಸರದಬಾಲಿಯಲ್ಲಿ ನಡೆದ ಕಾಲ್ತುಳಿತದಿಂದಲ್ಲಿ ಪ್ರೀತಿ ಪಾತ್ರರನ್ನು ಕಳೆದುಕೊಂಡ ಕುಟುಂಬಸ್ಥರಿಗೆ ಅವರ ಅಗಲಿಕೆ ಭರಿಸುವ ಶಕ್ತಿ ನೀಡಲಿ. ಗಾಯಗೊಂಡ ಭಕ್ತರು ಬೇಗ ಗುಣಮುಖರಾಗಲಿ ಎಂದು ಮಹಾಪ್ರಭು ಜಗನ್ನಾಥನನ್ನು ಪ್ರಾರ್ಥಿಸುತ್ತೇನೆ. ಪುರಿಯಲ್ಲಿ ನಡೆದ ಈ ದುರಂತ ನಿಜಕ್ಕೂ ದುಃಖಕರ. ರಥಯಾತ್ರೆಯ ಸಂದರ್ಭದಲ್ಲಿ ಜನರನ್ನು ನಿಯಂತ್ರಿಸುವಲ್ಲಿ ಸರ್ಕಾರ ವಿಫಲವಾಗಿದೆ.

## ಇರಾನ್ ಪ್ರಜೆಗಳ ಗಡಿಪಾರಿಗೆ ಮುಂದಾದ ಟ್ರಂಪ್

**ನ್ಯೂಯಾರ್ಕ್:** ನಲವತ್ತೇಳು ವರ್ಷದಿಂದ ಅಮೆರಿಕದಲ್ಲಿ ನೆಲೆಸಿದ್ದ ಮಡೋನಾ ಡೊನ್ನಾ ಕಶಾನಿಯನ್‌ಗೆ ತನ್ನ ಕೈತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ಒಮ್ಮೆಲೇ ಆಘಾತವಾಯಿತು. ನ್ಯೂ ಆರ್ಲಿಯನ್ಸ್‌ನ ಸ್ವಗೃಹದಲ್ಲಿ ಅಮೆರಿಕದ ವಲಸೆ ಮತ್ತು ಸೀಮಾಸುಕ ಜಾರಿ ಅಧಿಕಾರಿಗಳು ಆಕೆಗೆ ಬೇಡಿ ತೊಡಿಸಿ ಕರೆದೊಯ್ದರು ಎಂದು ಆಕೆಯ ಕುಟುಂಬ ತಿಳಿಸಿದೆ. ಮಡೋನ್ನಾ 47 ವರ್ಷಗಳಿಂದ ಅಮೆರಿಕದಲ್ಲಿ ವಾಸಿಸುತ್ತಿದ್ದು, ಅಮೆರಿಕನ್ ಪ್ರಜೆಯನ್ನು ವಿವಾಹವಾಗಿದ್ದಾರೆ. ಈ ದಂಪತಿಗೆ ಓರ್ವ ಮಗಳೂ ಇದ್ದಾಳೆ.

1978ರಲ್ಲಿ ವಿದ್ಯಾರ್ಥಿ ವೀಸಾ ಪಡೆದು ಇರಾನ್ ನಿಂದ ಇಲ್ಲಿಗೆ ಆಗಮಿಸಿದ ಕಶಾನಿಯನ್ ತನ್ನ ತಂದೆ ಅಮೆರಿಕ ಬೆಂಬಲಿತ ಷಾ ಅವರಿಗೆ ಬೆಂಬಲ ನೀಡಿದ್ದಕ್ಕಾಗಿ ಪ್ರತೀಕಾರ ಕ್ರಮಕ್ಕೆ ಗುರಿಯಾಗಬಹುದೆಂಬ ಭೀತಿಯಿಂದ ಕ್ಷಮಾದಾನಕ್ಕೆ ಅರ್ಜಿ ಸಲ್ಲಿಸಿದ್ದರು. ಅವರ ಪ್ರಯತ್ನ ವಿಫಲವಾಯಿತು. ಆದರೆ ವಲಸಿಗ ಅಧಿಕಾರಿಗಳ ಎದುರು ನಿಯಮಿತವಾಗಿ ಹಾಜರಾಗಬೇಕೆಂಬ ಷರತ್ತು ವಿಧಿಸಿ ಆಕೆಗೆ ತನ್ನ ಪತಿ ಮತ್ತು ಮಗುವಿನ ಜೊತೆಗೆ ವಾಸಿಸಲು ಅವಕಾಶ ಮಾಡಿಕೊಡಲಾಯಿತು. ಇದಕ್ಕೆ ಆಕೆ ಸಮ್ಮತಿಸಿದರು. ಕತ್ರಿನಾ ಚಂಡಮಾರುತದ ಸಂದರ್ಭದಲ್ಲಿ ಅವರು




ಒಮ್ಮೆ ಸೌತ್ ಕೆರೋಲಿನಾದಲ್ಲಿ ಪರಿಶೀಲನೆಗೊಳಗಾಗಿದ್ದರು. ಈಗ ಇರಾನಿಯನ್ನರನ್ನು ಹೊರಹಾಕುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕ್ರಮದ ಮೇರೆಗೆ ಲೂಸಿಯಾನಾದ ಬಾಸಿಲ್‌ನಲ್ಲಿರುವ ವಲಸಿಗರ ಸೆರೆಮನೆಯಲ್ಲಿ ಅವರನ್ನು ಇರಿಸಲಾಗಿದೆ. ಆಕೆಯ ಬಗ್ಗೆ ಮಾಹಿತಿಗಾಗಿ ಕುಟುಂಬ ಹೆಣಗಾಡುತ್ತಿದೆ. ಅಮೆರಿಕದಲ್ಲಿ ದಶಕಗಳ ಬಳಿಕ ಇತರ ಇರಾನೀಯರನ್ನೂ ವಲಸೆ ಅಧಿಕಾರಿಗಳು ಬಂಧಿಸುತ್ತಿದ್ದಾರೆ. ಅಮೆರಿಕದ ಆಂತರಿಕ ಭದ್ರತಾ ಇಲಾಖೆ ಎಷ್ಟು ಜನರ ಬಂಧನವಾಗಿದೆ ಎಂಬ ಮಾಹಿತಿ ನೀಡಿಲ್ಲ. ಆದರೆ ಇರಾನ್ ಮೇಲಿನ ಅಮೆರಿಕದ ಮಿಲಿಟರಿ ದಾಳಿಗಳು ಇನ್ನಷ್ಟು ಜನರ ಬಂಧನವಾಗಬಹುದು ಎಂಬ ಸುಳಿವು ನೀಡಿದ್ದು ಅಮೆರಿಕದಲ್ಲಿರುವ ಇರಾನಿಯನ್ನರು ಆತಂಕಕ್ಕೊಳಗಾಗಿದ್ದಾರೆ.

## ಇತಿಹಾಸ ಸೃಷ್ಟಿಸಿದ ಬಿಹಾರ: ಮೊಬೈಲ್‌ನಲ್ಲಿ ಇ-ಮತದಾನ

**ಪಾಟ್ನಾ:** ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮೊಬೈಲ್ ಫೋನ್ ಆಧಾರಿತ ಇ-ವೋಟಿಂಗ್ ವ್ಯವಸ್ಥೆಯನ್ನು ಜಾರಿಗೆ ತಂದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಬಿಹಾರ ಪಾತ್ರವಾಗಿದೆ. ರಾಜ್ಯ ಚುನಾವಣಾ ಆಯುಕ್ತ ದೀಪಕ್ ಪ್ರಸಾದ್ ಮಾತನಾಡಿ, ಇ-ವೋಟಿಂಗ್‌ಗೆ ಅರ್ಹರಾಗಿರುವ ಮತದಾರರಲ್ಲಿ ಶೇಕಡಾ 70.20 ರಷ್ಟು ಜನರು ಈ ಹೊಸ ವ್ಯವಸ್ಥೆಯನ್ನು ಬಳಸಿದ್ದಾರೆ ಮತ್ತು ಶೇಕಡಾ 54.63 ರಷ್ಟು ಜನರು ಮತಗಟ್ಟೆಗಳಿಗೆ ಹೋಗಿ ತಮ್ಮ ಹಕ್ಕು ಚಲಾಯಿಸಿದ್ದಾರೆ.



ಪೂರ್ವ-ನೋಂದಣಿ ಮಾಡಿದ ಬಳಕೆದಾರರಿಗೆ ಮಾತ್ರ ಇ-ಮತದಾನ ವೇದಿಕೆಯ ಮೂಲಕ ಮತ ಚಲಾಯಿಸಲು ಅವಕಾಶವಿದೆ ಎಂದು ಅವರು ತಿಳಿಸಿದ್ದಾರೆ. ರಾಜ್ಯ ಚುನಾವಣಾ ಆಯೋಗದ ಪ್ರಕಾರ, ನಗರ ಪಂಚಾಯತ್ ಮತ್ತು ಮುನ್ಸಿಪಲ್ ಕಾರ್ಪೊರೇಷನ್ ಉಪಚುನಾವಣೆಗಳು ನಡೆದ ಜಿಲ್ಲೆಗಳಲ್ಲಿ ಪಾಟ್ನಾ, ಬಕ್ಸಾರ್, ಭೋಜ್‌ಪುರ, ಕೈಮೂರ್, ನಳಂದ, ಕತಿಹಾರ್, ಅರಾರಿಯಾ, ಸಹರ್ಸಾ, ಪೂರ್ವ ಚಂಪಾರಣ್ ಇತ್ಯಾದಿ ಸೇರಿವೆ.

ಮತ ಎಣಿಕೆ ಜೂನ್ 30 ರಂದು ನಡೆಯಲಿದೆ ಎಂದು ಆಯೋಗ ತಿಳಿಸಿದೆ. ಬಿಭಾ ಕುಮಾರಿ ಮೊದಲ ಇ-ಮತದಾರಪೂರ್ವ ಚಂಪಾರಣ್ ಜಿಲ್ಲೆಯ ಪಕ್ರಿಡಿಯಾಲ್ ನಿವಾಸಿ ಬಿಭಾ ಕುಮಾರಿ ಸ್ಥಳೀಯ ಸಂಸ್ಥೆ ಚುನಾವಣೆಯ ಸಂದರ್ಭದಲ್ಲಿ ಮೊಬೈಲ್ ಫೋನ್ ಮೂಲಕ ಮತ ಚಲಾಯಿಸಿದ ದೇಶದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ .

ಇದು ಅನುಕೂಲತೆ, ಭದ್ರತೆ ಮತ್ತು ಬಲವಾದ ಭಾಗವಹಿಸುವಿಕೆಯ ಸಂಕೇತವಾಗಿದೆ ಎಂದು ರಾಜ್ಯ ಚುನಾವಣಾ ಆಯೋಗ ಸಾಮಾಜಿಕ ಮಾಧ್ಯಮ ವೇದಿಕೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ. ದೀಪಕ್ ಪ್ರಸಾದ್ ಅವರ ಪ್ರಕಾರ, ಇ -ಮತದಾನವನ್ನು ಪರಿಚಯಿಸುವ ಉದ್ದೇಶ ಮತದಾನದ ಶೇಕಡಾವಾರು ಪ್ರಮಾಣವನ್ನು ಹೆಚ್ಚಿಸುವುದು ಮತ್ತು ಪ್ರಕ್ರಿಯೆಯನ್ನು ಹೆಚ್ಚು ಒಳಗೊಳ್ಳುವಂತೆ ಮಾಡುವುದು. ವೃದ್ಧರು, ದಿವ್ಯಾಂಗರು, ಗರ್ಭಿಣಿಯರು ಮತ್ತು ವಲಸಿಗರಂತಹ ಮತದಾನ ಕೇಂದ್ರಗಳನ್ನು ತಲುಪುವಲ್ಲಿ ಸವಾಲುಗಳನ್ನು ಎದುರಿಸುವ ಮತದಾರರಿಗಾಗಿ ಈ ವ್ಯವಸ್ಥೆಯನ್ನು ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ. ಪೂರ್ವ-ನೋಂದಾಯಿತ ಬಳಕೆದಾರರಿಗೆ ಮಾತ್ರ ಇ-ಮತದಾನ ವೇದಿಕೆಯ ಮೂಲಕ ಮತ ಚಲಾಯಿಸಲು ಅವಕಾಶವಿದೆ ಎಂದು ಅವರು ಹೇಳಿದ್ದಾರೆ.

## ಗಾಜಾದಲ್ಲಿ ಇಸ್ರೇಲ್ ಬಾಂಬ್ ದಾಳಿ: 81 ಮಂದಿ ಸಾವು



**ಗಾಜಾ:** ಗಾಜಾದ ಆರೋಗ್ಯ ಸಚಿವಾಲಯದ ಪ್ರಕಾರ, ಜಿಹೆಚ್ ಎಫ್ ಕಳೆದ ತಿಂಗಳು ಕಾರ್ಯಾಚರಣೆಯನ್ನು ಪ್ರಾರಂಭಿಸಿದಾಗಿನಿಂದ ಇಸ್ರೇಲ್ 549 ಕ್ಕೂ ಹೆಚ್ಚು ಪ್ಯಾಲೆಸ್ತೀನಿಯನ್ನರನ್ನು ನೆರವು ವಿತರಣಾ ಸ್ಥಳಗಳಲ್ಲಿ ಕೊಂದುಹಾಕಿದೆ.

ಉತ್ತರ ಗಾಜಾ ಪಟ್ಟಿಯಲ್ಲಿ ಇಸ್ರೇಲಿ ದಾಳಿಯಲ್ಲಿ ಇತರರೊಂದಿಗೆ ಸಾವನ್ನಪ್ಪಿದ ಇಬ್ಬರು ಹುಡುಗಿಯರಾದ ಸಿಲಾ ಮತ್ತು ಗಾಜಾ ನಗರದ ಅಲ್-ತುಫಾ ನೆರೆಹೊರೆಯಲ್ಲಿ ಜನನಿಬಿಡ ವಸತಿ ಕಟ್ಟಡದ ಮೇಲೆ ಇಸ್ರೇಲ್ ನಿನ್ನೆ ಶನಿವಾರ ನಡೆಸಿದ ಬಾಂಬ್ ದಾಳಿಯಲ್ಲಿ ಒಂಬತ್ತು ಮಕ್ಕಳು ಸೇರಿದಂತೆ ಕನಿಷ್ಠ 20 ಪ್ಯಾಲೆಸ್ತೀನಿಯರು ಮೃತಪಟ್ಟಿದ್ದಾರೆ. ಗಾಜಾದ ಆರೋಗ್ಯ ಸಚಿವಾಲಯದ ಪ್ರಕಾರ, ಶನಿವಾರ ಗಾಜಾದಾದ್ಯಂತ ವಿವಿಧ ದಾಳಿಗಳಲ್ಲಿ ಕನಿಷ್ಠ 81 ಪ್ಯಾಲೆಸ್ತೀನಿಯನ್ನರು ಮೃತಪಟ್ಟಿದ್ದಾರೆ.

## ಭಾರತ ಮತ್ತೆ ದಾಳಿ ಮಾಡಿದರೆ ತಕ್ಕ ಉತ್ತರ ನೀಡುತ್ತೇವೆ

**ಇಸ್ಲಾಮಬಾದ್:** ಯಾವುದೇ ಪ್ರಚೋದನೆಯಿಲ್ಲದೆ ಭಾರತವು ಎರಡು ಬಾರಿ ದೇಶದ ಮೇಲೆ ದಾಳಿ ಮಾಡಿದೆ ಎಂದು ಹೇಳಿರುವ ಪಾಕಿಸ್ತಾನ ಸೇನಾ ಮುಖ್ಯಸ್ಥ ಅಸಿಮ್ ಮುನೀರ್ ಅವರು, ಇದನ್ನು ಕಾರ್ಯತಂತ್ರದ ದೂರದೃಷ್ಟಿಯ ಕೊರತೆ ಎಂದು ಕರೆದಿದ್ದಾರೆ. ಪ್ರಾದೇಶಿಕ ಉದ್ವಿಗ್ನತೆ ಹೆಚ್ಚಾಗುತ್ತಿರುವುದಕ್ಕೆ ಭಾರತವನ್ನು ದೂಷಿಸಿದ ಮುನೀರ್, ಭವಿಷ್ಯದಲ್ಲಿ ಭಾರತದ ಯಾವುದೇ ಆಕ್ರಮಣಕ್ಕೆ ನಿರ್ಣಾಯಕ ಪ್ರತಿಕ್ರಿಯೆ ನೀಡುವುದಾಗಿ ಪ್ರತಿಜ್ಞೆ ಮಾಡಿದ್ದಾರೆ.

ಕರಾಚಿಯಲ್ಲಿರುವ ಪಾಕಿಸ್ತಾನ ನೌಕಾ ಅಕಾಡೆಮಿಯಲ್ಲಿ ಮಾತನಾಡಿದ ಮುನೀರ್, ಪಾಕಿಸ್ತಾನವನ್ನು ನಿವ್ವಳ ಪ್ರಾದೇಶಿಕ ಸ್ಥಿರೀಕಾರಕ ಎಂದು ಕರೆದಿದ್ದು, ಸ್ಲಾಮಾಬಾದ್ ಪ್ರಚೋದಿತವಲ್ಲದ ಭಾರತೀಯ ಮಿಲಿಟರಿ ಆಕ್ರಮಣಕ್ಕೆ ದೃಢವಾಗಿ ಪ್ರತಿಕ್ರಿಯಿಸಿದೆ. ಪ್ರಚೋದನೆಗಳ ಹೊರತಾಗಿಯೂ, ಪಾಕಿಸ್ತಾನ ಸಂಯಮ ಮತ್ತು ಪ್ರಬುದ್ಧತೆಯನ್ನು ಪ್ರದರ್ಶಿಸಿತು, ಪ್ರಾದೇಶಿಕ ಶಾಂತಿಗೆ ತನ್ನ ಬದ್ಧತೆಯನ್ನು ಪುನರುಚ್ಚರಿಸಿತು ಎಂದು ಅವರು ಹೇಳಿದರು. ಪಾಕಿಸ್ತಾನ ಭಯೋತ್ಪಾದನೆ ನಿರ್ಮೂಲನೆಗೆ ಹತ್ತಿರವಾಗುತ್ತಿದ್ದಂತೆಯೇ ಭಾರತವು ಈ ಪ್ರದೇಶದಲ್ಲಿ ಉದ್ದೇಶಪೂರ್ವಕವಾಗಿ ಉದ್ವಿಗ್ನತೆಯನ್ನು ಸೃಷ್ಟಿಸುತ್ತಿದೆ.ತಮ್ಮ ಭಾಷಣದಲ್ಲಿ ಮುನೀರ್ ಕಾಶ್ಮೀರ ವಿಷಯವನ್ನು ಪ್ರಸ್ತಾಪಿಸಿ, ಇಂತಹ ಸಮಯದಲ್ಲಿ, ಭಾರತದ ಅಕ್ರಮ ಆಕ್ರಮಣದ ವಿರುದ್ಧ ಹೋರಾಡುತ್ತಿರುವ ನಮ್ಮ ಕಾಶ್ಮೀರಿ ಸಹೋದರರ ತ್ಯಾಗಗಳನ್ನು ನಾವು ನೆನಪಿಸಿಕೊಳ್ಳಬೇಕು ಎಂದು ಕರೆ ನೀಡಿದರು. ವಿಶ್ವಸಂಸ್ಥೆಯ ನಿರ್ಣಯಗಳು, ಕಾಶ್ಮೀರಿ ಜನರ ಆಕಾಂಕ್ಷೆಗಳಿಗೆ ಅನುಗುಣವಾಗಿ ಕಾಶ್ಮೀರ ಸಮಸ್ಯೆಯ ನ್ಯಾಯಯುತ ಪರಿಹಾರಕ್ಕಾಗಿ ಪಾಕಿಸ್ತಾನ ಬಲವಾದ ಪ್ರತಿಪಾದಕವಾಗಿದೆ.



### ಕಾಶ್ಮೀರ ನಮ್ಮ ಕಂಠನಾಳ

ಅದು ನಮ್ಮ ಕಂಠನಾಳವಾಗಿಯೇ ಉಳಿಯುತ್ತದೆ. ನಾವು ಅದನ್ನು ಮರೆಯುವುದಿಲ್ಲ ಎಂದು ವಿದೇಶದಲ್ಲಿರುವ ಪಾಕಿಸ್ತಾನಿ ವಲಸೆಗಾರರನ್ನು ಉದ್ದೇಶಿಸಿ ಮಾತನಾಡುತ್ತಾ ಅವರು ಹೇಳಿದ್ದರು.


### ● ಇಂಗ್ಲೀಷ್ ಬಾರದ, ಯಾರೂ ಪರಿಚಯವಿಲ್ಲದ ಅಮೆರಿಕಕ್ಕೆ ಹೋಗಿದ್ದ ಭಾರತದ ಯುವತಿ ನ್ಯೂಜೆರ್ಸಿಯಲ್ಲಿ ಕಾಣೆ

# ಭಾರತದಿಂದ ಅಮೆರಿಕಕ್ಕೆ ಹೋಗಿದ್ದ ಯುವತಿಯೊಬ್ಬಳು ನಾಪತ್ತೆ

**ವಾಷಿಂಗ್ಟನ್:** ಅಮೆರಿಕದಲ್ಲಿ ತಾನು ಮದುವೆ ಆಗುತ್ತಿರುವುದಾಗಿ ಹೇಳಿ ಇತ್ತೀಚೆಗೆ ಅಮೆರಿಕಕ್ಕೆ ಆಗಮಿಸಿದ್ದ ಭಾರತದ ಸಿಮ್ರನ್ ಎಂಬ ಭಾರತೀಯ ಯುವತಿಯೊಬ್ಬಳು ಏಕಾಏಕಿ ನಾಪತ್ತೆಯಾಗಿರುವ ವಿಚಾರ ತಡವಾಗಿ ಬೆಳಕಿಗೆ ಬಂದಿದೆ. ವಿಮಾನ ನಿಲ್ದಾಣದಲ್ಲಿ ಇಮಿಗ್ರೇಷನ್ ವಿಭಾಗದಲ್ಲಿ ಆಕೆ ಅಮೆರಿಕಕ್ಕೆ ಬಂದಿರುವ ಕಾರಣವನ್ನು ತಿಳಿಸಿದ್ದು, ನ್ಯೂಜೆರ್ಸಿಯಲ್ಲಿ ನಡೆಯಲಿರುವ ವಿವಾಹವೊಂದರಲ್ಲಿ ಭಾಗವಹಿಸಲು ಆಗಮಿಸಿರುವುದಾಗಿ ಹೇಳಿದ್ದಳು. ಆದರೆ, ವಿಮಾನ ನಿಲ್ದಾಣದಿಂದ ಆಚೆ ಹೋದ ಆಕೆ ನಾಪತ್ತೆಯಾಗಿದ್ದಾಳೆ.

ವಿಪರ್ಯಾಸವೆಂದರೆ, ಆಕೆಗೆ ಇಂಗ್ಲೀಷ್ ಬರುವುದಿಲ್ಲ. ಅಲ್ಲದೆ, ಆಕೆಗೆ ಅಲ್ಲಿ ಯಾರೂ ಸಂಬಂಧಿಕರೂ ಇಲ್ಲ. ಯಾರೂ ಗೊತ್ತಿಲ್ಲದ ಊರಿನಲ್ಲಿ, ಇಂಗ್ಲೀಷ್ ಗೊತ್ತಿಲ್ಲದೇ ಆಕೆ ಎಲ್ಲಿ ಹೋದಳೋ, ಆಕೆಗೇನಾಯಿತೋ ಎಂಬುದು ಇನ್ನೂ ನಿಗೂಢವಾಗಿಯೇ ಇದೆ. ಆಕೆ, ವಿಮಾನ ನಿಲ್ದಾಣದಿಂದ ಹೊರಹೋದ ನಂತರ ಆಕೆ ತಲುಪಬೇಕಾದ ಜಾಗವನ್ನು ತಲುಪದೇ ಇರುವುದನ್ನು ಪೊಲೀಸರು ಪ್ರಾಥಮಿಕ ತನಿಖೆಯಿಂದ ತಿಳಿದ್ದಾರೆ. ಈ ಕುರಿತಂತೆ, ಲಿಂಡನ್ ವರ್ಲ್ಡ್ ಪೊಲೀಸ್ ಠಾಣೆ ಸಿಬ್ಬಂದಿ ಸ್ವಯಂ ಪ್ರೇರಿತ ದೂರು ದಾಖಲಿಸಿದ್ದಾರೆ. ಆಕೆಯ ಪತ್ತೆಗಾಗಿ, ಜೋ ಟೊಮಾಸೆಟಿ ಅಧಿಕಾರಿಯನ್ನು ನೇಮಿಸಲಾಗಿದೆ.

ಭಾರತ ಸೇರಿದಂತೆ ಅನೇಕ ದೇಶಗಳ ಜನರು ಅಮೆರಿಕಕ್ಕೆ ಹೋಗಿ ಅಲ್ಲಿ ನೆಲೆಸುವ ಅವಕಾಶಕ್ಕಾಗಿ ಹಾತೊರೆಯುತ್ತಾರೆ. ಆದರೆ, ಈಗಿರುವ ಟ್ರಂಪ್ ಆಡಳಿತದಿಂದ ವೀಸಾ ಹಾಗೂ ವಲಸೆಗಳ ನಿಯಮಗಳ ತಿದ್ದುಪಡಿ ಬಗ್ಗೆ ಹಲವಾರು ಚರ್ಚೆಗಳು ನಡೆಯುತ್ತಿವೆ.



- ಭಾರತದಿಂದ ಅಮೆರಿಕಕ್ಕೆ ಹೋಗಿದ್ದ ಯುವತಿಯೊಬ್ಬಳು ನಾಪತ್ತೆ.
- ನ್ಯೂಜೆರ್ಸಿ ವಿಮಾನ ನಿಲ್ದಾಣದಲ್ಲಿ ಬಂದಿಳಿದಿದ್ದಾಗ ಅಮೆರಿಕದಲ್ಲಿ ಮದುವೆಯಾಗಲು ಬಂದಿದ್ದಾಗಿ ಹೇಳಿದ್ದ ಸಿಮ್ರನ್.
- ಆದರೆ, ವಿಮಾನ ನಿಲ್ದಾಣದಿಂದ ಆಚೆ ಹೋದ ನಂತರ ಆಕೆ ನಾಪತ್ತೆ.

### ಪೊಲೀಸರ ಪ್ರಕಟಣೆ

ಸಿಸಿಟಿವಿಗಳನ್ನು ಚೆಕ್ ಮಾಡಿ ಹಾಗೂ ಆಕೆಯ ಪಾಸ್ ಪೋರ್ಟ್ ಮುಂತಾದ ದಾಖಲೆಗಳಿಂದ ಆಕೆಯ ಫೋಟೋ ಮತ್ತಿತರ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಆಕೆ ಐದು ಅಡಿ ನಾಲ್ಕು ಇಂಚು ಇದ್ದು, ಆಕೆ 68 ಕೆಜಿ ಇದ್ದಾಳೆ. ಹಣೆಯ ಎಡಭಾಗದಲ್ಲಿ ಮಚ್ಚೆಯಿದೆ. ಈಕೆ ಎಲ್ಲಾದರೂ ಕಂಡುಬಂದರೆ ಆಕೆಯನ್ನು ಹುಡುಕಿಕೊಡಿ ಎಂದು ನ್ಯೂಜೆರ್ಸಿ ಪೊಲೀಸರು ಆಕೆಯ ಕುರಿತಾಗಿ ತಮ್ಮ ಠಾಣೆಯ ನಂಬರ್ ನೀಡಿ ಜಾಹೀರಾತು ಕೊಟ್ಟಿದ್ದಾಳೆ.

**ಸ್ವಯಂ ಪ್ರೇರಿತ ದೂರು ದಾಖಲು**

### ಫ್ರೀ ಟಿಕೆಟ್ ದುರುಪಯೋಗ?

ಪ್ರಾಥಮಿಕ ತನಿಖೆಯಲ್ಲಿ ಆಕೆ ಅಮೆರಿಕದಲ್ಲಿ ಯಾರನ್ನೂ ಮದುವೆಯಾಗುವ ಉದ್ದೇಶವೇ ಇರಲಿಲ್ಲ ಎಂಬ ಅನುಮಾನವನ್ನು ಪೊಲೀಸರು ವ್ಯಕ್ತಪಡಿಸಿದ್ದಾರೆ. ಅಮೆರಿಕದಲ್ಲಿ ಮದುವೆಯಾಗಲು ಬರುವ ವಧುವಿಗೆ ಫ್ರೀ ಟಿಕೆಟ್ ಇರುತ್ತದೆ. ಬಹುಶಃ ಆಕೆ ಆ ಸೌಲಭ್ಯವನ್ನು ದುರುಪಯೋಗ ಮಾಡಿಕೊಂಡಿರಬಹುದು, ಫ್ರೀ ಟಿಕೆಟ್‌ನಲ್ಲಿ ಆಕೆ ಅಮೆರಿಕ ಟೂರ್ ಮಾಡಲು ನಿರ್ಧರಿಸಿದ್ದಾಳೆ.

### ಸಂಬಂಧಿಕರ ಕಾಂಟ್ಯಾಕ್ಟ್ ಆಗಿಲ್ಲ

ದುರಾದೃಷ್ಟವಶಾತ್, ಆಕೆಯು ಭಾರತದ ವಿಳಾಸ ನೀಡಿದ್ದು ಆ ವಿಳಾಸದಲ್ಲಿರುವ ಯಾರನ್ನೂ ಪತ್ತೆ ಮಾಡಲು ಅಮೆರಿಕದ ತನಿಖಾಧಿಕಾರಿಗಳಿಗೆ ಇದುವರೆಗೆ ಸಾಧ್ಯವಾಗಿಲ್ಲ ಎಂಬುದು ಬೆಳಕಿಗೆ ಬಂದಿದೆ. ಹಾಗಾಗಿ, ಆಕೆಯ ಕೇಸ್ ಮತ್ತಷ್ಟು ಜಟಿಲವಾಗಿದೆ. ಅಮೆರಿಕದಲ್ಲೂ ಯಾರೂ ಆಕೆಗೆ ಪರಿಚಯವಿಲ್ಲ, ಭಾರತದಲ್ಲೂ ಆಕೆಯ ಸಂಬಂಧಿಕರನ್ನು ಸಂಪರ್ಕಿಸಲು ಸಾಧ್ಯವಾಗುತ್ತಿಲ್ಲ. ಆಕೆಯನ್ನು ಹೇಗೆ ಪತ್ತೆ ಮಾಡುವುದು ಎಂಬ ಸಂದಿಗ್ಧ ಸ್ಥಿತಿಗೆ ಪೊಲೀಸರು ಸಿಲುಕಿದ್ದಾರೆ.

